# ಅಪರಂಜಿ

ತಿಳಿನಗೆಯ ಕಾರಂಜಿ

ನವಂಬರ್–2024




ಬಿಡಿ ಪ್ರತಿ: ರೂ. 10/–

Ravi Graphics
OFFSET PRINTERS

Bringing colours alive

*What we specialize into :*

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

bag factory
bagfactory.co.in

Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in


ಆಲಸ್ಯ ಸುಟ್ ಹಾಕಿ
ಚಿಂತೆಯ ಬಿಟ್ ಹಾಕಿ
ಆಸೆಯ ಕಟ್ ಹಾಕಿ
ಹೊಸತನ್ನು ಹುಟ್ ಹಾಕಿ
ಸಿಡಿಸಿರಿ ಪಟ್ ಪಟ್ ಪಟಾಕಿ
ಹಾರಿಸಿ ತಿಳಿ ಹಾಸ್ಯ ಚಟಾಕಿ
ದೀಪಾವಳಿ
ಶುಭಾಶಯಗಳು

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2024
**RNI NO. KAR-KAN/2005/15457**

www.mallige.com

NABH ACCREDITED · PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

**CARING AND HEALING**

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 42
ಸಂಚಿಕೆ – 02
ನವೆಂಬರ್– 2024

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅಪರಂಜಿಯ @ 41 | | 5 |
| ಅಪರಂಜಿ ಚಾಲೀ–ಸಾ | ರಾಂಕಿ ಬೆಳ್ಳೂರ್ | 7 |
| ಎಳೆಗರುಂ ಎತ್ತಾಗದೆ? | ಅಣಕು ರಾಮನಾಥ್ | 9 |
| ಅಜ್ಜನ ಕೋಲಿದು......... | ಗುಂಡುರಾವ್ ದೇಸಾಯಿ | 11 |
| ಹಳ್ಳಿಯಾದರೇನು ಸಿವಾ ?.. | ವಿ.ವಿಜಯೇಂದ್ರ ರಾವ್ | 15 |
| ಹೆಸರು–ಹೆಸರಿಗೊಂದು ಕೊಂಬು | ಕೆ.ಎಸ್. ಸೋಮೇಶ್ವರ | 17 |
| ಒಂದು ಕತೆ, ನೂರು ವ್ಯಥೆ | ಎಚ್.ಗೋಪಾಲಕೃಷ್ಣ | 21 |
| ಚಂದ್ರಚೂಡ್ ಎಫೆಕ್ಟ್ | ಇ.ಆರ್. ರಾಮಚಂದ್ರನ್ | 26 |
| ತುಂತುರು | ದಂನಆ | 29 |
| ಕಂಕುಳಲ್ಲೇ ಕೂಸು ಇಟ್ಕೊಂಡು.... | ಸುಮನಾ | 30 |
| ಪಾತಾಳದಲ್ಲಿ ಪಾಪಯ್ಯ | ಕೊರವಂಜಿಯಿಂದ | 32 |
| ದಾಂಪತ್ಯ! ಗೀತಾ | ಗಣೇಶ ಹೆಗ್ಗಡೆ | 35 |
| ನಿಶ್ಯಬ್ದ ಸಂಗೀತ | ಅಪರಂಜಿಯಿಂದ | 38 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,
ಒಳಪುಟಗಳು : ರಾಂಕಿ ಬೆಳ್ಳೂರ್, ರಘುಪತಿ ಶೃಂಗೇರಿ

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*





# ಅಪರಂಜಿ ಕಿಡಿ

● ಪ್ರಕಾಶ್

ಜಗತ್ತಿನಲ್ಲೆಲ್ಲ, ಉದ್ಯಮಿ, ದಾನಿ, ಅಲ್ಲದೆ ಅಪಾರ
ಮಾನವೀಯತೆಯಿಂದ ಬೆಳಗುತ್ತಿದ್ದ ಟಾಟಾ ಎಂಬ ಮಹಾನ್
ಚೇತನಕ್ಕೆ ಅಪರಂಜಿಯ ವಿದಾಯ

***

ಭಾರಿ ಸಂಚಾರ ದಟ್ಟಣೆಯಲ್ಲಿ ಸಿಲುಕಿದ ಜನ

ಬೆಂಗಳೂರು ಸುದ್ದಿ

***

ಪಾಪ,. ನಗರದ ಜನರು ಜೀವನದ ಒಂದು ಭಾಗವನ್ನು
ರಸ್ತೆಗಳಲ್ಲೇ ಕಳೆಯಬೇಕು

***

ಸೆಂಟ್ರಲ್ ಜೈಲ್ ಬಡಾವಣೆ; ಮೂಲ ಸೌಕರ್ಯದ ಕೊರತೆ

ಪತ್ರಿಕೆ

ಯಾಕೋ ನಮಗೆ ಭಯವಾಗುತ್ತೆ ?

***

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ;
ರಾಜಕೀಯ ಗುಂಗು

ಪತ್ರಿಕೆ

ನಾವೇಕೆ ಮಹಾರಾಷ್ಟ್ರದ ಪದ್ಧತಿಯನ್ನು ಆರಂಭಿಸಬಾರದು?

***

ಯುನೆಸ್ಕೋ ಮಾನ್ಯತೆ ಪಡೆದ ಜಾನಪದ ಪರಿಷದ್‌ಗೆ
ನಮ್ಮ ಹೃತ್ಪೂರ್ವಕ ಅಭಿನಂದನೆಗಳು

***

ಕೋವಿಡ್ ಅಕ್ರಮದ ಬಗ್ಗೆ ಎಸ್.ಐ.ಟಿ ತನಿಖೆ ?

ಪತ್ರಿಕೆ

ಸದ್ಯ, ಇದು ವೈರಲ್ ಆಗದಿದ್ದರೆ ಒಳ್ಳೆಯದು

***

ಮಳೆರಾಯನಿಗೂ ಕ್ರಿಕೆಟ್ ಕ್ರೀಡೆಗೂ ಇರುವ ಅಪವಿತ್ರ ಮೈತ್ರಿಯ
ಬಗ್ಗೆ ವೈಜ್ಞಾನಿಕ ಸಂಶೋಧನೆ ಯಾಕೆ ಮಾಡಬಾರದು??

***

ಕಾವೇರಿಯ ಆರನೆಯ ಹಂತ ಉದ್ಘಾಟನೆ

ಸುದ್ದಿ

ತಮಿಳುನಾಡಿನಲ್ಲಿ ಕಾವೇರದಿದ್ದರೆ ಸಾಕು ?

***

**ಶಿವಕುಮಾರ್**

## "ನಮ್ಮ ನಿಮ್ಮಲ್ಲಿ"

ಈ ಪತ್ರಿಕೆ ನಿಮ್ಮ ಕೈಸೇರುವ ಹೊತ್ತಿಗೆ , ತಾವೇ ಅಗ್ರಗಣ್ಯ ರಾಷ್ಟ್ರ ಎಂದು ಬೀಗುತ್ತಿರುವ ಅಮೆರಿಕೆಯ ಜನರ ಭವಿಷ್ಯ ನಿರ್ಧಾರವಾಗಿ ಹೋಗಿರುತ್ತೆ. ಬಹು ವಿಚಿತ್ರ ದೇಶ ಕಣ್ರೀ ಈ ಅಮೆರಿಕಾ. 2021ರ ಜನವರಿ 6ನೆಯ ತಾರೀಖು ಅಮೆರಿಕೆಯ ಕ್ಯಾಪಿಟೋಲ್ (ನಮ್ಮ ಪಾರ್ಲಿಮೆಂಟ್ ಭವನಕ್ಕೆ ಸರಿಸಮ) ಮೇಲೆ ತಾನೇ ಅಧ್ಯಕ್ಷನಾಗಿದ್ದರೂ ಸಹ ತನ್ನ ಸಹಚರ ಗೂಂಡಾಗಳನ್ನು ಬಿಟ್ಟು ಹಾವಳಿ ಎಬ್ಬಿಸಿದ್ದ ಟ್ರಂಪ್, ಈ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ನಾಯಕನಾಗಿ ಚುನಾವಣೆಗೆ ನಿಂತಿದ್ದಾನೆ. ಕಳೆದ ನಾಲ್ಕುವರ್ಷಗಳಿಂದ ಅವನ ಮೇಲೆ ನೂರಾರು ಮೊಕದ್ದಮೆಗಳು ಜಾರಿಯಾಗಿದ್ದರೂ ಅಲ್ಲಿನ ನ್ಯಾಯಾಂಗ ವ್ಯವಸ್ಥೆ ಅವನ ಮೇಲಿನ ದೂರುಗಳನ್ನು ನಿರ್ಧರಿಸುವುದರಲ್ಲಿ ಇನ್ನೂ ಮೀನಾಮೇಷ ನೋಡುತ್ತಿರುವಂತೆ ಕಾಣುತ್ತಿದೆ. ಇಂತಹ ಕಳಂಕ ತುಂಬಿದ ಎದುರಾಳಿಯ ಮುಂದೆ ಡೆಮೊಕ್ರಾಟಿಕ್ ಪಕ್ಷದ ಹಾಗೂ ಭಾರತದ ಮೂಲದ ಕಮಲಾ ಹ್ಯಾರಿಸ್ ಸುಲಭವಾಗಿ ಮೇಲುಗೈ ಸಾಧಿಸ ಬಹುದು ಎಂದು ಮೇಲು ನೋಟಕ್ಕೆ ಕಾಣುತ್ತದಲ್ಲವೇ. ಆದರೆ ವಾಸ್ತವದಲ್ಲಿ ಇಬ್ಬರೂ ಚುನಾವಣೆಗೆ ಮುಂಚಿನ ನಿರೀಕ್ಷಣಾ ಮತಗಳಲ್ಲಿ ಒಬ್ಬರಿಗೊಬ್ಬರು ಸರಿಸಮವಾಗಿ ನಿಂತಿದ್ದಾರಂತೆ.

ಇದೇಕೆ ಹೀಗೆ? ಜಗತ್ತಿನ ಅತ್ಯಂತ ಹಳೆಯ ಡೆಮಾಕ್ರಸಿಯಲ್ಲಿ ಜನಾಭಿಪ್ರಾಯ ಇಷ್ಟು ಏರುಪೇರೇ ಅಂತ ನನಗನ್ನಿಸಿತ್ತು. ಮೊನ್ನೆ ಅಮೆರಿಕೆಯ ಖ್ಯಾತ ವಾರಪತ್ರಿಕೆ ನ್ಯೂಯಾರ್ಕರ್ ನಲ್ಲಿ ಆ್ಯಡಮ್ ಗೋಪ್ನಿಕ್ ಎಂಬ ಕಾಲಮ್ನಿಸ್ಟ್ ಈ ಕುರಿತು ಒಂದು ಅರ್ಥಗರ್ಭಿತವಾದ ವಿವರಣೆಯನ್ನು ನೀಡಿದ್ದ. ಸಂಕ್ಷಿಪ್ತವಾಗಿ ಆತ ಹೀಗೆನ್ನುತ್ತಾನೆ.

"ಒಂದು ವೇಳೆ ಟ್ರಂಪ್ ಗೆದ್ದರೆ, ಅವನ ಆಡಳಿತ ಹೇಗಿರುತ್ತೆ ಸ್ವಲ್ಪ ಗಮನಿಸಿ. ಮೊಟ್ಟಮೊದಲಿಗೆ ಅವನ ಕೈ ಕೆಳಗಿನ ಅಧಿಕಾರಿಗಳು ಅವನಿಗಿಂತ ಹೆಚ್ಚಾಗಿ ಬಲ ಪಂಥಕ್ಕೂ ಬಲಗಡೆ ಇರುವ ಟ್ರಂಪ್ ಪಂಥದ ಸೂತ್ರಗಳನ್ನು ಜಾರಿಗೆ ತರುವಲ್ಲಿ ಉತ್ಸುಕರಾಗಿರುತ್ತಾರೆ. ಹಾಗೆಂದರೆ ಖಾಸಗೀ ಗೂಂಡಾ ಪಡೆಗಳನ್ನು ಬಳಸಿ ಪ್ರತಿಪಕ್ಷದ ನೇತಾರರ ಮೇಲೆ ಸೇಡು ತೀರಿಸಿಕೊಳ್ಳುವುದಂತೂ ಖಂಡಿತ. ಜನವರಿ 6 ರಂದು ಗೂಂಡಾಗಿರಿ ಮಾಡಿ ಇಂದು ಜೈಲಿನಲ್ಲಿರವವರನ್ನು ಟ್ರಂಪ್ ತನ್ನ ಅಧ್ಯಕ್ಷತನದ ಬಲದಿಂದ ಬಿಡುಗಡೆ ಮಾಡಿ, ಅವರನ್ನು ಸ್ವಾತಂತ್ರ ಹೋರಾಟಗಾರರೆಂದು ಘೋಷಿಸಿ, ಗೌರವಿಸುವುದು ಬಹು ಮಟ್ಟಿಗೆ ಸಾಧ್ಯ. ತನಗೆ ವಿರುದ್ಧವಾದ ಟಿ.ವಿ.ಛಾನೆಲ್ಲುಗಳ ಮೇಲೆ ಕಾನೂನು ಬಳಕೆಯ ಭಯವನ್ನು ಹೇರಿ ಪಳಗಿಸುವುದು ನಮ್ಮ ಕಣ್ಣಮುಂದೆಯೇ ನಡೆಯಬಹುದು.

ಟ್ರಂಪ್ ಆಡಳಿತಕ್ಕೆ ಬಂದರೆ ಉಕ್ರೈನ್, ರಷ್ಯಾ ಕೈ ಸೇರಿದಂತೆಯೇ. ನ್ಯಾಟೋಗೆ ಅಮೆರಿಕೆಯ ಒತ್ತಾಸೆ ಬಹುಮಟ್ಟಿಗೆ ಕುಂದುತ್ತದೆ. ಯಾವುದೇ ಪ್ರಜಾಪ್ರಭುತ್ವದಲ್ಲಿ ಇಂದು ನಿಷಿದ್ಧವೆನ್ನಬಹುದಾದ ಸಂಗತಿಗಳು ಮುಂದೆ ಸಮಾಜ ಒಪ್ಪುವಂತಹ ಬದಲಾವಣೆಗಳಾಗುವುದು ಸಹಜ. ಟ್ರಂಪ್ ನಂತಹ ವಿವೇಚನೆಯಿಲ್ಲದ, ವಲಸೆಗಾರರ ಮೇಲೆ ಕ್ರೌರ್ಯವನ್ನು ಹೇರುವ ಅಧ್ಯಕ್ಷರು ಹಿಂದೆಯೂ ಇದ್ದರು ಎಂಬುದನ್ನು ನೆನಪಿನಲ್ಲಿಡಬೇಕು. ಅಮೆರಿಕದ ಏಳನೆಯ ಅಧ್ಯಕ್ಷನಾಗಿದ್ದ ಆ್ಯಂಡ್ರೂ ಜಾಕ್ಸನ್, 1830 ರಲ್ಲಿ ಅಮೆರಿಕದ ಮೂಲನಿವಾಸಿಗಳನ್ನು ನಿರ್ನಾಮಮಾಡುತ್ತಾನೆ ಅಂತ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನಂತೆ.

ಟ್ರಂಪ್‌ನ ರಾಜಕಾರಣ, ಅಸಹ್ಯ, ಮೂಢತನದ ಪರಮಾವಧಿ, ಅಹಂಕಾರದ ಪ್ರತೀಕ ಎಂದು ನೀವು ಹೇಳಬಹುದು. ಆದರೆ ಅಮೆರಿಕದ ಬಹುಪಾಲು ಜನ ಈ ಎಲ್ಲ ಗುಣಗಳನ್ನು ಹೊಂದಿರುವ ಕೂಪಮಂಡೂಕಗಳು ಎಂಬುದನ್ನು ಮರೆಯಬಾರದು. ಪ್ರಜಾಪ್ರಭುತ್ವ ಎಂಬುದು ಸಮಾಜದ ಒಂದು ಕನ್ನಡಿ. ತಾನು ಕಂಡದ್ದನ್ನು ಅದು ಪ್ರತಿಬಿಂಬಿಸುತ್ತದೆ"  ಎನ್ನುತ್ತಾನೆ ಗೋಪ್ನಿಕ್.


ಮೊನ್ನೆ ನನ್ನ ಅಕ್ಕನ ಮಗಳು ಅಮೆರಿಕಾ ಪ್ರವಾಸ ಮುಗಿಸಿ ಹಿಂತಿರುಗಿ ಬಂದಿದ್ದಳು. "ಅಮೆರಿಕಾ ಹೇಗಿದೆ?" ಅಂತ ಕೇಳಿದೆ.

"ಬಾಸ್ಟನ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ನಲ್ಲಿ ಟ್ಯಾಕ್ಸಿಯಿಂದ ಇಳಿದು ಡಿಪಾರ್ಚರ್ ಏರಿಯಾ ಸೇರಬೇಕಾದರೆ ಒಂದು ಕಾಲು ಸೇತುವೆಯ ಮೇಲೆ ನಡೆದು ಹೋಗಬೇಕು. ನಡೆಯುತ್ತಿದ್ದಾಗ ಸೇತುವೆಯ ಕೆಳಗೆ ಕಣ್ಣು ಹಾಯಿಸಿದೆ. ಧಾರಾವಿ ಸ್ಲಮ್ ಆದರೂ ವಾಸಿ. ಅದಕ್ಕೂ ಹೆಚ್ಚು ಹೆಂಗಸರು ಮಕ್ಕಳು ಅಲ್ಲಿ ಜೋಪಡಿಗಳನ್ನು ಹಾಕಿಕೊಂಡು ನೆಲೆಸಿದ್ದರು. "ಯಾರು ಈ ಎಲ್ಲಾ ಜನ?" ಅಂತ ನನ್ನ ಅಮೆರಿಕನ್ ಗೆಳತಿಯನ್ನು ಕೇಳಿದೆ. "ಇವರೆಲ್ಲಾ ನಮ್ಮ ದಕ್ಷಿಣದ  ಗಡಿಯನ್ನು ದಾಟಿ ಬಂದಿರುವ ದಕ್ಷಿಣ ಅಮೆರಿಕಾ ವಲಸೆಗಾರರು. ಗಡಿ ರಾಜ್ಯಗಳು ಇವರ ಭಾರವನ್ನು ಹೊರಲಾರದೆ ಇಲ್ಲಿಗೆ ಅವರನ್ನೆಲ್ಲಾ ಬಸ್‌ಗಳ ಮೂಲಕ ರವಾನಿಸಿದ್ದಾರೆ. "ಅಂತ ಉತ್ತರಿಸಿದಳು." ನಿಮ್ಮ ಸರ್ಕಾರ ಈ ಸಮಸ್ಯೆನ ಪರಿಹರಿಸುಕ್ಕೆ ಪ್ರಯತ್ನಿಸಿಲ್ಲವೇ? ' ನನ್ನ ಪ್ರಶ್ನೆ.

"ಬೈಡೆನ್ ಒಂದು ಸಮಗ್ರ ಪರಿಹಾರ ಸೂಚಿಸಿದ್ದ. ಸಮಸ್ಯೆ ಪರಿಹಾರವಾದರೆ ಡೆಮೊಕ್ರಾಟಿಕ್ ಪಕ್ಷಕ್ಕೆ ಅನುಕೂಲವಾಗುತ್ತೆ ಎಂಬ ಕಾರಣದಿಂದ ಟ್ರಂಪ್ ಅದನ್ನು ತನ್ನ ಪಕ್ಷಕ್ಕೆ ಹೇಳಿ ತಿರಸ್ಕರಿಸುವಂತೆ ಮಾಡಿದ." ಅಂತ ಉತ್ತರಿಸಿದಳು.

ಇದನ್ನೆಲ್ಲಾ ನೋಡಿದರೆ ಕೈಲಾಸಮ್ ಹೇಳಿದಂತೆ ನಮ್ಮೂರೇ ವಾಶಿ ಅನ್ನಿಸುತ್ತೆ ಅಲ್ಲವೆ?

●



# ಅಪರಂಜಿಯ 41ರ ಹಬ್ಬದ ಮಧುರ ಕ್ಷಣಗಳ ಮೆಲುಕು

ಅಪರಂಜಿಯ 41ರ ಹುಟ್ಟು ಹಬ್ಬದ ಪ್ರಯುಕ್ತ ಕೊರವಂಜಿ ಅಪರಂಜಿ ಟ್ರಸ್ಟ್ 20 ಅಕ್ಟೋಬರ್ 2024 ಭಾನುವಾರದಂದು ಡಾ.ಸಿ.ಅಶ್ವಥ್ ಕಲಾ ಭವನದಲ್ಲಿ ಕೈಲಾಸಂರ ಹಾಸ್ಯ ನಾಟಕ 'ಹೋಂ ರೂಲು' ಮತ್ತು 'ಕೈಲಾಸಂ ಝುಲಕ್' ಏರ್ಪಡಿಸಿತ್ತು.

ಕಾರ್ಯಕ್ರಮಕ್ಕೆ ಅಪರಂಜಿ ಬಳಗದವರು, ಓದುಗರು, ಮಿತ್ರರು, ಹಾಸ್ಯ ಪ್ರಿಯರೆಲ್ಲರೂ ಬಂದು ಆಡಿಟೋರಿಯಂ ಒಳಗೆ ಸೇರಲು ವರುಣನ ಕೃಪೆ ಇತ್ತೇನೋ... ಏಕೆಂದರೆ ಸಂಜೆ ಕಾರ್ಯಕ್ರಮ ಶುರುವಾಗುವ ತನಕ ಮಳೆ ಬರಲಿಲ್ಲ. ಕಾರ್ಯಕ್ರಮ ಮುಗಿಯುವ ಹೊತ್ತಿಗೆ ಅಡಿಟೋರಿಯಂ ಒಳಗೆ ಹಾಸ್ಯದ ಹೊಳೆ. ಹೊರಗೆ ಮಳೆಯ ಹೊಳೆ !

ಹಾಸ್ಯ ಸಂಜೆಗೆ ದೀಪ ಬೆಳಗುವ ಮೂಲಕ ಚಾಲನೆ ನೀಡಲಾಯಿತು. ದೀಪ ಬೆಳಗಿದವರು ಅಪರಂಜಿ ಸಂಪಾದಕರಾದ ಶ್ರೀಯುತ ಎಂ.ಶಿವಕುಮಾರ್, ಅವರ ಸೋದರರಾದ 'ಅಪರಂಜಿ ಕಿಡಿ'ಯ ಡಾ.ಪ್ರಕಾಶ್, ಶ್ರೀಯುತ ಅಣುಕು ರಾಮನಾಥ್, ಅಪರಂಜಿಯ ಉಪ ಸಂಪಾದಕ ಶ್ರೀಯುತ ಬೇಲೂರು ರಾಮಮೂರ್ತಿ ಮತ್ತು ಅಪರಂಜಿಯ ವ್ಯಂಗ್ಯಚಿತ್ರಕಾರ ಶ್ರೀಯುತ ರಾಂಕಿ ಬೆಳ್ಳೂರ್. ತದನಂತರ ಅಪರಂಜಿಯ ವಿಶೇಷ ಸಂಚಿಕೆಯ ಬಿಡುಗಡೆ ಮಾಡಲಾಯಿತು.





ಕಾರ್ಯಕ್ರಮದ ನಿರ್ವಹಣೆ ಶ್ರೀಯುತ ಬೇಲೂರು ರಾಮಮೂರ್ತಿ ಅಚ್ಚುಕಟ್ಟಾಗಿ ನಿರ್ವಹಿಸಿದರು. ಅಪರಂಜಿ ನಡೆದು ಬಂದ ಹಾದಿಯನ್ನು ಉಪಾಖ್ಯಾನಗಳೊಂದಿಗೆ ವರ್ಣಿಸಿದರು. ಅಣುಕು ರಾಮನಾಥ್ ಹಾಸ್ಯ ಪ್ರಸಂಗಗಳ ಜೊತೆ ಕೆಲ ಸಂದರ್ಭೋಚಿತ ಅಣುಕು ಹಾಡಿನಿಂದ ಸಭೆಗೆ ಸಂತೋಷ ಪಡಿಸಿದರು. ರಾಂಕಿ ಬೆಳ್ಳೂರ್ ಪಠಿಸಿದ 'ಅಪರಂಜಿ ಚಾಲೀಸಾ' ಕೇಳಿ ಪ್ರೇಕ್ಷಕರು ಕರತಾಡನದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು. ಮ್ಯಾನೇಜಿಂಗ್ ಟ್ರಸ್ಟೀ ಶ್ರೀಯುತ ಉಲ್ಲಾಸ ರಾಯಸಂರವರ ಸ್ಫೂರ್ತಿದಾಯಕ ಮಾತುಗಳು ಎಲ್ಲರ ಮನಸ್ಸಿಗೆ ಮುದ ನೀಡಿತು. ಎಲ್ಲರೂ ಕೊರವಂಜಿಯ ಫೌಂಡರ್ಸ್ ಅಂಡ್ ಕೋರ್ ಟೀಮ್ ಗೆ ಸೇರಿದ ಡಾ.ಶಿವರಾಂ [ರಾಶಿ], ಕೈಲಾಸಂ, ನಾ.ಕಸ್ತೂರಿ, ಆರ್ ಕೆ ಲಕ್ಷ್ಮಣ್ ಜೊತೆ ಇನ್ನು ಹಲವರನ್ನು, ಮತ್ತು ಅಪರಂಜಿಯನ್ನು ಕಾಡಿನಿಂದ ನಾಡಿಗೆ ತಂದವರಲ್ಲಿ ಶಿವಕುಮಾರ್, ಅ ರಾ ಸೇ. ಶೇಷಗಿರಿ ಜೊತೆ ಇಂದಿನ ತಂಡದವರನ್ನು ನೆನೆದು ಪುನೀತರಾದೆವು.

ಕಾರ್ಯಕ್ರಮದ ಮುಖ್ಯ ಘಟ್ಟಕ್ಕೆ ಕಾದಿದ್ದ ಸಭಾಂಗಣದಲ್ಲಿ ಉಪಸ್ಥಿತರೆಲ್ಲರೂ ಹಾಸ್ಯಗಾರರಾದ ಶ್ರೀಯುತ ವೈ ವಿ ಗುಂಡೂರಾವ್ ಪ್ರಸ್ತುತ ಪಡಿಸಿದ 'ಕೈಲಾಸಂ

ಝುಲಕ್' ಅನ್ನು ಚಪ್ಪಾಳೆ ಮೇಲೆ ಚಪಾಳೆ ಹೊಡೆದು ಆನಂದಿಸಿದರು. ಗುಂಡೂ ರಾವ್ ಅವರ ವಿಶಿಷ್ಟ ಟ್ಯೈಂಲಿ ಹ್ಯೂಮರ್ ಮತ್ತು ಅವರ ಅದ್ಭುತ ಹಾಸ್ಯ ಪ್ರಜ್ಞೆ ಎಲ್ಲರ ಮೇಲೆ ಮೋಡಿ ಮಾಡಿತು.

ಅಂಕಲ್‌ಶ್ಯಾಮ್ ತಂಡದವರಿಂದ ಗುಂಡೂರಾವ್ ಅವರ ನಿರ್ದೇಶನದಲ್ಲಿ ಟಿ ಪಿ ಕೈಲಾಸಂ ರವರ ಜನಪ್ರಿಯ ನಾಟಕಗಳಲ್ಲೊಂದಾದ 'ಹೋಂ ರೂಲು' ಹೊಟ್ಟೆ ಹುಣ್ಣಾಗಿಸುವಷ್ಟು ಎಲ್ಲರನ್ನು ರಂಜಿಸಿತು. ಪ್ರತಿಯೊಬ್ಬ ಪಾತ್ರಧಾರಿಯೂ ಮನಸ್ಸಲ್ಲಿ ಉಳಿಯುವಂಥ ಪಾತ್ರ ನಿರ್ವಹಿಸಿದರು.




ಸೊಸೆಯನ್ನು ಗೋಳು ಹೊಯ್ಕೊಂಡು ಸುಬ್ಬಮ್ಮ [ರಂಗನಾಥ ರಾವ್] ಅಂತೂ ನಮ್ಮ ಹೃದಯ ಗೆದ್ದರು ! ಬಜಾರಿ ಹೆಂಡತಿಯಾಗಿ ಶ್ರೀಮತಿ ಸುಗುಣ ಸುರೇಶ್, ಮೈದಾನದ ಹೆಬ್ಬುಲಿಯಾದರೂ ಮನೆಯ ಮೂಗಿಲಿಯಾಗಿ ಗುಂಡೂ ರಾಯರ ಸೊಗಸಾದ ನಟನೆ ನಮ್ಮ ಸಮ್ಮತಿ-ಸಿಂಪತಿ ಗಳಿಸಿತು. ಉಳಿದ ಪಾತ್ರಧಾರಿಗಳೆಲ್ಲರೂ ಅಚ್ಚುಕಟ್ಟಾಗಿ ಅಭಿನಯಿಸಿದರು.

ಅಪರಂಜಿಗಾಗಿ ರಾಂಕಿ ಬೆಳ್ಳೂರ್ ಬರೆದ ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಲಾಗಿತ್ತು ಗೋಡೆ ಮೇಲೆ ನೇತು ಹಾಕಲಾಗಿತ್ತು...ಯಾರು ನೋಡಿದ್ರೋ ಬಿಟ್ರೋ ಗೊತ್ತಿಲ್ಲ !

ಒಟ್ಟಿನಲ್ಲಿ, ಕಾರ್ಯಕ್ರಮ ಮುಗಿಯುವ ವೇಳೆಗೆ, ಆಗಲೇ ಹೇಳಿದಂತೆ, ಒಳಗೆ ಹಾಸ್ಯದ- ಸಂತಸದ ಸುರಿಮಳೆ. ಹೊರಗೆ ಭಾರಿ ಸುರಿಮಳೆ !



## ಅಪರಂಜಿ ಚಾಳೀ–ಸಾ

ರಾಂಕಿ ಬೆಳ್ಳೂರ್

ಕೊರವಂಜಿ ಕಾಡಿಗೆ ಸಾಗಿದಳು ಅವಳಿಗಾಗ ಇಪ್ಪತ್ತೈದು
ಅಪರಂಜಿಗೆ ಈಗಿನ್ನು ತುಂಬಿತು ಮೂವತ್ತಾರು ಪ್ಲಸ್ ಐದು
ಅಂದು ಕೊರವಂಜಿ ಆಧುನಿಕ ನಗೆಪ್ರಜ್ಞೆಯ ಹರಿಕಾರಿಣಿ
ಇಂದು ಅಪರಂಜಿಯ ಓದುಗರಲ್ಲಿರುವರು ಅನೇಕ ರಾಜಕಾರಿಣಿ ॥ 1 ॥

ಬಣ್ಣ ಬಣ್ಣದ ನಗೆಲೇಖನ ಹೊತ್ತು ತಂದ ಕೊರವಂಜಿಯ ಹುಟ್ಟುಹಬ್ಬ
ನಾಡೆಲ್ಲವು ಬಣ್ಣಗಳಿಂದ ಓಕುಳಿಯ ಆಡುವ ಕಾಮನಹಬ್ಬ
ಶ್ರಾವಣ ಮಾಸದಲ್ಲಿ ಜನಿಸಿದಳು ಅಪರಂಜಿ
ಇಂದಿಗೂ ಬೀರುತಿಹಳು ತಿಳಿನಗೆಯ ಕಾರಂಜಿ ॥ 2 ॥

ಕೊರವಂಜಿಗೆ ಅಂದು ತಿಳಿಹಾಸ್ಯವ ಕೊಟ್ಟಿದ್ದು ಸುನಂದ
ಡಾಕ್ಟರ್ ಶಿವರಾಂ ಲೇಖನ ಓದುವುದೇ ಮಹದಾನಂದ
ಅಂದಿಗೆ ಇದ್ದದ್ದು ಕುಹಕಿಡಿಗಳು ಉರಿಗಾಳು
ನಮ್ಮ ನಿಮ್ಮಲ್ಲಿಹುದು ಇಂದು ಹಾಸ್ಯದ ಹುರಿಗಾಳು ॥ 3 ॥

ರಾಶಿ–ಕಸ್ತೂರಿ–ಲಕ್ಷ್ಮಣ್–ಕೈಲಾಸಂ
ಒಬ್ಬೊಬ್ಬರೂ ಹಾಸ್ಯದಲ್ಲಿ ಜಸ್ಟ್ ಆಸಂ
ಕೊರವಾವಲೋಕನ ಸಮಾಜದ ಏರುಪೇರುಗಳುಳ್ಳ ಲೇವಡಿಯ ಕಾಲಂ
ಅಪರಂಜಿಯನ್ನು ಓದಲು ನೋಡಬೇಕೇ ರಾಹುಕಾಲಮ್ !? ॥ 4 ॥

ಕೊರವಂಜಿಯ ಯಶಸ್ಸಿನಲ್ಲಿ ಭಾಗಿಗಳು ಕೇಫ–ಆ ರಾ ಸೇ–ರಾಮಿ–ದಾಶರಥಿ
ಕೊರವಂಜಿಯನ್ನು ಹುಮ್ಮಸ್ಸಿನಿಂದ ಪೋಷಿಸಿದರು ಅನೇಕ ಮಹಾರಥಿ
Punchಗೆ ಪಂಚ್ ಕೊಟ್ಟ ಪುಸ್ತಕ ಕೊರವಂಜಿ
Punಚ ಕಜ್ಜಾಯಗಳನ್ನೊಳಗೊಂಡಿದೆ ನಮ್ಮ ಅಪರಂಜಿ ॥ 5 ॥

ಕೊರವಂಜಿಗೆ ಹಾಕಿದರು ಸೇತುರಾಮ ಶಿವರುದ್ರರು ರಾಜರತ್ನದ ಹಾರ
ನಗುವೇ ಸಹಜಧರ್ಮ ಎನ್ನುವುದೇ ಜೀವನದ ಸಾರ
ಅಂದಿಗೂ ಇಂದಿಗೂ ಹಾಸ್ಯದ ಹೂರಣದ ಅಂಕಣ
ಅಪರಂಜಿ ಕಟ್ಟಿರುವಳು ನಮ್ಮನ್ನು ರಂಜಿಸಲು ಕಂಕಣ ॥ 6 ॥

ಚುಟುಕ–ಅಣಕವಾಡು–ವ್ಯಂಗ್ಯ ಚಿತ್ರ ಕಳುಹಿಸಿದ್ದಾರೆ ಅನೇಕರು
ಅಪರಂಜಿಗೆ ಬರಹಗಳನ್ನು ಕೊಟ್ಟಿದ್ದಾರೆ ಹಲವರು

ಸಂಪಾದಕರು–ಬರಹಗಾರರು–ಓದುಗರು ಅಪರಂಜಿಗೆ ಬೆಸ್ಟ್
ಮುದ್ರಕರು–ಟ್ರಸ್ಟಿಗಳು–ಆಡಳಿತ ವರ್ಗ ನಡೆಸುವರು ನಗೆ ಫೆಸ್ಟ್ ॥ 7 ॥

ಪಾಸಿಟಿವ್ ಆಗಿರಲು ನಮಗೆ ಬೇಕೇಬೇಕು ಅಪರಂಜಿಯ ನಗೆ–ಟಿವ್ ಟಾನಿಕ್
ಜೋರಾಗಿ ನಕ್ಕಾಗ ಆಗುವ ಹರ್ಷೋದ್ಗಾರವೇ ಸೂಪರ್ ಸೋನಿಕ್
ಅಪರಂಜಿಯ ಚಿಲುಮೆ ಹರಡಲಿ ಒಳನಾಡಿನಲ್ಲೂ
ಅವಳ ಒಲುಮೆ ಪಸರಿಸಲಿ ಹೊರನಾಡಿನಲ್ಲೂ ॥ 8 ॥

ಹಾಸ್ಯವನ್ನೊಳಗೊಂಡಿರುವ ಅಪರಂಜಿಯೇ ಪವಿತ್ರ ಗ್ರಂಥ
ಕನ್ನಡಿಗರಿಗೆಂದಿಗೂ ಇದು ನಮ್ಮದೇ ಸ್ವಂತ
ಲೋಕ ಕಲ್ಯಾಣಕ್ಕಾಗಿ ಅಪರಂಜಿ ನಡೆಸುವಳು ಹಾಸ್ಯೋತ್ಸವ
ಕ್ಷಣ ಕ್ಷಣವೂ ನಕ್ಕು ನಲಿದು ಸಂಭ್ರಮಿಸಬಹುದು ಈ ನಿತ್ಯೋತ್ಸವ ॥ 9 ॥

ಅಪರಂಜಿಯಿಂದ ನಗೆ ಸೂಸಿದೆ ರಾಶಿ ರಾಶಿ
ಹಾಸ್ಯದಿಂದಲೇ ಬದುಕಿಹುದು ಜೀವರಾಶಿ
ನಗು ಒಂದಿದ್ದರೆ ಸಾಕು....ಎಲ್ಲರೂ ಆಗ ಮಿತಭಾಷಿ
ತಿಳಿಹಾಸ್ಯ ಭರಿತ ಅಪರಂಜಿಯ ಓದುತ್ತಿದ್ದರೆ ಅದೇ ಹಾಸ್ಯಕಾಶಿ ॥ 10 ॥

ಅಪರಂಜಿಯನ್ನು ಮನೆ–ಮನಗಳೊಳಗೆ ಬರಮಾಡಿಕೊಂಡೆವು
ಮುಂದಿನ ಸಂಚಿಕೆ ಬರುವುದನ್ನೇ ಕಾದುನಿಂತೆವು
ದಿನವೂ ಪಠಿಸಿರಿ ಈ ಅಪರಂಜಿ ಚಾಳಿ–ಸಾ
ತಿಳಿನಗೆಯ ಕಾರಂಜಿಯನ್ನು ಆಶೀರ್ವದಿಸಬೇಕು ನಮಗೆ
ಹಾಸ್ಯದೊಡೆಯ ವಿಘ್ನೇಶ ॥ 11 ॥

●

ಬೆಂದ್ರೆ ಅವರ ಬಳಿ ಬಂದ ಒಬ್ಬರು––" ನನಗ ಗಂಡ ಮಗ ಆಗ್ಯಾನ...ಒಂದು ಹೆಸರು ಸೂಚಿಸಿ" ಅಂದ. ಬೇಂದ್ರೆ –"ಚಿದಂಬರ"

ಮತ್ತೆರಡು ವರ್ಷದ ನಂತರ ಅದೇ ವ್ಯಕ್ತಿ ಅದೇ ಸಲಹೆಗೆ ಬಂದ.

ಬೇಂದ್ರೆ ––"ಶ್ವೇತಾಂಬರ"

ಮತ್ತೆರಡು ವರ್ಷದ ನಂತರ...

ಬೇಂದ್ರೆ –" ಹೀಂಗ ಎರಡೆರಡು ವರ್ಷಕ್ಕ ನೀ ಬರ್ತಾ ಇದ್ದರ ಎಷ್ಟು 'ಬರ' ಅಂತ ಹುಡುಕಲಿ!! ಅದಕ್ಕೂ ಬರಬರ್ತದ!!

ಆಗಲಿ ಕಡೀ ಅವಕಾಶ ನಿನಗ.. ಇನ್ನನಾಕರಕಿಂತ ಜಾಸ್ತಿ ಗಂಡು ಮಕ್ಕಳನ್ನ ಮಾಡಿಕೊಬ್ಯಾಡ...ತಿಳೀತ...

ಬರಕೊ...ಸಪ್ಟಂಬರ, ಅಕ್ಟೋಬರ, ನವೆಂಬರ, ಡಿಸೆಂಬರ....

# ಎಳೆಗರುಂ ಎತ್ತಾಗದೆ?

**ಅಣಕು ರಾಮನಾಥ್**

ಸೋಮೇಶ್ವರ ಶತಕದ 'ಎಳೆಗರುಂ ಎತ್ತಾಗದೆ' ಪದಪುಂಜವನ್ನು ಫೇಸ್‌ಬುಕ್ಕಿನಲ್ಲಿ ಟೈಪಿಸಿ, ಯಾರೋ ಬಂದರೆಂದು ನೋಡಲು ಎದ್ದುಹೋದೆ. ಬಂದವರು ಹೋಗುವಷ್ಟರಲ್ಲಿ ಒಂದು ಗಂಟೆ ಕಳೆದಿತ್ತು. ಫೇಸ್‌ಬುಕ್ಕಿಗೆ ಮರಳಿದಾಗ ಎರಡೇ ಪದಗಳನ್ನು ನನ್ನರಿವಿಲ್ಲದೆಯೇ ಪೋಸ್ಟ್ ಮಾಡಿದ್ದುದು ತಿಳಿಯಿತು. ಒಂದೇ ಗಂಟೆಯಲ್ಲಿ ಹಲವಾರು ಪ್ರತಿಕ್ರಿಯೆಗಳು ಮೂಡಿದ್ದವು. 'ಎತ್ತಾಗದೆ ಅಂತ ನಮ್ಮನ್ನೇನು ಕೇಳ್ತೀಯಣ್ಣೋ! ಓಗಿ ಪೊಲೀಸ್ ಟೇಸನ್‌ಗೆ ಕಂಪ್ಲೀಟ್ ಕೊಡು. ಎತ್ತಾಗೆ ಓಗಿದ್ರೂ ಉಡುಕ್ಕೊಡ್ತಾರೆ' ಎಂದು ಪೋಸ್ಟಿಸಿದ್ದ ಕಾಗೆಪುರದ ಸಿದ್ದ. 'ಎಳೆಗರುಂ ಎತ್ತಾಗದೆ ಅನ್ನುವುದು ಒಂದು ಸೀರಿಯಸ್ ಕೊಶ್ಚೆನ್. ಗೋಮಾಂಸ ನಿಷೇಧ ಕಾಯಿದೆಯನ್ನು ಉಲ್ಲಂಘಿಸುವ ಮಂದಿ ಕರುಗಳನ್ನು ಹೊಡೆದುಕೊಂಡು ಹೋಗಿ ಕಸಾಯಿಖಾನೆಗೆ ಕೊಟ್ಟುಬಿಡುತ್ತಾರೆ. ಹೀಗೆ ಆಗಾಗ್ಗೆ ಎಳೆಕರುವು ಯಾವ ಕಡೆ ಇದೆ (ಎತ್ತಾಗದೆ?) ಎಂದು ಎಚ್ಚರ ವಹಿಸದಿದ್ದರೆ ನಮ್ಮ ಸನಾತನ ಧರ್ಮಕ್ಕೇ ಧಕ್ಕೆ ಉಂಟಾಗುತ್ತದೆ' ಎಂದಿತು ವರೇಣ್ಯಂ ವೆಂಕಟಯ್ಯನ ಪೋಸ್ಟು.

'ಇಂದಿನ ಕಾಲವೇ ಹೀಗೆ. ಚಿಕ್ಕವರಿಗೆ ಹೇಳಿ ಕೇಳುವವರು ಇರುತ್ತಾರೆ. ದೊಡ್ಡವರನ್ನು ಕ್ಯಾರೇ ಎನ್ನುವವರಿಲ್ಲ. ಎಳೆಗರುವನ್ನೇ ಏಕೆ ಕೇಳಬೇಕಿತ್ತು? ಮುದಿಗರುಂ ಎತ್ತಾಗದೆ ಎಂದು ಕೇಳಬಹುದಿತ್ತಲ್ಲ. ಏನೆಂದಿರಿ? ಮುದಿ ಆದಮೇಲೆ ಕರು ಎನ್ನುವಂತಿಲ್ಲವೆ? ಮನುಷ್ಯರನ್ನು ಚಿಕ್ಕಂದಿನಲ್ಲಿ ಬಾಲ-ಕರು, ವಯಸ್ಸಾದ ನಂತರ ಮುದು-ಕರು ಎನ್ನುವುದರಿಂದ ಜಾನುವಾರಿಗೂ ಮುದಿಗರುಂ ಎಂದರೆ ತಪ್ಪೇನಾಗದು. ಮುಖ್ಯ ದೊಡ್ಡವರ ಬಗ್ಗೆ ಗೌರವ ಇರಬೇಕಷ್ಟೆ' ಎಂದಿತು ವೃದ್ಧಸಂಕಷ್ಟ ಅಸೋಸಿಯೇಷನ್ನಿನ ಕಾಮೆಂಟು.

'ಮೇಲೆ ಕಾಮೆಂಟಿಸಿದ ಯಾರಿಗೂ ಸರಿಯಾದ ಅರ್ಥ ಹೊಳೆದಿಲ್ಲವೆಂಬುದು ಸ್ಪಷ್ಟ. 'ಎತ್ತಾಕ್ಕೊಂಡ್ಹೋಗು' ಎನ್ನುವುದು ರೌಡಿಭಾಷೆ. ಎಳೆಗರುಂ ಎಂದರೆ ಒಳ್ಳೆಯ ಬೇಡಿಕೆಯಲ್ಲಿರುವ ಹಸುವಿನ ಮರಿಯೇ ಇರಬೇಕು. ಅದನ್ನು 'ಎತ್ತಾಗದೆ' ಎಂದರೆ ಎತ್ತಿಕೊಂಡುಹೋಗಿದ್ದಾಗಿದೆ ಎಂದೇ ಅರ್ಥ. ಈ ಪೋಸ್ಟ್ ಹಾಕಿದವನು ಗೋಚೋರನೇ ಇರಬೇಕು. ಇವನ ಮೂಲ ಹುಡುಕಿ ಅರೆಸ್ಟ್ ಮಾಡಿಸುವ ಕಾರ್ಯವನ್ನು ಶೀಘ್ರವೇ ಕೈಗೊಳ್ಳದಿದ್ದರೆ ಯಾವುದೋ ಮುಗ್ಧ ಪುಟ್ಟ ಕರುವಿನ ಪ್ರಾಣವು ಅಪಾಯದಲ್ಲಿದೆ ಎನಿಸುತ್ತದೆ' ಎಂದಿತು ಡೌಟಿಂಗ್ ಧರಣಯ್ಯನ ಕಾಮೆಂಟು.

'ಇರಲಾರದಯ್ಯ. ಪ್ರೊಫೈಲ್ ಫೋಟೋ ನೋಡಿದರೆ ಕಳ್ಳನಂತೆ ಕಾಣುವುದಿಲ್ಲ. ಮೊದಲೇ ಮಳೆಗಾಲ. ರಸ್ತೆ ಯಾವುದು, ಮ್ಯಾನ್‌ಹೋಲ್ ಯಾವುದೆಂದು ತಿಳಿಯಲಾಗದಂತೆ ಎಲ್ಲೆಲ್ಲೂ ನಿಂತಿರುವ ನೀರು. ಯಾವುದೋ ಕೆಳಮಟ್ಟದಲ್ಲಿದ್ದ ಕೊಟ್ಟಿಗೆಯಲ್ಲಿ ತಾಯಿಯೊಂದಿಗಿದ್ದ ಎಳೆಯ ಕರುವು ನೀರಿನ ರಭಸಕ್ಕೆ ಕೊಚ್ಚಿಹೋಗಿ ಮ್ಯಾನ್‌ಹೋಲಿನಲ್ಲಿ ಬಿದ್ದಿತ್ತು ಅನ್ನತ್ತೆ. ಈ ಮಹಾನುಭಾವನ ದೃಷ್ಟಿಗೆ ಅದು ಬಿದ್ದು, ಅವರಿವರ ಸಹಾಯದಿಂದ ಅದನ್ನು ಎತ್ತಿ ಹೊರತಂದು, 'ಕರುವನ್ನು ರಕ್ಷಿಸಲಾಗಿದೆ' ಎಂದು ಈ ರೀತಿಯಲ್ಲಿ ಹೇಳಿದ್ದಾನೆ ಎನಿಸುತ್ತದೆ' ಧರಣಯ್ಯನ ಕಾಮೆಂಟಿಗೆ ದಯಾನಂದ ಮಾರನ್ ಉತ್ತರಿಸಿದ್ದ.

'ಮುಖ ನೋಡಿದರೆ ಕಳ್ಳ ಅಂತ ಗೊತ್ತಾಗತ್ತೇನ್ರೀ? ಗೋಮುಖವ್ಯಾಘ್ರಗಳು ಒಂದೊಂದಾಗಿ ಹೊರಬಂದು ಪರಪ್ಪನ ಅಗ್ರಹಾರದಲ್ಲಿ ಮನೆ ಮಾಡ್ಕೊಂಡಿರೋದನ್ನ ನೋಡಿಯೂ ನೀವು ಹೀಗೆ ಹೇಳ್ತೀರಾಂದ್ರೇ...' ಕೆಂಡ ಕಾರಿದ್ದ ಧರಣಯ್ಯ. 'ಇದು

ಟೈಪಿಂಗ್ ಎರರ್ ಇರಬಹುದು. ಎಳೆಗರಂ ಎತ್ತಾಗದೆ ಅಂತ ಬರೆಯಕ್ಕೆ ಹೋಗಿ ಹೀಗಾಗಿರಬಹುದು ಅನ್ಸತ್ತೆ. ಗರಂ ಕಡಲೆಕಾಯಿ ಚಳಿಗಾಲದಲ್ಲಿ ಕುರ್ರುಂ ಕುರ್ರುಂ ಅನ್ನಕ್ಕೆ ಚೆನ್ನಾಗಿರತ್ತೆ. ಚೆನ್ನಾಗಿ ಹುರಿದ ಗರಂ ಕಡಲೆಕಾಯಿ ಬಹಳ ರುಚಿ. ಅದರಲ್ಲೂ ಪುಟ್ಟ ಪುಟ್ಟ ಕಾಳುಗಳನ್ನು ಕಟುಮ್ಮಿಸುವ ಆನಂದಕ್ಕೆ ಸಮವಿಲ್ಲ. 'ಪರಿಷೆ ದೂರವಿದೆ. ಎಳೆ ಗರಂ ಕಡಲೆಕಾಯಿ ಬೇಕು. ಅದು ಎಲ್ಲಿ ಸಿಗುತ್ತದೆ?' ಎಂದು ಕಡಲೆಕಾಯಿ ಪ್ರಿಯನೊಬ್ಬನು ಹಾಕಿರುವ ಪೋಸ್ಟ್ ಇದು' ಎಂದಿತು ರುಚಿಕರಪ್ರಿಯನ ಕಾಮೆಂಟು.

'ನಿಜ. ಅದು ಎಳಗರುಂ ಇರಲಾರದು. ಎಳೆ ಎಂದರೆ ಸೊಪ್ಪಿನಕಡಲೆಕಾಯಿ. ಅದಕ್ಕೆ ಗರಂ ಮಸಾಲೆ ಹಾಕಿ 'ಎಳೆಗರಂ' ಎಂದು ಹೆಸರಿಟ್ಟು ಮಾರುವ ಅಂಗಡಿಯೊಂದಿದೆ. ಈ ವ್ಯಕ್ತಿಯು ಆ ಅಂಗಡಿಯು ಎತ್ತಾಗದೆ (ಎಲ್ಲಿದೆ) ಎಂದು ಕೇಳುತ್ತಿರುವನೆಂಬುದೇ ನನ್ನ ಖಚಿತ ಅಭಿಪ್ರಾಯ' ಎಂದಿತು ಸ್ವಾದಸಾಧುವಿನ ಪೋಸ್ಟು. 'ಹೇರ್ ಕಟಿಂಗ್ ನೋಡಿದರೆ ಗೊತ್ತಾಗಲ್ವೇನ್ರೀ? ಇದು ಪೊಲೀಸ್ ಇಲಾಖೆಯವನೊಬ್ಬನ ಪೋಸ್ಟು. ರೌಡಿಯೊಬ್ಬನು ಎಳೆಗರಂ ಕಡಲೆಕಾಯಿ ಮಾರುತ್ತಿದ್ದನಂತೆ. 'ಬೀದಿ ಮಧ್ಯದಲ್ಲಿ ಇಟ್ಟಿದ್ದೀಯ. ಸೈಡಲ್ಲಿಡು' ಎಂದರೆ ರೋಫ್ ಹೊಡೆದನಂತೆ. ಅವನನ್ನು ಎತ್ತಂಗಡಿ ಮಾಡಲಾಗಿದೆ (ಎತ್ತಿ ಆಗದೆ–ಆಗಿದೆ) ಎಂಬುದೇ ಈ ಪೋಸ್ಟಿನ ಅರ್ಥ' ಎಂದಿತು ಸರ್ವಜ್ಞರೆಡ್ಡಿಯ ಪೋಸ್ಟು. 'ಮೊದಲೊಬ್ಬರು ಹೇಳಿದ್ದೇ ಸರಿ. ಆದರೆ ಹಸುವಿನ ಕಳ್ಳನಲ್ಲ ಇವನು. ಮಕ್ಕಳ ಕಳ್ಳ. ಎಳೆಗರು ಎನ್ನುವುದು ಎಳೆಯರು ಎನ್ನುವುದಕ್ಕೆ ತದ್ಭವ. ಎಳೆಯರನ್ನು ಎತ್ತಿಕೊಂಡು ಆಗಿದೆ; ಸಾಗಿಸುವುದೊಂದೇ ಬಾಕಿ ಎನ್ನುವುದೇ ಇದರ ಅರ್ಥ. ಮಕ್ಕಳಕಳ್ಳರಿಗೆ ಧಿಕ್ಕಾರ! ಕಳ್ಳರು ಹೀಗೆ ರಾಜಾರೋಷವಾಗಿ ಪೋಸ್ಟ್ ಮಾಡುತ್ತಿದ್ದರೂ ಮೋದಿಯವರು ಏನು ಮಾಡುತ್ತಿದ್ದಾರೆ? ದ ನೇಷನ್ ವಾಂಟ್ಸ್ ಟು ನೋ' ಎಂದಿತು ವಾರ್ನ್ ಅಬ್ ಕಂಸ್ವಾಮಿಯ ಪೋಸ್ಟು.

'ಈ ಪೋಸ್ಟನ್ನು ನೋಡುವುದಕ್ಕೇ ಮುಜುಗರವಾಗುತ್ತದೆ. ಇದನ್ನು ಸ್ತ್ರೀವಿರೋಧಿಯೇ ಪೋಸ್ಟ್ ಮಾಡಿದ್ದಾನೆನ್ನುವುದು ನಿರ್ವಿವಾದ. ಅದೇಕೆ ಎಳೆಗರುಂ ಎತ್ತಾಗಬೇಕು? ಏಕೆ ಹಸು ಆಗಬಾರದು? ಹಸುಗಳಿಗೇ ಹೆಂಗರುಗಳು ಹುಟ್ಟಬಾರದೆಂಬ ಇರಾದೆ ಇರುವ ಇವನು ತನ್ನ ಹೆಂಡತಿಗೆ ಹೆಣ್ಣು ಮಗುವಾದರೆ ಸಹಿಸಿಯಾನೇನು? ಪುತ್ರವ್ಯಾಮೋಹದ, ಮೇಲ್ ಶುವಾನಿಸಂನ ಪ್ರತೀಕವಾದ ಈ ಪೋಸ್ಟನ್ನು ಬ್ಲಾಕಿಸಬೇಕೆಂದು ಶುಗರ್‌ಬರ್ಗ್‌ನಿಗೆ ಈಗಲೇ ನೋಟೀಸ್ ಜಾರಿ ಮಾಡಬೇಕು' ಎಂದಿತು ಸ್ತ್ರೀಮೋಹಿ.ಕಾಮ್‌ನ ಪೋಸ್ಟು.

'ಎಳೆಗರು ಎತ್ತಾಗದೆ ಎನ್ನುವುದು ಅಂತಿಂತಹ ಕ್ರೌರ್ಯದ ಪ್ರತೀಕವಲ್ಲ. ಎಳೆಗರುವು ಎತ್ತಾಗುವುದು. ಅದು ಎತ್ತಾಗುತ್ತಿದ್ದಂತೆಯೇ ಅದನ್ನು ನೇಗಿಲಿಗೆ ಸಿಲುಕಿಸಿ ಆಜೀವಪರ್ಯಂತ ದುಡಿಸಿಕೊಳ್ಳುವುದೇ ಇವನ ಮನೋಧರ್ಮವೆನಿಸುತ್ತಿದೆ. ಮೂಕಪ್ರಾಣಿಗಳನ್ನೇ ಬಿಡದ ಇವನು ಮನುಷ್ಯರನ್ನು ಬಿಡುವನೇ? ಹಿಂದಿನ ಕಾಲದ ಜೀತ ಪದ್ಧತಿಯ ಆರಾಧಕರ ಕೊನೆಯ ಕೊಂಡಿ ಇರಬೇಕು ಇವನು. ಇಂತಹವರಿಂದ ಮುಂದಿನ ಜನಾಂಗ ಏನು ಕಲಿತೀತು? ಇವನ ಮೇಲೆ ಈಗಲೇ ಮೊಕದ್ದಮೆ ಹೂಡದಿದ್ದರೆ ಇವನು ಹೆಚ್ಚಿಕೊಂಡು ಮುಂದೆ ಕರಾಳ ಮಂತ್ರಿಯಾದರೂ ಆದಾನು. ಧಿಕ್ಕಾರವಿರಲಿ ಇಂತಹ ಪೋಸ್ಟಿಗನಿಗೆ' ಎಂದಿತು ಫ್ರೀಡಂ ಎಟ್ ಎನಿ ಕಾಸ್ಟಿನ ಪೋಸ್ಟು.

'ಹರಹರ! ಛೆ! ಇದೇನು ಚೆನ್ನ ಸೋಮೇಶ್ವರ!' ಎಂದು ಹಲುಬುತ್ತಾ ಆ ಎರಡು ಪದಗಳನ್ನು ಕೂಡಲೆ ಡಿಲೀಟ್ ಮಾಡಿದೆ. ಮುಂದಿನದು ದೊಡ್ಡದೇ ಆದ ಸಂಗತಿ. ಅದನ್ನು ಮುಂದಿನ ಬಾರಿ ಹಂಚಿಕೊಳ್ಳುತ್ತೇನೆ.

●

# ಅಜ್ಜನ ಕೋಲಿದು.........

✍ಗುಂಡುರಾವ್ ದೇಸಾಯಿ

ಕೋಲು ಅಂದಕೂಡಲೆ ಮತ್ತೆ ಮತ್ತೆ ನನ್ನ ಕಾಡುವುದು ಬಾಲ್ಯನೆ. ಬಾಲ್ಯ ಅಪಾರ ಅನುಭವಗಳ ಖಜಾನೆ. ಅದು ಬದುಕಿನ ಎಲ್ಲಾ ಸಂಕಷ್ಟಗಳನ್ನು ಎದುರಿಸಿದವರಿಗೆ ಮಾತ್ರ ಗೊತ್ತಾಗುವಂತಹದ್ದು. ನನ್ನ ಅಪ್ಪನ ಎರಡು ಕಾಲುಗಳು ಮುದುಡಿದಂತೆ ಇದ್ದವು. ಹುಟ್ಟಿನಿಂದಲೇ ವಿಕಲ ಚೇತನರು. ತಿಳುವಳಿಕೆ ಬಂದಾಗ ನಮ್ಮಪ್ಪನನ್ನು ನೋಡಿದ್ದು ಕೋಲು ಹಿಡಿದೆ. ಮೂವರು ಮಕ್ಕಳನ್ನು ಕಳೆದುಕೊಂಡು ಕೊನೆಗಾಲಕ್ಕೆ ಹುಟ್ಟಿದವರು ನಮ್ಮಕ್ಕ ಮತ್ತು ನಾನು. ನಾನು ಅಪ್ಪ ಹೊರ ಹೋಗುತ್ತಿದ್ದರೂ ಅಜ್ಜ ಮೊಮ್ಮಗನಂತೆ ಕಾಣುತ್ತಿದ್ದರೂ ಒಬ್ಬರೂ ಲೇವಡಿ ಮಾಡುತ್ತಿರಲಿಲ್ಲ. ಕಾರಣ ನಮ್ಮಪ್ಪನ ಬದುಕು ತೆರೆದ ಪುಟ. ದುಃಖ ಉಂಡು ಎಲ್ಲರಿಗೂ ಸುಖ ಹಂಚಿದವರು. ಅವರ ಬಗ್ಗೆ ಒಂದು ಒಂದು ತರಹ ಹಿರಿದಾದ ಭಾವನೆ. ಎಲ್ಲಿ ಹೋದರೂ ಗೌರವ. ಅಪ್ಪನ ಆ ಕೋಲು ನನಗೂ ನನ್ನ ಒಂಟಿತನ ಮರೆಸುವ, ಬಿಡುವಿನಲ್ಲಿ ಮಾತನಾಡುವ ಗೆಳೆಯ ಹೀಗೆ ಎಲ್ಲವೂ ಆಗಿದ್ದವು.

ನಮ್ಮೆಲ್ಲರ ಬಾಲ್ಯದಲ್ಲಿ ಕೋಲಿಗೆ ವಿಶೇಷ ಪೂಜ್ಯನೀಯ ಭಾವವಿತ್ತು. ಅಜ್ಜನ ಊರುಗೋಲನ್ನು ಚಿಕ್ಕ ಮಕ್ಕಳು ಹಿಡಿದು ಹಾಡುತ್ತಾ ಕುಣಿಯುತ್ತಿದ್ದರು. ಇದು ಇಂದು ವಿರಳವಾಗಿದೆ. ದೇಹವನ್ನು ಸಂಭಾಳಿಸಿಕೊಂಡು ನಡೆದಾಡಲು ಕಷ್ಟ ಪಡುವ ವೃದ್ಧರು ಬಳಸುವ ಊರುಗೋಲು ಮಕ್ಕಳ ಆಟದ ವಸ್ತು ಆಗಿತ್ತು. ಆಧುನಿಕತೆಯ ಪ್ರಭಾವದಿಂದ ಉರುಗೋಲು ಎನ್ನುವ ಆಟಿಕೆ ಔಟ್ ಡೇಟ್ ಆಗಿದೆ.

ನಮ್ಮ ಬಾಲ್ಯದ ಕಾಲದಲ್ಲಿ ಅಜ್ಜ ಅಥವಾ ಅಜ್ಜಿ ಊರುಗೋಲನ್ನು ಕೈಯಿಂದ ಎಲ್ಲಿ ಇಡುತ್ತಾರೆ ಎಂದೇ ಮೊಮ್ಮಕ್ಕಳು ಹೊಂಚು ಹಾಕುತ್ತಿದ್ದರು. ಅವರು ಕೈಯಿಂದ ಬಿಟ್ಟ ತತ್‌ಕ್ಷಣವೇ ಮಕ್ಕಳ ಮಧ್ಯೆ ಕೋಲಿಗಾಗಿ ಜಗಳ ನಡೆಯುತ್ತಿತ್ತು.. ತಾತ/ಅಜ್ಜಿಯೇ ಬಂದು 'ಸರತಿಯಂತೆ ಆಡಿ ಎಂದೋ...ಕೂಡಿ ಆಡಿ ಎಂದೊ....' ಹೇಳಬೇಕಾಗಿತ್ತು...ಆಟದಲ್ಲಿ ನನ್ನ ಕೋಲು ಮುರಿದುಬಿಟ್ಟಿರಪಾ ಎನ್ನುವ ಎಚ್ಚರಿಕೆಯೂ ಅವರುಗಳ ಮಾತಿನಲ್ಲಿ ಇರುತ್ತಿತ್ತು. ಕೋಲು ಸಿಕ್ಕ ಮೇಲೆ ಅದನ್ನ ಕಾಲುಗಳ ಮಧ್ಯ ಇಟ್ಟುಕೊಂಡು ಕೊಡು ಓಡುವ ಕುದರೆಯಾಗಿ, ಬಸ್ಸು, ರೈಲಾಗಿ ಒಮ್ಮೊಮ್ಮೆ ಮನೆಯಲ್ಲಿ ಅಮ್ಮ ಅಡಗಿಸಿಟ್ಟ ವಸ್ತುಗಳನ್ನು ತೆಗೆದುಕೊಳ್ಳುವ ಸಾಧನವಾಗಿ, ಹುಣಸೆ ಗಿಡ, ಮಾವಿನ ಗಿಡಗಳಲ್ಲಿ ಕಾಯಿಗಳನ್ನು ಹೊಡೆಯುವ ಸಾಧನವಾಗಿ. ಮನೆಮುಂದೆ ಬಂದು ತಿನ್ನುವ ಪಶುಗಳಿಗೆ ಹೊಡೆಯುವ ಬೆತ್ತವಾಗಿ ಬಳಸಿಕೊಳ್ಳಲಾಗುತ್ತಿತ್ತು. ನನಗೆ ಅಂತಹ ಪೈಪೋಟಿಯವರು ಇರಲಿಲ್ಲ ಕಾರಣ ನನ್ನಪ್ಪನ ಕೋಲೆ ನನ್ನ ಹಲವು ಆಟಕ್ಕೆ ಬಳಸುವ ಸಾಧನವಾಗಿತ್ತು.

ಕೋಲು ಒಂದು ಕಾಲದ ಪ್ರತಿಷ್ಠೆಯ ಸಂಕೇತವಾಗಿತ್ತು. ಊರುಗೋಲನ್ನು ಹಲವಾರು ಕಾರಣಗಳಿಂದ ಬಳಸುತ್ತಿದ್ದರು. ಮುಖ್ಯವಾಗಿ ವೃದ್ಧರು, ಅಂಗವಿಕಲರು ನಡೆದಾಡಲು ಊರುಗೋಲಿನ ಸಹಾಯ ಪಡೆಯುತ್ತಾರೆ. ಆದರೆ ಹಿಂದಿನ ಕಾಲದಲ್ಲಿ ಊರಿನ ಪ್ರಮುಖರಾದ ಗೌಡರು, ಪಟೇಲರು, ಜಮೀನ್ದಾರರು, ಧನವಂತರು, ಕುಲಕರ್ಣಿಗಳು, ಊರುಗೋಲು ಬಳಸುವುದು ಒಂದು ಶ್ರೀಮಂತಿಕೆಯ ಸಂಕೇತವು ಆಗಿತ್ತು. ಕೆಲವರು ಶೋಕಿಗಾಗಿ (ಚಂದಕ್ಕಾಗಿ) ಬಳಸುತ್ತಿದ್ದರು.

ಕೋಲು ಹಿಡಿದುಕೊಂಡು ಪೋಟೊಕ್ಕೆ ಪೋಜುಕೊಡುವ ರಾಜರುಗಳು,

ಶ್ರೀಮಂತರೂ ಕಡಿಮೆ ಇರಲಿಲ್ಲ. ವ್ಯಾಪಾರಕ್ಕಾಗಿ ಬಂದ ಬ್ರಿಟೀಶರು ಆಳಲು ಆರಂಭಿಸಿದಾಗ ಇಲ್ಲಿಯ ರಾಜರುಗಳ ಕೋಲಿನ ಮೋಹಕ್ಕೆ ಒಳಗಾಗಿ ಕೋಲು ಹಿಡಿದುಕೊಂಡು ಫೋಜು ಕೊಟ್ಟಿರುವ ಅನೇಕ ಚಿತ್ರಗಳು ನಮಗೆ ದಾಖಲೆಗೆ ಸಾಕ್ಷಿಯಾಗಿವೆ. ಗಾಂಧಿಜಿಯವರನ್ನು ಕೋಲಿಲ್ಲದೆ ಸ್ಮರಿಸಿಕೊಳ್ಳುವುದು ಆಗುವುದಿಲ್ಲ.

ಚಾಳಿಸು ಬಂದರೆ ಕಣ್ಣು ಸುಮಾರಾಗಿವೆ ಎನ್ನುವ ಅರ್ಥ ಹೇಗೊ ಕೋಲು ಬಂದರೆ ದೇಹ ನಿಯಂತ್ರಣ ತಪ್ಪುತ್ತಿದೆ ಎನ್ನುವ ಸೂಚಕ. ಬಡವರಿಗೆ ಕೋಲೆಂದರೆ ಜಾಲಿಮರದ ಡೊಂಕಾದ ಕಟ್ಟಿಗೆ. ಅದು ಆಯಾ ತಪ್ಪಿ ಬೀಳುವ ಜನರಿಗೆ ಆಸರೆ-ಯಾಗುವಂತಹದ್ದಾಗಿತ್ತು ಆದರೆ ಶ್ರೀಮಂತರಿಗೆ ವಾಕಿಂಗ್ ಸ್ಟಿಕ್.. ಮಂದಾರ, ನಾಗರ ಬೆತ್ತ, ಕೆಲವೊಂದು ಜಾತಿಯ ಬಿದಿರುಗಳು, ಪೇರಲ, ತೇಗ, ಸಾಗುವಾನಿ, ಕುಂಟಾಲ ಇತ್ಯಾದಿ. ಮರಗಳಿಂದ ತಯಾರಾದಂತಹವು... ಇತ್ತೀಚಿಗೆ ಪ್ಲಾಸ್ಟಿಕ್... ಅಲ್ಯುಮಿನಿಯಂ ಕೋಲುಗಳು ಜೊತೆಗೆ ಫೋಲ್ಡಿಂಗ್ ಕೋಲುಗಳ ಬಂದಿವೆ...



ನಮ್ಮಪ್ಪಾಜಿಯವರ ಆತ್ಮೀಯ ದೋಸ್ತರು ಅಮರಯ್ಯ ಮಾಸ್ತರ ಕೈಯಲ್ಲಿ ಯಾವಾಗಲೂ ನೀಟಾದ ಕೋಲು ಇರುತ್ತಿತ್ತು. ಅವರ ಮನಿಗೆ ಹೋದಾಗ ನಮ್ಮಪ್ಪ ಅದೆ ಹಳೆಯ ಕಟ್ಟಿಗೆ ಹಿಡಿದುಕೊಂಡು ಹೋಗುತ್ತಿದ್ದ. ಬಟ್ಟೆ ಕೂಡಾ ಅಷ್ಟಕಷ್ಟೆ ಅಮರಯ್ಯ ಮೇಷ್ಟ್ರುದು ಟೀಕು-ಟಾಕಾದ ಡ್ರೆಸ್...ಕೋಟು ಕೈಯಲ್ಲಿ ಚಂದದ ಬಡಿಗೆ. ಅಂತಸ್ಥಿನ ಮೇಲೆ ಅಳೆಯುವ ಈ ಕಾಲದಲ್ಲಿ ಅವರ ಗೆಳೆತನದಲ್ಲಿ ಏನೂ ಆಗಿರಲಿಲ್ಲ. ನಮ್ಮಪ್ಪನ ಬಗ್ಗೆ ಒಮ್ಮೊಮ್ಮೆ ಮೇಷ್ಟ್ರಾಗಿದ್ದು ಕರ್ಣನಂತೆ ಎಲ್ಲವನ್ನೂ ಅನ್ಯರಿಗೆ ಮಾಡಿ ತಾನು ತನ್ನ ಮಕ್ಕಳು ಈ ಸಮಯದಲ್ಲಿ ಒದ್ದಾಡಬೇಕಾದ ಅನಿವಾರ್ಯತೆ ಏನು ಇತ್ತೋ? ಎಂತಹ ವಿಶಾಲ ಬುದ್ಧಿ ಅಪ್ಪನದು ಎಂದು ನೆನಪಿಗೆ ಬಂದು ಅಭಿಮಾನ ಹೆಚ್ಚುತ್ತಿತ್ತು .

ನಾನು ಬಳ್ಳಾರಿಗೆ ಓದಲು ಹೋದಲು ಹೋದಾಗ ನನಗೆ ಅಪ್ಪ ಕೊಡುತ್ತಿದ್ದ ನೂರು ರೂಪಾಯಿಯಲ್ಲಿಯೆ ದುಡ್ಡು ಉಳಿಸಿ ಒಂದು ಚಂದದ ಕೋಲನ್ನು ತಂದುಕೊಟ್ಟೆ. ಆ ಚಂದದ ಕೋಲನ್ನು ನೋಡಿ ಅಪ್ಪ ಸಂಭ್ರಮಿಸಿದ್ದು ಅಷ್ಟಿಷ್ಟಲ್ಲ. ಬೆತ್ತದ, ಬಾಗಿದ, ಎಲಾಸ್ಟಿಕ್ ನಂತೆ ವಿಶೇಷವಾಗಿ ಮುದ ನೀಡುತ್ತಿದ್ದ ಬಣ್ಣದ ಕೋಲಿನೊಂದಿಗೆ ಹೊಸ ಹುರುಪಿನೊಂದಿಗೆ ಅಡ್ಡಾಡಿದ್ದ, ಮಗ ಬಳ್ಳಾರಿಯಿಂದ ತಂದು ಕೊಟ್ಟದ್ದು ಎಂದು ಹೇಳಿಕೊಳ್ಳುತ್ತಾ.....

ಕೋಲು ಆಸ್ಮಿತಯೆ ಸಂಕೇತ. ಅಜ್ಜಂದರಿಗೆ ನಡೆದಾಡಲು ಆಸರೆಯಾಗುವ ಸಾಧನವಾದರೆ ಮೊದಲೇ ಹೇಳಿದ ಹಾಗೆ ಮಕ್ಕಳಿಗೆ ಅದು ಸುಲಭವಾಗಿ ಸಿಗುವ ಆಟಿಕೆಯ ವಸ್ತು. ಕೋಲನ್ನೆ ಎರಡು ಕಾಲುಗಳ ನಡುವೆ ಸಿಕ್ಕಿಸಿಕೊಂಡು ಆಡುವ ಓಡುವ ಪರಿ, ಖುಷಿ ನೀಡುವಂತಹದ್ದು. ಮನೆಯಲ್ಲಿ ಏನಾದರೂ ಬಂದರೆ ಓಡಿಸಲು ಸುಲಭವಾಗಿ ಸಿಗುವ..ಒಮ್ಮೊಮ್ಮೆ ಮಕ್ಕಳಿಗೆ ಶಿಕ್ಷೆ ನೀಡುವ ಸಾಧನವು ಹೌದು...

ಬಾಲ್ಯದಲ್ಲಿ ಎಲ್ಲರೂ ಕೇಳಿರುವ ಸಿದ್ಧಯ್ಯ ಪುರಾಣಿಕರ 'ಅಜ್ಜನ ಕೋಲಿದು...'

ಕವಿತೆ ಎಲ್ಲಾ ಕಾಲದ ಫೇವಿರೆಟ್. ಐ.ಎ.ಎಸ್. ಅಧಿಕಾರಿಗಳೂ ಗಂಭೀರ ಕವಿಗಳು ಆಗಿದ್ದ ಪುರಾಣಿಕರು ಇಂತಹ ಕವಿತೆ ರಚಿಸಿದ್ದು ಆಕಸ್ಮಿಕವೇ. ಒಮ್ಮೆ ಗುರುಗಳಾದ ತವಗ ಭೀಮಸೇನರಾಯರ ಮನೆಗೆ ಹೋಗಿದ್ದಾಗ ಅವರು ಸತ್ಯಾರ್ಥ ಪುಸ್ತಕ ಮಾಲೆಗೆ ಪಠ್ಯಗಳನ್ನು ಸಿದ್ಧಪಡಿಸುತ್ತಿದ್ದರಂತೆ..ಮನೆಗೆ ಬಂದ ಸಿದ್ಧಯ ಪುರಾಣಿಕರಿಗೆ ಕುಶಲೋಚಾರ ವಿಚಾರಿಸಿ ಪೆನ್ನು ಹಾಳೆ ನೀಡಿ 'ಮಕ್ಕಳಿಗಾಗಿ ಪದ್ಯ ಈಗಲೇ ಬರೆದು ಕೊಡಿ' ಎಂದು ನೀಡಿದಾಗ ಹುಟ್ಟಿದ್ದು ಅದ್ಭುತವಾದ ಈ ಕವಿತೆ. ಅವರು ಕೋಲಿನೊಂದಿಗೆ ಒಡನಾಡಿದ್ದಕ್ಕಾಗಿ ಇಂತಹ ಪದ್ಯ ಸಾಧ್ಯವಾಗಿದ್ದು.

ನಮ್ಮ ಭಾಗದ ಹಿರಿಯ ಸಾಹಿತಿಗಳಾದ ಡಾ.ಸ್ವಾಮಿರಾವ್ ಕುಲಕರ್ಣಿಯವರು ಅಪ್ಪನ ಶಿಷ್ಯರು. ಕಾಲಿಲ್ಲದಿದದ್ರೂ ಪ್ರೈಮರಿ ಶಾಲೆಯಲ್ಲಿ ಮೇಲಿನ ಹಾಡನ್ನು ಕೋಲನ್ನೆ ಕುದರೆಯಾಗಿಸಿಕೊಂಡು ಅಭಿನಯಪೂರ್ವಕವಾಗಿ ಅಭಿನಯಿಸಿ ತೋರಿಸುತ್ತಿದ್ದನ್ನು ಈಗಲೂ ಸ್ಮರಿಸುತ್ತಾರೆ. ಹಲವು ಲೇಖನಗಳಲ್ಲೂ ಹಂಚಿಕೊಂಡಿದ್ದಾರೆ.

ಅಜ್ಜನ ಕೋಲಿದು ನನ್ನಯ ಕುದುರೆ

ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ

ಕಾಲಿಲ್ಲದೆಯೇ ನಡೆಯುವ ಕುದುರೆ

ಕೂಳಿಲ್ಲದೆಯೇ ಬದುಕುವ ಕುದುರೆ

ನಾಲನು ಬಡಿಸದ ಜೂಲವ ಹೊದಿಸದ

ಲಾಲನೆ ಪಾಲನೆ ಬಯಸದ ಕುದುರೆ

ಎಂದು ಸಿದ್ಧಯ್ಯ ಪುರಾಣಿಕರು ಕೋಲಿನ ವ್ಯಾಪಕತೆಯನ್ನು ತಿಳಿಸಿದ್ದಾರೆ. ಅವರು ಚಂದಪ್ಪನಿಗೆ ಚಿಗುರೆ, ಶಿವನಿಗೆ ನಂದಿ, ರಾಮನಿಗೆ ಹನುಮ, ಗಣಪನಿಗೆ ಇಲಿ ಇರುವ ಹಾಗೆ ನನಗೂ ಕೋಲೆ ಅನ್ನುವ ಮಾತು ಎಷ್ಟು ಚಂದ...

ನನ್ನದು ಎಂತಹ ಕುದರೆ ಎನ್ನುವ ಬಗ್ಗೆ 'ನಿಂತರೆ ನಿಲ್ಲುವ, ಓಡಿದರೆ ಓಡುವ, ಕಾಡದ ಬೇಡದ' ಎನ್ನುವಂತಹ ಸಾಲುಗಳು ಮಾರ್ಮಿಕ. ಕಾತೆವಾಡದಲ್ಲಿಯೂ ಸಿಗದ ಅರಬದೇಶದಲ್ಲೂ ಕಾಣದ ರಾಜರ ಮಕ್ಕಳಿಗೂ ದೊರಕದ ಈ ಕೋಲು ಕುದರೆ ಮಕ್ಕಳಿಗೆಲ್ಲ ಉಚಿತವಾಗಿ ಖುಷಿ ಕೊಡುವ ಕುದರೆಯನ್ನುವಂತಹ ಮಾತು ಎಷ್ಟು ಚಂದ.....

ಕೋಲು ಕೇವಲ ಮುದುಕರಿಗೆ ಮಾತ್ರವಲ್ಲ.....ಸ್ವಾಮಿಗಳು ದೀಕ್ಷೆ ಪಡಿಬೇಕಾದರೆ ಕೋಲೆ ಅವಶ್ಯಕ.. ದೀಕ್ಷಾ 'ದಂಡ' ತಮ್ಮ ಗುರುಗಳಿಂದ ಪಡೆಯುವ ಮಹತ್ವದ ಕೋಲು. ಗುರುಗಳಿಂದ ಪಡೆದ ಕೋಲು ಅವರ ಪೂಜಾ ಕಾರ್ಯದಲ್ಲೂ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ಇನ್ನೂ ಕೋಲು ಕಾಲ ಎಷ್ಟೆ ಬದಲಾದರೂ ಹೈಟೆಕ್ ಮನೆಗಳೂ ನಿರ್ಮಾಣವಾದರೂ ಬೇರೆ ಧರ್ಮಿಯರಲ್ಲಿ ಹೇಗಿದೆ ಏನೊ ಬ್ರಾಹ್ಮಣರಲ್ಲಿ ಮಡಿ ಬಟ್ಟೆ ಹಾಕಲು ಕೋಲು ಬೇಕೆ ಬೇಕು... ನಮ್ಮವ್ವ ಅಂತೂ ಯಾವುದೆ ಮನೆ ಹೋಗಲಿ ಕೋಲು ಕಟ್ಟಾಕ ಅವಕಾಶ ಇದ್ರ ಮಾತ್ರ ಓ.ಕೆ ಅನ್ನೋಳು ಇಲ್ಲಂದ್ರಾ 'ಎಂತಹಾ ಮನ್ಯಾಗ ತಂದು ಹಾಕಿದಲೆ ಮುಂಡೆಗಂಡ' ಎಂದು ಹಿಡಿ ಶಾಪ ಹಾಕೋಳು. ಅದು ಅನಿವಾರ್ಯ ಕೂಡಾ.

ಇನ್ನೂ ಪೋಲಿಸರಿಗೆ ಅದು ಅಗತ್ಯ ಹಾಗೂ ಅನಿವಾರ್ಯದ ವಸ್ತು. ಪೋಲಿಸೊಬ್ಬ ಜೀವಮಾನದಲ್ಲಿ ಬಂದೂಕಿನಿಂದ ಒಂದು ಗುಂಡು ಹೊಡೆಯದಿದ್ದರೂ ಕೋಲಿನಿಂದ ಬಾರಿಸಿಯೇ ಬಾರಿಸಿರುತ್ತಾರೆ. ಕೋಲು ಕೈಯಲ್ಲಿದ್ದರೆ ಅವರಿಗೆ ಗತ್ತು. ಮೊನ್ನೆ ಕೊರೋನಾ ಟೈಮಲ್ಲಿ ಬಹಳ ಕೆಲಸ ಮಾಡಿದ್ದೆ ಪೋಲಿಸರ ಕೋಲು.

ದನಗಳು ಮಾತನ್ನು ಕೇಳಲಿ ಎಂದೆ ಕೋಲನ್ನು ಅದೆ ಬಾರಕೋಲನ್ನು ಬಳಸುತ್ತಾರೆ. ಶಾಲೆಯಲ್ಲೂ ಅಷ್ಟೆ ಮಕ್ಕಳೆಂಬ ಪಶುಗಳನ್ನು ನಿಯಂತ್ರಿಸಲು ಕೋಲು ಅನಿವಾರ್ಯ. ಹೊಸ ಶಿಕ್ಷಣ ನೀತಿ ಕೋಲು ಬಳಕೆ ನಿಲ್ಲಿಸಬೇಕೆಂದಿದ್ದರೂ ಹಲವು ಕಾನೂನುಗಳ ಉಲ್ಲಂಘನೆಯಂತೆ ಅದೂ ಕೂಡಾ ಉಲ್ಲಂಘನೆಯಾಗಿ ಯಗ್ಗಾಬಿಗ್ಗಿಯಾಗಿ ಬಳಕೆಯಾಗುತ್ತಿದೆ. ಮಕ್ಕಳು ಅಷ್ಟೆ ಹೊಡೆಯುವ ಮೇಷ್ಟನ್ನ ಕಂಡ್ರಷ್ಟೆಲ್ಲಾ ಮುಚ್ಚುಗೊಂಡು ತೆಪ್ಪಗಿರೋವು. ಕೋಲು ಇನ್ನೂ ಶಾಲೆಯಲ್ಲಿ ಹೆಡ್ ಮಾಷ್ಟ್ರ ಟೇಬಲ್ ಮೇಲೆ ವಿರಾಜಿಸುವ ವಸ್ತು. ಗೆರೆ ಎಳೆಯಲೂ ಅದು ಇಲ್ಲದಾಗ ಬಲಪ್ರಯೋಗಿಸಲು. ಇನ್ನೂ ಎಲ್ಲಿಯಾದರೂ ಮಾತಿಗೆ ಮಾತು ಬೆಳೆದರೆ ಜಗಳಕ್ಕೆ ನೆರವಾಗುವ ವಸ್ತುವೆ ಈ ಕೋಲುಗಳು....ನಮ್ಮ ಚಾರ್ಲಿಚಾಪ್ಲಿನ್ ಪ್ರಸಿದ್ಧ ಹೊಂದಬೇಕಾದರೆ ಅವನ ಫೇಸ್, ಬಾಡಿ ಲಾಂಗ್ವೇಜ್ ಜೊತೆಗೆ ಎತ್ತರಕ್ಕೇರಿಸಿದ್ದು ಅವನ ಕೈಯಲ್ಲಿ ಸದಾ ಇರುತಿದ್ದ ಕೋಲೆ ಆಗಿದೆ.

ಕೋಲು ಬೇಕು ಮಕ್ಕಳಿಗೆ ಚಿಣ್ಣಿ ದಾಂಡು ಆಡಲು, ಕ್ರಿಕೇಟ್ ಆಡಲು, ಚಿಮ್ಮುವ ಆಟ ಆಡಲು, ಹೈಜಂಪ್ ಆಡಲು...ಜೊತೆಗೆ ಕೋಲಾಟವಾಡಲು ಬೇಕೆ ಬೇಕು ಶಿಶುನಾಳ ಶರೀಫರು ಹೇಳಿರುವ ಹಾಗೆ 'ಬಿದಿರು ನಾನಾರಿಗಲ್ಲಾದವಳು'

ಹುಟ್ಟುತ್ತ ಹುಲ್ಲಾಗಿ, ಬೆಳೆಯುತ್ತಾ ದಿವಿಯಾಗಿ, ಮಕ್ಕಳನ್ನು ತೂಗುವ ತೊಟ್ಟಿಲಾಗಿ, ಪಲ್ಲಕ್ಕಿಯ ದಂಡಿಗೆಯಾಗಿ...ಪತ್ರೆಯ ಬುಟ್ಟಿಯಾಗಿ, ಮಹಾತ್ಮರ ಕೈಗೆ ಬೆತ್ತವಾಗಿ, ಒನಕೆಯಾಗಿ ಅಂಬಿಗಗೆ ಕೋಲಾಗಿ ರೈತನಿಗೆ ಬಿತ್ತುವ ಕೂರಿಗ್ಯಾಗಿ ಬಹು ಉಪಯೋಗಿ-ಯಾಗುವುದಲ್ಲದೆ..... ಬೀಸುವ ಕಲ್ಲಿನ ಗೂಟ, ನಂದಿಯ ಕೋಲು, ಚಪ್ಪರಕ್ಕೆ ಆಡುವ ಕೋಲಾಗಿ, ಹೂಡಲು ಚಕ್ಕಡಿಯಾಗಿ ನೆರಳಿಗೆ ಚಪ್ಪರವಾಗಿ ಓಲಗಕ್ಕಾಗಿ ಬಿದಿರು ಅರ್ಥಾತ್ ಕೋಲು ಸಾರ್ಥಕಗೊಳ್ಳುತ್ತದೆ ಎಂದು ಶರೀಫರು ಬಿದಿರು ಅರ್ಥಾತ್ ಕೋಲಿನ ಪಯಣವನ್ನು ಚಂದವಾಗಿ ಕಟ್ಟಿಕೊಡುತ್ತಾರೆ.

ಕೋಲು ಮೊದಲೆ ಹೇಳಿದ ಹಾಗೆ ರೈತರ ಸರ್ವ ಕಾರ್ಯಗಳಿಗೆ ಬೇಕೆಬೇಕು. ಮದುವೆ ಮನೆಯಲ್ಲಿ ಚಪ್ಪರ ಹಾಕಲು...ಈಗಂತೂ ನಾನಾ ನಮೂನಿ ಪ್ರಚಾರದ ಬ್ಯಾನರ್ ಗಳನ್ನು ಕಟ್ಟಲು ದೊಡ್ಡ ಉದ್ಯಮವಾಗಿರುವ ಸಂಗತಿ. ಸತ್ತಾಗ ಚಟ್ಟ ಕಟ್ಟಲೂ ಕೋಲುಗಳು ಬೇಕು...ದೇವರ ಪಲ್ಲಕ್ಕಿಗೂ ಬೇಕು..ದೀವಟಿಗೆ ಹಿಡಿಯಲೂ ಬೇಕು...ಎಲ್ಲದಕೂ ಬೇಕೆ ಬೇಕು. ದೊಂಬರವಾಟವಾಡಿ ಬದುಕು ದೂಡುವ ಅಲೆಮಾರಿ ಜನಾಂಗದ ಆ ಹೆಣ್ಣುಮಕ್ಕಳು ತಂತಿಮ್ಯಾಲೆ ನಡೆಯುವಾಗ ಅವರ ಬ್ಯಾಲೆನ್ಸಾಗಿ ಬಳಸುವುದು ಈ ಕೋಲನ್ನೆ...

ಮೊಣಕಾಲು ತೊಂದರೆ ಇದ್ದವರಿಗೆ, ಕಾಲು ಮುರಿದುಕೊಂಡವರಿಗೆ, ಅಶಕ್ತರಿಗೆ ಈಗ ನಾನಾ ನಮೂನಿ ಮೆಟಲ್ ಸ್ಟ್ಯಾಂಡ್‌ಗಳು ಬಂದಿವೆ. ಆದರೆ ವಯೋವೃದ್ಧರ ಕೈಯಲ್ಲಿನ ಶೃಂಗಾರವಾಗಿದ್ದ ಕೋಲುಗಳು ಇಂದು ಕಾಣದಾಗಿರುವುದು ದುರಂತ... ಯಾಕೆ ಉಪಯೋಗಿಸಲ್ವೇನೂ ಅಂದ್ರೇನೂ? ಇಲ್ಲ ಆ ವಯಸ್ಸು ಬರುವುದರೊಳಗೆ ಜನ ಜಾಗ ಖಾಲಿ ಮಾಡತಿರೋದಿಂದ್ರ. ಕೋಲುಗಳು ಅನಾಥವಾಗತ್ತಿವೆ.

●

# ಹಳ್ಳಿಯಾದರೇನು ಸಿವಾ ?.. ಅಲ್ಲಾ, ಹಳ್ಳಿಯೇ ಸಿವಾ

✍ವಿ.ವಿಜಯೇಂದ್ರ ರಾವ್

ಮಂಡ್ಯದ ಬಳಿಯ ಒಂದು ಊರಿನ ಜೂನಿಯರ್ ಕಾಲೇಜಿನಲ್ಲಿ ಕಲಿಯುತ್ತಿದ್ದ ಮಂಗಳ ಮತ್ತು ಮಲ್ಲಿಕಾ ರವರ ನಡುವಿನ ಸ್ವಾರಸ್ಯಕರ ಸಂಭಾಷಣೆ ಫೈನಲ್ ಪರೀಕ್ಷೆ ಸ್ವಲ್ಪವೇ ದಿನಗಳು ಇರುವಾಗ .......

ಮಂಗಳ: ಏಯ್ ಮಲ್ಲಿಕಾ, ನೀನು ಯಾಕೆ ಪರೀಕ್ಷೆ ಹತ್ತಿರ ಬಂದರೂ ಸರಿಯಾಗಿ ಓದುತ್ತಾ ಇಲ್ಲ ?

ಮಲ್ಲಿಕಾ : ನನಗೆ ಈ ಪರೀಕ್ಷೆ ಪಾಸ್ ಮಾಡಲು ಇಷ್ಟವಿಲ್ಲ, ಅದಕ್ಕೆ ಸರಿಯಾಗಿ ಓದುತ್ತಾ ಇಲ್ಲ.

ಮಂಗಳ: ಹೌದಾ, ನನಗೆ ಆಶ್ಚರ್ಯವಾಗ್ತಾ ಇದೆ, ನೀನು ಯಾಕೆ ಪರೀಕ್ಷೆಯಲ್ಲಿ ಫೇಲ್ ಆಗಬೇಕು ?

ಮಲ್ಲಿಕಾ: ನಾನು ಪಾಸಾದರೆ, ನಾನು ಮುಂದೆ ಬೇರೆ ಊರಿಗೆ ಹೋಗಿ ಕಾಲೇಜಿನಲ್ಲಿ ಓದಬೇಕು, ಆಮೇಲೆ ಬೆಂಗಳೂರಿನಲ್ಲಿ ಕೆಲಸದಲ್ಲಿರುವ ಯಾವುದೋ ವಿದ್ಯಾವಂತನನ್ನು ಮದುವೆಯಾಗಬೇಕು.

ಮಂಗಳ: ಓಹ್ ಹಾಗಾ..!, ಅದು ಒಳ್ಳೆಯದೇ ತಾನೇ, ಅದರಲ್ಲೇನು ತೊಂದರೆ?

ಮಲ್ಲಿಕಾ: ಅದರಲ್ಲೇನು ಹೆಚ್ಚುಗಾರಿಕೆ ಇದೆ ? ಈಗ ಸರಿಯಾಗಿ ಕೇಳು

* ಕಲುಷಿತ ವಾತಾವರಣ ಇರುವ ದೊಡ್ಡ ನಗರದಲ್ಲಿ ಯಾಕೆ ಇರಬೇಕು

* ಅಲ್ಲಿ ದಿನಕ್ಕೆ 12 ಗಂಟೆಗಳ ಕಾಲ ದುಡಿಯುವ ಗಂಡನು ಯಾಕೆ ಬೇಕು

* ಅವನ ಸಂಬಳ ಅಬ್ಬಬ್ಬಾ ಅಂದ್ರೆ..40ರಿಂದ 50 ಸಾವಿರ ರೂ. ಇರುತ್ತೆ

* ರಜಾದಿನಗಳಲ್ಲಿ ಸಹ ನನ್ನನ್ನು ಹೊರಗೆ ಕರೆದೊಯ್ಯದೆ ಕತ್ತೆ ದುಡಿದ ಹಾಗೆ ದುಡಿತಾನೆ.

* ಅವನ ಅರ್ಧ ಸಂಬಳ ಮನೆ ಬಾಡಿಗೆ, ನೀರು, ವಿದ್ಯುತ್ ಬಿಲ್ ಗೆ ಹೋಗುತ್ತೆ.

* ಇಲ್ಲ ಸಾಲ ಪಡೆದು ಪುಟ್ಟ ಮನೆ ಕಟ್ಟಿ, ಮುದುಕನಾಗುವವರೆಗೂ ಸಾಲ ತೀರಿಸ್ತಾನೆ ಇರ್ತಾನೆ.

* ಕಾಯಿಲೆ ಬಂದಾಗ ಡಾಕ್ಟರ್, ಔಷಧಿ ಅಂದ್ಕೊಂಡು ತುಂಬಾ ದುಡ್ಡು ಖರ್ಚು ಮಾಡ್ತಾನೆ.

* ವರ್ಷ ವರ್ಷವೂ ಇನ್ ಕಮ್ ಟ್ಯಾಕ್ಸ್ ಕಟ್ತಾನೆ ಇರ್ತಾನೆ.

* ಆರೋಗ್ಯ ಕಾಪಾಡ್ತೀನಿ ಅಂತ ಜಿಮ್, ಆರ್ಗಾನಿಕ್ ಫುಡ್, ಸಿರಿಧಾನ್ಯ ಅಂತ ತುಂಬಾ ಖರ್ಚು ಮಾಡ್ತಾ ಇರ್ತಾನೆ

ಮಂಗಳ : ಅದೆಲ್ಲಾ ಸರಿ, ಫೇಲ್ ಆಗಕ್ಕೆ ಯಾಕೆ ಪ್ಲಾನ್ ಮಾಡ್ತಿದ್ಯಾ ?

ಮಲ್ಲಿಕಾ: ಸರಿ ಕೇಳು, ಒಂದ್ವೇಳೆ ನಾನು ಫೇಲ್ ಆದ್ರೆ...

* ಮುಂದೆ ಓದಬೇಕಾಗಿಲ್ಲ

* ಯಾರಾದರೂ ಒಬ್ಬ ರೈತನನ್ನು ಇಲ್ಲೇ ಮದುವೆಯಾಗಬಹುದು.

* ಕಲುಷಿತ ಗಾಳಿಯಿಲ್ಲದೆ, ಶುದ್ಧ ಪರಿಸರದಲ್ಲಿ ಬಾಳಬಹುದು.



* ಕಲಬೆರಕೆ ಇಲ್ಲದ ಒಳ್ಳೆಯ ಆಹಾರ ಇಲ್ಲಿ ತಿನ್ನಬಹುದು.

* ಇಲ್ಲಿ ಒಳ್ಳೆಯ ಆರೋಗ್ಯ ಕಾಪಾಡಿಕೊಂಡು, ಡಾಕ್ಟರ್, ಔಷಧಿ ಖರ್ಚು ಉಳಿಸಬಹುದು.

* ರೈತರಿಗೆ ಸಿಗುವ ಉಚಿತ ವಿದ್ಯುತ್ ಸೌಲಭ್ಯ ಅನುಭವಿಸಬಹುದು.

* ಆದಾಯ ತೆರಿಗೆಯ ಗೋಜೆ ಇಲ್ಲಿರುವುದಿಲ್ಲ.

* ಗದ್ದೆ, ತೋಟದಲ್ಲಿ, ಅವನ ಕೆಲಸದಲ್ಲಿ ಸಹಾಯ ಮಾಡುತ್ತಾ ಮೂರು ಹೊತ್ತು ಗಂಡನ ಜೊತೆಗೆ ಇರಬಹುದು.

* ಸಬ್ಸಿಡಿಯಲ್ಲಿ ಬಿತ್ತನೆಗೆ ಬೀಜ, ಗೊಬ್ಬರ ಸಿಗುತ್ತೆ, ಅಕಸ್ಮಾತ್ ಮಳೆಯಿಂದಾಗಿ ಬೆಳೆ ಹಾಳಾದರೆ, ವಿಮೆಯ ಹಣ ಸಿಗುತ್ತೆ.

* ಯಾವುದೇ ಸಾಲ ಪಡೆದರೂ, ಚುನಾವಣೆಯ ಸಮಯದಲ್ಲಿ ಅದೆಲ್ಲಾ ಮನ್ನಾ ಆಗಿ ಬಿಡುತ್ತೆ.

ಮಂಗಳ: ಈ ಸಾಲ, ಸಾಲ ಮನ್ನಾ ಎಲ್ಲಾ ಹೇಗೆ ನಿಭಾಯಿಸ್ತಾರೆ ?

ಮಲ್ಲಿಕಾ: ಹಳ್ಳಿಯನ್ನು ಬಿಟ್ಟು, ಪಟ್ಟಣಕ್ಕೆ ಹೋಗಿ ಕತ್ತೆಯಂತೆ ದುಡಿಯುವ ಆ ಮೂರ್ಖರ ಹತ್ತಿರ ತೆರಿಗೆ ವಸೂಲಿ ಮಾಡಿ, ನಮಗೆ ಮನ್ನಾ ಮಾಡುತ್ತಾರೆ.

ಮಂಗಳ: ಅರ್ರೇ ವಾಹ್, ಇದು ಒಳ್ಳೆಯ ಐಡಿಯಾ, ನಾನು ಸಹ ಮನಃಪೂರ್ವಕವಾಗಿ ಫೇಲ್ ಆಗ್ತೀನಿ...!

ಆದ್ದರಿಂದ ಪೋಷಕರೇ... ನಿಮ್ಮ ಮಗಳು ಅಕಸ್ಮಾತ್ ಪರೀಕ್ಷೆಯಲ್ಲಿ ಫೇಲ್ ಆದರೆ ಚಿಂತಿಸಬೇಡಿ, ಹಳ್ಳಿಯ ರೈತನೊಂದಿಗೆ ಮದುವೆ ಮಾಡಿ ಬಿಡಿ....!

●

ಅಪಘಾತ ವಲಯದ ಸೂಚನಾ ಫಲಕದ ಹೊಸ ಸಾಲು:

**ಎಚ್ಚರಿಕೆ:–**

ನಿಧಾನವಾಗಿ ಹೋಗದಿದ್ದಲ್ಲಿ

ನಿಧನವಾಗಿ ಹೋಗುವಿರಿ!

# ಹೆಸರು–ಹೆಸರಿಗೊಂದು ಕೊಂಬು

**ಕೆ.ಎಸ್. ಸೋಮೇಶ್ವರ**

ನಮ್ಮಲ್ಲಿ ದೊಡ್ಡ ದೊಡ್ಡ ಹೆಸರುವಾಸಿ ವ್ಯಕ್ತಿಗಳನ್ನು ಅವರುಗಳ ಹೆಸರಿನ ಮುಂದೆ ಇರುವ ಅವರ ಮನೆತನದ ಹೆಸರಿನಿಂದಲೇ ಗುರುತಿಸುತ್ತೇವೆ.

ನಮ್ಮ ರಾಜ್ಯದಲ್ಲೇ ತೆಗೆದುಕೊಂಡರೆ ಉತ್ತರ ಕರ್ನಾಟಕದ ಭಾಗದಲ್ಲಿ ಈ ರೀತಿಯ ಮನೆತನದ ಹೆಸರುಗಳು ಸಾಕಷ್ಟು ಸಿಗುತ್ತವೆ. ಉದಾಹರಣೆಗೆ ಅಂಗಡಿ, ಉಳ್ಳಾಗಡ್ಡಿ, ಮೆಣಸಿನಕಾಯಿ, ಪಟೇಲ, ಪಾಟೀಲ ಹೀಗೆ. ಇದೇ ರೀತಿಯಲ್ಲಿ ದಕ್ಷಿಣ ಕನ್ನಡ  ಭಾಗದಲ್ಲಿ ಭಟ್ಟ, ಕಾಮತ, ಐತಾಳ. ನಮ್ಮ ಹಳೇ ಮೈಸೂರು ಭಾಗದಲ್ಲಿ ಇದು ಹೆಚ್ಚು ಕಡಿಮೆ ಇಲ್ಲವೇ ಇಲ್ಲ ಎನ್ನಬಹುದಾಗಿದೆ.

ಇನ್ನು ನಮ್ಮ  ರಾಜ್ಯ ಬಿಟ್ಟು ಮೇಲಕ್ಕೆ ಹೋದಲ್ಲಿ ಬಹುಪಾಲು ಎಲ್ಲ ರಾಜ್ಯಗಳ ಜನರ ಹೆಸರಿನ ಮುಂದೆ  ಒಂದು ಕೊಂಬು ಇದ್ದೇ ಇರುತ್ತದೆ. ಯಾದವ, ಸಿಂಧ್ಯ, ರಿಂದ ಮೊದಲಾಗಿ, ಭಟ್ಟಾಚಾರ್ಯ, ಉಪಾಧ್ಯಾಯ, ಬಂದೋಪಾಧ್ಯಾಯ. ಮುಖರ್ಜಿ, ಬ್ಯಾನರ್ಜಿ ಹೀಗೆ. ಕಾಶ್ಮೀರದವರಾದರೆ ರೈನಾಗಳೇ ಹೆಚ್ಚು ಕಾಣಿಸುತ್ತಾರೆ.

ಇಲ್ಲಿ ಕೆಲವು ಕ್ರೀಡಾಪಟುಗಳ ಹೆಸರಿನ ಮುಂದೆ ಇರುವ  ಮುಂದುವರಿದ ಭಾಗವನ್ನು ವಿಶ್ಲೇಷಣೆ ಮಾಡ ಹೊರಟಿದ್ದೇನೆ. ಇದಕ್ಕೆ ಸ್ಪೂರ್ತಿ ಅದೊಂದು ಕನ್ನಡ ಸಿನಿಮದಲ್ಲಿ ಗಂಡ ಹೆಂಡತಿ  ನಡುವಿನ ವಾಗ್ವಾದದಲ್ಲಿ ಕ್ರಿಕೆಟಿಗ ಬಾರ್ಡರ್ ಎಂದರೆ ಅವನು ಯಾವ ಭಾಗದ ಅಂಚು ಅಂತ ಹೇಳುತ್ತಾ ಇನ್ನೂ ಕೆಲವರ ಹೆಸರಿನ ಅರ್ಥ ಹೇಳಿಸಿದರು. ಇಲ್ಲಿ ಅಂತಹ ಕೆಲವರನ್ನು ತೆಗೆದುಕೊಂಡು  ಅವರ ಹೆಸರಿನ ಉತ್ತರಾರ್ಧವನ್ನು ಹೇಗೆ ಹೇಳಬಹುದು ಎಂದು ನೋಡಿದ್ದೇನೆ. ಬಹುತೇಕ ಇವರು ಕ್ರಿಕೆಟ್  ಪಟುಗಳೇ ಆಗಿದ್ದಾರೆ. ಯಾರಿಂದ ಆರಂಭಿಸಲಿ.

01. ಮೊದಲಿಗೆ ವಿಶ್ವ  ಕ್ರಿಕೆಟ್ ನ ಸಾರ್ವಕಾಲಿಕ ಆಲ್ ರೌಂಡರ್  ಸರ್ ಗಾರ್ ಫೀಲ್ಡ್ ಸೋಬರ್ಸ್ undefined.. ಇವರ ಹೆಸರಿನ ಮುಂದೆ ಸೋಬರ್ಸ್ undefined ಅಂದರೆ ಸೋಬರ್ ಅಥವಾ ಮೆದು ಸ್ವಬಾವ. ಆದರೆ ಇವರು ಫೀಲ್ಡಿಗಿಳಿದರೆ ಎದುರಾಳಿಗೆ ಥರಗುಟ್ಟಿಸುತ್ತಿದ್ದರು.

02. ಸರ್. ಡಾನ್ ಬ್ರಾಡ್ ಮನ್–. ಇವರ ಹೆಸರ ಮೊದಲೇ 'ಡಾನ್' ಅಂದರೆ ನಮಗೆ ಬೇರೆಯೇ ಅರ್ಥ ಕೊಡುತ್ತದೆ. ಇನ್ನು ಬ್ರಾಡ್ ಮನ್ ವಿಶಾಲ ಮಾನವ.

03. ಹ್ಯಾರಿ ಟ್ರೂಮನ್ – ಇವರು ನಿಜವಾದ ಮನುಷ್ಯನೇ ಸರಿ.

04.ಡೆರಿಕ್ ಅಂಡರ್  ವುಡ್ –  ನಮ್ಮಲ್ಲಿ ಟೇಬಲ್ ಕೆಳಗೆ ಎಂದರೆ ಏನೇನೊ ವಿಷಯ ಸಿಗುತ್ತದೆ. ಇಲ್ಲಿ ವುಡ್  ಕೆಳಗೆ ಅಂದರೆ ಅದೇ ಆಗಬಹುದೇ. ಮರದ ಅಡಿಯಲ್ಲೂ ಇರಬಹುದೇನೋ.

05. ಅಲಿಸ್ಟರ್ ಕುಕ್ – ಇವರು ಕುಕ್ ಮಾಡ್ತಾರೆಯೋ ಇಲ್ಲ ಯಾರನಾದರೂ ಕುಕ್ಕುತ್ತಾರೆಯೋ ಅವರೇ ಚಾಕೊಲೆಟ್ ಕುಕಿಸ್ ತರಹ ಹೇಳಬೇಕು.

06. ಕರ್ಟನಿ ಆಂಬ್ರೋಸ್–ಅಂಬ್ರೋಸ್ ಅಂದರೆ ಅಜರಾಮರವಂತೆ. ಕ್ರಿಕೆಟ್ ಮೈದಾನದಲ್ಲಂತೂ ಅಜೇಯನೇ ಸರಿ.

07. ಸ್ಟೀಫನ್ ಫ್ಲೆಮಿಂಗ್–ಫ್ಲೆಮಿಂಗ ಹೆಸರೇ ಅಂಜದ ಗಂಡು. ಆಟದ ಮೈದಾನದಲ್ಲೂ ಅದೇ ಸರಿ.

08. ಕೀತ್ ಮಿಲ್ಲರ್–ಮಿಲ್ಲರ್–ಅಂದರೆ ಕುಶಲ ಕರ್ಮಿ. ಈ ಹೆಸರಿನ ಅರ್ಥ

ಕಳ್ಳ ಅಥವಾ ಮನೆಗ ಕನ್ನಹಾಕುವವ ಅಂತ ಆಡು ಭಾಷೆಯಲ್ಲಿ ಇದೆಯಂತೆ. ಆದರೇನು ಕ್ರಿಕೆಟ್ ಆಟ ಮತ್ತು ವೀಕ್ಷಕ ವಿವರಣೆಯಲ್ಲಿ ಮನೆ ಮಗನೇ ಸರಿ.

09. ವಿಕ್ಟರ್ ಟ್ರಂಪರ್–ಟ್ರಂಪರ್ ಅಂದರೆ ಪೀಪಿ ಬಾರಿಸುವವ. ಕ್ರಿಕೆಟ್‌ನಲ್ಲಿ ಹೆಸರು ಕೇಳಿದ್ದೇನೆಯೇ ಹೊರತು ಆಟದ ತುತ್ತೂರಿ ಅಷ್ಟಾಗಿ ನನಗೆ ಕೇಳಿಸಿಲ್ಲ



10. ಡೆನಿಸ್ ಲಿಲಿ–ಇವರು ಲಿಲಿ ಹೂವಿನಂತೆ ಮೃದುವಂತು ಅಲ್ಲವೇ ಅಲ್ಲ. ಇವರ ವೇಗದ ಬೌಲಿಂಗಿಗೆ ಬ್ಯಾಟರುಗಳು ಮುದುಡಿದ ತಾವರೆ ಅಲ್ಲಲ್ಲ ಲಿಲಿ ಹೂವೇ ಸರಿ.

11. ಅಲನ್ ಬಾರ್ಡರ್–ಇವರಾವ ದೇಶದ ಗಡಿಯೋ, ಯಾವ ಸುಂದರಿಯ ರೇಶಿಮೆ ಸೀರೆಯ ಅಂಚೋ ತಿಳಿಯದು. ಆದರೆ ಅವರ ದೇಶದ ಕ್ರಿಕೆಟಿಗಂತೂ ಕಾವಲುಗಾರನೇ ಸೈ.

12. ಮೈಕೆಲ್ ಕ್ಲಾರ್ಕ್–ಇವರೆಲ್ಲಿ ಕ್ಲಾರ್ಕ್ ಅಥವಾ ಕಾರಕೂನ ಅಥವಾ ಕರಣಿಕರು ಆಗಿದ್ದರೋ ತಿಳಿಯದು ಕ್ರಿಕೆಟಿನಲ್ಲಂತೂ ಅಧಿಕಾರಿಯೇ ಸೈ.

13. ಬಿಲ್ ಲಾರಿ–ಇವರು ಬಿಡಿ ಬ್ಯಾಟ್ ಬೀಸಿದರೆ ಹೈವೇನಲ್ಲಿ ಎಲ್ಲರೂ ದಾರಿ ಬಿಡಿ ಎನ್ನುತ್ತಾ ಲಾರಿ ಓಡಿಸಿದಷ್ಟೇ ರಭಸ.

14. ಡಬ್ಲ್ಯು. ಇ. ಗ್ರೇಸ್–ಇವರು ಯಾರಿಗೆ ಗ್ರೇಸ್ ಅಂದರೆ ಆಶೀರ್ವಾದ ಮಾಡುತ್ತಿದ್ದರೋ ಆದರೆ, ಇವರ ಕ್ರಿಕೆಟ್ ಅಂತೂ ಗ್ರೇಸ್ ಫುಲ್.

15. ಪೀಟರ್ ಮೇ– ಮೇ ಆರ್ ಮೇ ನಾಟ್ ಬಿ. ಮೇ ಮಾಸಂ ಅಂತ ಒಂದು ತಮಿಳು ಸಿನಿಮ ಹೆಸರು ಕೇಳಿದ್ದೇನೆ.

16. ಜೆಫ್ ಬಾಯ್ ಕಾಟ್ – ಬಾಯ್ ಕಾಟ್ ಅಂದರೆ ಬಹಿಷ್ಕಾರ. ಹುಟ್ಟುವಾಗಲೇ ಎಲ್ಲೆಲ್ಲಿ ಬಾಯ್ ಕಾಟ್ ಅಂತ ಹೇಳಿದ್ದರೋ ತಿಳಿಯದು. ಕ್ರಿಕೆಟಿಗಂತೂ ಇವರನ್ನು ಬಾಯ್ ಕಾಟ್ ಮಾಡುವಂತೆಯೆ ಇರಲಿಲ್ಲ.

17. ಜೋಸೆಫ್ ರೂಟ್–ಯಾವ ವಂಶದ ಕುಡಿಯೋ. ಕ್ರಿಕೆಟಿಗಂತೂ ತಮ್ಮ ನೆಲೆಯನ್ನು ಭದ್ರವಾಗಿ ರೂಟ್ ಮಾಡಿಕೊಂಡವರು.

18. ಆಲನ ನಾಟ್–ನಾಟ್ ಎಂದರೆ ಇಲ್ಲ, ಬೇಡ ಸರಿಯೇ ಇವರು ವಿಕೆಟ್ ಹಿಂದೆ ನಿಂತರೆ ಅಲ್ಲಿ ನಾಟ್ ಎಂಬ ಪ್ರಶ್ನೆಯೇ ಇರುತ್ತಿರಲಿಲ್ಲ... ಏಕೆಂದರೆ ವಿಕೆಟ್ ಮೇಲಿನ ಬೇಲ್‌ಗಳು ನಾಕ್ ಆಗಿ ಬ್ಯಾಟರುಗಳು ಔಟ್ ಆಗಿರುತ್ತಿದ್ದರು.

19. ಸೈಡ್ ಬಾಟಂ–ಬೆಲ್ ಬಾಟಂ ಸರಿಯೇ. ಆದರೆ, ಇವರು ಇವರು ಒಂದು

ಪಕ್ಕದ ಬಾಟಂ ಅಂತಿದ್ದಾರೆ. ಇಂಗ್ಲೆಂಡ್ ಕೌಂಟಿಯಲ್ಲಿ ಯಾವ ಪಕ್ಕದಲ್ಲಿ ಇರುತ್ತಿದ್ದರೋ?

20. ಎವರ್ ಟನ್ ವೀಕ್ಸ್–ಆಗಿನ ಕಾಲದ ಇವರ ಆಟವೇ ವೀಕ್ ಲಾಂಗ್, ವೀಕ್ ಎಂಡ್ ಟನ್ ಗಟ್ಟಲೆ ಮನರಂಜನೆ. ಅದು ವೀಕ್ಷಕ ವಿವರಣೆಯಲ್ಲೂ ಇರುತ್ತಿತ್ತು.

21. ಮೈಕೆಲ್ ಹೋಲ್ಡಿಂಗ್–ಹೋಲ್ಡಿಂಗ್ ಅಂದರೆ ಹಿಡಿದಿಟ್ಟುಕೊಳ್ಳುವುದು. ಅದೇನೇ ಇರಲಿ ಎದುರಿನ ಬ್ಯಾಟ್ಸ್ ಮನ್‌ಗಳಿಗೆ ಇವರ ಹಿಡಿತ ಕಬಂಧ ಬಾಹುವೇ ಸರಿ.

22. ಮೈಕ್ ಪ್ರೋಕ್ಟರ್–ಇವರ ಹೆಸರೇ ವಿಶ್ವ ವಿದ್ಯಾಲಯದ ದ ಶಿಸ್ತುಪಾಲನಾ ಅಧಿಕಾರಿ ಅಥವಾ ವಕೀಲ. ಇವರ ಕ್ರಿಕೆಟ್ ಅಂತೂ ಶಿಸ್ತಿನದಾಗಿದ್ದಿತು.

23. ಹಾಷಿಂ ಆಮ್ಲ–ನಮ್ಮಲ್ಲಿ ಆಮ್ಲ ಅಂದರೆ ಆಸಿಡ್. ಇವರ ಆಟವಂತೂ ಆಸಿಡ್ ಧಾಳಿಯಂತೆಯೇ ಇದ್ದಿತು. ತಂಡಕ್ಕೆ ಆಮ್ಲಜನಕನೂ ಹೌದಾಗಿದ್ದರು. ಎದುರಾಳಿಗಳಿಗೆ ಹೊಟ್ಟೆಯುರಿಯಾಗಿ ಟಿವಿಯಲ್ಲಿ ತೋರಿಸುವ ಗವಿಸ್ಕಾನ್ ಸೇವಿಸಬೇಕಾಗುತ್ತಿತ್ತು.

24. ಮಾರ್ಟಿ undefineನ್ ಕ್ರೋವ್–ಮೂಲ ಇಂಗ್ಲಿಷ್ ಭಾಷೆಯಲ್ಲಿ ಇದು ಕ್ರೋ–ಅಂದರೆ ಕಾಗೆಯಂತೆ. ಅದಕ್ಕೇ ಪಾಪ 'ವ' ಜೋಡಿಸಿಕೊಂಡು ಕ್ರೋವ್ ಆಗಿರಬಹುದೇನೋ

25. ಆಂಡಿ ಫ್ಲವರ್–ಇವರು ಬಿಡಿ ಹೇಳಿ ಕೇಳಿ ಫ್ಲವರ್. ಮಲ್ಲಿಗೆಯೋ, ಸಂಪಿಗೆಯೋ, ಕಮಲವೋ, ದಾಸವಾಳವೋ. ಚೆಂಡು ಹೂವೋ ಅಥವ ಪ್ರೇಮಿಗಳ ರೋಜಾ ಹೂವೋ. ಆಟವಂತೂ ಹೂವಿನಷ್ಟೇ ಸುಕೋಮಲ.

26. ಕ್ಲೈವ್ ರೈಸ್–ಇವರು ಕೆಂಪು, ಕಂದು, ಬಿಳಿ ಹೀಗೆ ಯಾವ ಬಣ್ಣದ ರೈಸೋ ಅಥವಾ ನಮ್ಮಲ್ಲಿನ ಬಂಗಾರ ಸಣ್ಣ, ಕುಸುಬಲು ಅಕ್ಕಿಯೋ ತಿಳಿದಿಲ್ಲ, ಆದರೆ, ಕ್ರಿಕೆಟಿಗಂತೂ ರೈಸ್ ರವರು ರುಚಿಯಾದ ಪಲಾವೇ ಆಗಿದ್ದರು.

27. ಫರೂಕ್ ಎಂಜಿನಿಯರ್–ಇವರು ಯಾವ ವಿಭಾಗದಲ್ಲಿ ಎಂಜಿನಿಯರ್ ತಿಳಿಯದು ಆದರೆ, ವಿಕೆಟ್ ಹಿಂದಾಗಲಿ ಅಥವಾ ಮುಂದಾಗಲಿ ಇವರ ಇರವು ಒಂದು ಎಂಜಿನಿಯರಿಂಗ್ ಮಾರ್ ವೆಲ್ ಸರಿಯೇ.

28 ಗೌತಮ್ ಗಂಭೀರ–ಆಟವಾಡುವಾಗ ಗಂಭೀರವಾಗಿಯೇ ಇದ್ದವರು. ಈಗ ಹೊಸ ಪದವಿ ಅದರಲ್ಲೂ ಅದೇ ಗಾಂಭಿರ್ಯ ಇರುತ್ತದೋ ಪರದೆಯ ಮೇಲೆ ನೋಡಿ.

29 ವಿಜಯ ಮರ್ಚೆಂಟ್–ಈ ವ್ಯಾಪಾರಿಯ ವ್ಯಾಪಾರ ತಿಳಿಯದು. ಆಟವೂ ಪತ್ರಿಕೆಗಳಲ್ಲಿ ಓದಿದ್ದು ಆದರೆ, ವೀಕ್ಷಕ ವಿವರಣೆ ಟಾಪ್ ಮರ್ಚೆಂಟ್.

30. ಬಿಷನ್ ಸಿಂಗ ಬೇಡಿ– ಇವರ ಚೆಂಡಿನ ತಿರು ತಿರುಗುವಿಕೆ ಎದುರಾಳಿಗಳಿಗೆ ತಲೆ ತಿರುಗಿ ಬೇಡ ತಿರುಗಿಸ ಬೇಡ..... ಸಾಕು ಎಂದು ಬೇಡುವಂತಿರುತ್ತಿತ್ತು.

31. ಹೇಮು ಆಧಿಕಾರಿ–ಕ್ರಿಕೆಟ್ ಆಟ ಮತ್ತು ವೀಕ್ಷಕ ವಿವರಣೆ ಎರಡೂ ಅಧಿಕೃತ ಅಧಿಕಾರಯುತ.

32 ಜೇಸು ಪಟೇಲ್, ಬ್ರಿಜೇಶ್ ಪಟೇಲ್–ಇವರಿಬ್ಬರೂ ಯಾವ ಹಳ್ಳಿಯಲ್ಲಿ ಪಟೇಲರಾಗಿದ್ದರೋ ತಿಳಿಯದು. ಕ್ರಿಕೆಟ್ ನಲ್ಲಂತೂ ನಾಯಕರು ಖರೆ.

33. ಬಿಲ್ಲಿ ಜೀನ್ ಕಿಂಗ್–ಇವರು ಟೆನಿಸ್ ಮೈದಾನದಲ್ಲಿ ನಿಜವಾದ ಕಿಂಗ್ ಎಂದೇ ಹೇಳಬೇಕು. ಇವರ ಗಡಸುತನದ ಆಟ ಇವರ ಕಿಂಗ್ ಹೆಸರಿಗೆ ರಾಜ

(ರಾಣಿ)ಕಳೆ ತಂದಿದೆ.

33 ವರ್ಜೀನಿಯಾ ವುಲ್ಫ್–ಟೆನಿಸ್ ಆಟದ ಬಿರುಸಿನಲ್ಲೇ ದೈತ್ಯ ಶಕ್ತಿಯ ವುಲ್ಫ್ ಇರುತ್ತಿತ್ತು.

34 ಮಾರ್ಗರೆಟ್ ಕೋರ್ಟ್–ಟೆನಿಸ್ ಕೋರ್ಟಿನಲ್ಲಿ ಈ ಟೆನಿಸ್ ಸುಂದರಿಯ ಆಟವೇ ನೋಡುಗರಿಗೆ ಮನ ಸೆಳೆದು ಕೋರ್ಟ್ ಮಾಡುವಂತಿರುತ್ತಿತ್ತು.

35 ಸ್ಟೆಫಿ ಗ್ರಾಫ್–ಇವರ ಟೆನಿಸ್ ಗ್ರಾಫ್ ಅಂತೂ ಸದಾ ಏರುಗತಿಯಲ್ಲೇ ಇರುತ್ತಿತ್ತು. ●

**ನಾ ಕಸ್ತೂರಿ ವಚನಗಳು**

ರಸಾಯನಶಾಸ್ತ್ರವನೋದಿದರೆ ನಾಲಿಗೆ ಸವೆದಂತಲ್ಲದೆ, ರಸಾಯನ ಮಾಡಲು ಬರದು ! ಸಸ್ಯಶಾಸ್ತ್ರವನೋದಿದರೆ ಕಣ್ಣು ಕುರುಡಾದಂತಲ್ಲದೆ ಸೊಸಿಯ ಬೆಳೆಸಲು ಬರದು ! ಪ್ರಾಣಿಶಾಸ್ತ್ರವನೋದಿದರೆ ತ್ರಾಣ ಹೋದಂತಲ್ಲದೆ ಅಲ್ಪಪ್ರಾಣ ಮಹಾಪ್ರಾಣ ವ್ಯತ್ಯಾಸವೇ ತಿಳಿಯದು !

ಭೂಶಾಸ್ತ್ರವನೋದಿದರೆ ಧೂಳಕುಡಿದಂತಲ್ಲದೆ ಭೂಕೈಲಾಸವ ಮಾಡಲು ಬರದು ! ಅಕಟಕಟ ! ಗಟ್ಟಿಭತ್ತದ ಕುಟ್ಟಿಟೊಳ್ಳು ಹೊಟ್ಟನು ಕೊಂಬರಯ್ಯಾ. ಕೊರವಂಜಿಯ ಕಾಯುವ ಪರಂಜಿದೇವಾ !

ಅಡಿಗೆಯ ರುಚಿಗೆ ಊಟದ ಕೋಣೆಯಲ್ಲಿ
ಅಡಿಗಡಿಗಾಗುವ ಆರ್ಭಟವೇ ಸಾಕ್ಷಿ!
ಸಂಗೀತದ ರುಚಿಗೆ ಕೇಳಿಗರ ಬೆವರೇ ಸಾಕ್ಷಿ !
ಉಪನ್ಯಾಸದ ರುಚಿಗೆ ಕುಂತಮಂದಿ ಕರಗಿದುದೇಸಾಕ್ಷಿ!
ಬಾಣಸಿಗನ ಬೆಡಗಿಂಗೆ, ಗಾಯಕನ ಬಿನ್ನಾಣಕ್ಕೆ,
ಕಾರ್ಯದರ್ಶಿಯ ವಂದನೆಗೆ, ಕಿವಿ ತೆರೆದು ಮನಸೋತು ನಂಬುವನ
ತಿಳಿಗೇಡಿ ಎಂದನು ನಮ್ಮ ಕೊರವಂಜಿಯ ಕಾಯುವಪರಂಜಿದೇವ !

ಎಂಥ ಕೋಮಲಕಾಯ ನನ್ನ ಕಾಲೇಜಕುವರರಿಗೆ !
ಅಕಟಕಟ, ಅವರಿಗೆ ಸ್ನಾನವೇತ್ರಾಸ ಕಾಣಿರೋ !
ಪಾಠವೇಗಾಣಕಾಣಿರೋ ! ಭೋಜನವೇ ಸರಮಸುಸ್ತು ಕಾಣಿರೋ !
ಪರೀಕ್ಷೆಯೇ ವಿಷಪಾನ ಕಾಣಿರೋ !
ರಜತಪರದೆಯೇ ರಾರಾಜಿಸುವ ರಜತ ಪರ್ವತ ಕೇಳಿರೋ !
ಕರ್ನಾಟ ಸಂಗೀತ ಕರ್ಣಕಠೋರ ಕೇಳಿರೋ!
ಹಿಂದಿ ಹಾಡೆಂದರೆ ಕಿವಿ ನೀಡಿ ತನು ಚಾಚಿ ಮನಮಾರಿ ಕೇಳುವರು !
ಅಕಟಕಟ ! ಇಂತಾಯ್ತೆ, ಎಂಬನು ಕೊರವಂಜಿಯ ಕಾಯುವಪರಂಜಿದೇವ!

ಮನೆಯ ಗಂಡನ ಮೂಢ ಮನೆವಾರ್ತೆಯನೇನ ಹೇಳುವೆನಯ್ಯಾ !
ಸಾಲೋ ಗರುಂಡುಂಡು ಸಂದಿಗೊಂದಲಿ ನಡಿಗೆ !
ಮೂಲೋಕ ಗೆದ್ದಂತೆ ಪಾರ್ಕಿನಲ್ಲಿ ನಡಿಗೆ !
ಕತ್ತಲಲಿ ಕುಳಿಕುಳಿತು ಹೆಂಗಳನೆರಳಿಗೆ ಮರುಳಾಗಿ
ನೆಮ್ಮದಿಕೆಟ್ಟು, ಕೊರಳಮಾರ್ದನಿಗೆ ಮಾನವತೆತ್ತು,
ಪೆದ್ದುವಂತಿಕೆಯಲದ್ದಿದ ಮುದ್ದು ಗಂಡರಿರ !
ಟೊಳ್ಳು ಜೀವನಕಾಣಿರೋ !ಇದಕೆ ಎಳ್ಳು ನೀರು ಬಿಡಿರೋ !
ಬೇಡುವನು ನಮ್ಮ ಕೊರವಂಜಿಯ ಕಾಯುವಪರಂಜಿದೇವ !

# ಒಂದು ಕತೆ, ನೂರು ವ್ಯಥೆ

ಎಚ್.ಗೋಪಾಲಕೃಷ್ಣ

ನಾನು ಮೊನಾಲಿಸಾಪ್ಪ ಆದ ಕತೆ ನಿಮಗೆ ಹೇಳಿದ್ದೆ ಅಂತ ಕಾಣ್ಸುತ್ತೆ. ಒಂದಾರು ತಿಂಗಳು ಪೂರ್ತಿ ಶುಗರ್ ಮೇನ್ ಟೇನ್ ಮಾಡ್ಕೊಳ್ಳಿ ಸಾರ್. ಆಮೇಲೆ ಇಂಪ್ಲಾಂಟ್ ಮಾಡಿಬಿಡೋಣ ಅಂತ ಹಲ್ಲಿನ ಆಸ್ಪತ್ರೆ ಡಾಕ್ಟರು ಹೇಳಿದರು. ಸರಿ ಅಂತ ಕೋಲೆ ಬಸವನ ಹಾಗೆ ತಲೆ ಆಡಿಸಿ ಮನೆಗೆ ಬಂದು ಮೂಲೆಲಿ ಕೂತೇನಾ...?

ಆಗಲೇ ಅರ್ಥ ಆಗಿದ್ದು ಹಲ್ಲು ಕೀಲಿಸಿಕೊಂಡವರ(ಇದು ಕೀಲಿಸಿ ಅಲ್ಲ, ಕೀಳಿಸಿ ಅಂತ ಸರಿಮಾಡಿಕೊಳ್ಳಿ. ನನ್ನ ಮೊಬೈಲು ಹೀಗೆ ಸಾವಿರಾರು ತಪ್ಪು ಪ್ರತಿದಿವಸ ಮಾಡಿ ಮಾಡಿ ವಿರೋಧ ಪಕ್ಷ ಅಂತ ನಿಕ್ ನೇಮ್ ಇರಿಸಿಕೊಂಡಿದೆ) ಮಾನಸಿಕ ನೋವು. ಈ ನೋವು ಸ್ವತಃ ನನ್ನ ಸ್ವ ಅನುಭವ ಆಗಿರುವುದರಿಂದ ಅದಕ್ಕೊಂದು ಪ್ರಾಮುಖ್ಯತೆ ಮತ್ತು ನೈಜತೆ (ಇದು ವಿಮರ್ಶಕರ ಪರಿಭಾಷೆ ಅಂತ ಹಿಂದೆ ಓದಿದ ನೆನಪು ನನ್ನ, ಸ್ವತಃ, ಸ್ವ... ಇವೆಲ್ಲಾ ಒಂದೇ ಅರ್ಥ) ಇದ್ದು ಅಥಾರಿಟಿ ಸಹ ಇದೆ.ಸದರಿ ನೋವು ವಿವರಿಸ ಬೇಕಾದರೆ ದಂತ ಸಹಿತ ಜೀವನವನ್ನು ಹೀಗಂದರೆ ಹಲ್ಲು ತೆಗೆಸುವ ಮುನ್ನಾ ದಿವಸಗಳದ್ದು ಕೊಂಚ ನಿಮಗೆ ವಿವರಿಸಿ ನಂತರ ಪ್ರಸ್ತುತಕ್ಕೆ ಬರಲು ನಿಮ್ಮ ಅಪ್ಪಣೆ ಇದೆಯೆಂದು ಭಾವಿಸುತ್ತೇನೆ. ಈಗ ಆ ವಿವರ.

ಹಲ್ಲು ಬಾಯಿ ತುಂಬ ಇದ್ದಾಗ ನಾವೊಂದು ರೀತಿ ಮಹಾರಾಜರು. ನಮ್ಮನ್ನು ಹಿಡಿಯೋರು ಯಾರೂ ಇಲ್ಲ. ಅಕ್ಕ ಪಕ್ಕ ಫುಟ್ ಪಾತ್ ಮೇಲಿನ ಸುಟ್ಟ ಮುಸುಕಿನ ಜೋಳ, ಅದರ ಪಕ್ಕದಲ್ಲಿನ ನಿಪ್ಪಟ್ಟು, ಕೋಡುಬಳೆ ಚಕ್ಕಲಿ ಕಾಂಗ್ರೆಸ್ ಇವುಗಳ ರುಚಿ ನೋಡದೆ ಜೇಬಿಗೆ ಕನಿಷ್ಠ ನೂರು ರುಪಾಯಿ( ಕೆಲವು ಸಲ ಇದು ಐನೂರು ಆದರೂ ಆದೀತು)ಭಾರ ಕಡಿಮೆ ಮಾಡದೇ ನೀವು ಯಾವತ್ತಾದರೂ ಬಂದಿದ್ದು ಇದೆಯಾ?

ಅದರಲ್ಲೂ ಗರಮ ಗರಂ ಕಡ್ಲೇಕಾಯಿ, ಉಪ್ಪು ಹಾಕಿ ಬೇಯಿಸಿದ ಬಿಸಿ ಬಿಸಿ ಕಡ್ಲೇಕಾಯಿ, ಅಂಗಡಿ ಯಲ್ಲಿ ಜೋಡಿಸಿಟ್ಟ ತರಹೆವಾರಿ ಕಡ್ಲೆ ಬೀಜದ ಮಿಠಾಯಿ, ಇದಕ್ಕೆ ಚಿಕ್ಕಿ ಅಂತ ಎನ್ನುತ್ತಾರಂತೆ, ಪಕೋಡ ಖಾರ ಸೇವು ಇವನ್ನ ಯಾವತ್ತಾದರೂ ನಿಮ್ಮ ಜೀವನದಲ್ಲಿ ನೋಡಿ ತಿನ್ನದೇ ಕೊಳ್ಳದೇ ಬಂದ ದಿನಗಳು ಇವೆಯೇ? ಈಗ ದಂತರಹಿತ ಅಂತ ಆದಮೇಲೆ ನಿಮಗೆ ಜೀವನ ಜುಗುಪ್ಸೆ ಆಗಿ ಇಡೀ ಪ್ರಪಂಚ ಬೋಗಸ್ ಅಂತ ಅನಿಸುತ್ತಾ? ಸುಮಾರು ಸಾವಿರಕ್ಕೆ ಹತ್ತು ಸಾವಿರ ನನ್ನ ಹಾಗೆ ದಂತ ರಹಿತರಿಗೆ ಅದೇ ಅನಿಸೋದು ಮತ್ತು ನಾನು ಈ ಯೂನಿವರ್ಸಲ್ ಥಿಂಕಿಂಗ್ ಗೆ ಹೊರತಲ್ಲ. ಸುಮಾರು ನನ್ನ ವಯಸ್ಸಿನೋರು ಮಫ್ಲಾರಿನಲ್ಲಿ ಮುಖ ಮುಚ್ಚಿಕೊಂಡು ಸಂಜೆ ಬೆಳಿಗ್ಗೆ ನಮ್ಮ ಮೈನ್ ರಸ್ತೇಲಿ ಸಿಗ್ತಾರೆ. "ನೋಡಿ ಎಷ್ಟು ಸಣ್ಣ ಆಗಿದ್ದೀನಿ...."ಅಂತ ಅವರ ಮಾತು ಶುರು ಮಾಡಿ"ಹಲ್ಲು ಕೀಳಿಸಿ ಬಿಟ್ಟೆ ಸಾರ್. ಏನೂ ತಿನ್ನೋಕ್ಕೆ ಆಗ್ತಾ ಇಲ್ಲ...."ಅಂತ ಕಣ್ತುಂಬಾ ನೀರು ಸುರಿಸ್ತಾರೆ. ಅವರನ್ನು ನೋಡಿ ಅಯ್ಯೋ ಪಾಪ ಅನಿಸುತ್ತೆ. ನಾನೂ ನನ್ನ ಗೋಳು ಹೇಳಿಕೊಂಡು ಕಣ್ಣಿನಲ್ಲಿ ನೀರು ತುಂಬಿ ಕೊಳ್ತೀನಿ.

ಮೊದಲು ಕೆಲವು ದಿವಸ ಬಾಯಲ್ಲಿ ಹಲ್ಲು ಮಿಸ್ ಅನ್ನುವುದನ್ನು ಮರೆತು ತಲಾ ಇನ್ನೂರೈವತ್ತು ಗ್ರಾಂ ಹಳದಿ ಕಡ್ಲೆ ಬೀಜ, ಕಾಂಗ್ರೆಸ್, ಗರಿಗರಿ ಕೋಡುಬಳೆ, ಆರು ಪಾಕೆಟ್ ಚಿಕ್ಕಿ ವ್ಯಾಪಾರ ಮಾಡಿದೆ. ಅಂಗಡಿ ಹೆಂಗಸು ಊಹೂಂ ಅಂಗಡಿ ಆಂಟಿ ನಗ್ತಾ ನಗ್ತಾ ಅದನ್ನೆಲ್ಲಾ ಕವರ್ ಗೆ ಹಾಕಿ ಎಂಟು ನೂರು ಚಿಲ್ರೆ ಬಿಲ್ ಕೊಟ್ರಾ? ಬಿಲ್

ತೆತ್ತು ಅಂಗಡಿಯಿಂದ ಆಚೆ ಬಂದು ಮನೆ ಸೇರಿದೆ ತಾನೇ? ಕವರ್ ನಿಂದ ಕಡಲೆ ಬೀಜ ತೆಗೆದು ಸೋಫಾ ಮೇಲೆ ಮೈಚಾಚಿ ಎದುರಿನ ಟೀ ಪಾಯ್ ಮೇಲಿದ್ದ ಕವರಿಂದ ಅರ್ಧ ಮುಷ್ಟಿ ಕಡಲೆ ಬೀಜ ತೆಗೆದುಕೊಂಡು ಬಾಯಿ ಆ ಮಾಡಿ ಒಳಗಡೆ ಹಾಕ್ಕೊಂಡೆ ನಾ.....? ಆಗಲೇ ನನಗೆ ಟೋಪಿ ಬಿದ್ದೆ ಅಂತ ಜ್ಞಾನೋದಯ ಆಗಿದ್ದು. ಬಾಯಲ್ಲಿ ಹಲ್ಲೆ ಇಲ್ಲ, ಇದನ್ಯಾಕೆ ತಂದ ನಪ್ಪಾ ಅಂತ ಅನಿಸಿದ್ದು. ಇನ್ನೊಂದು ಗುಟ್ಟಿನ ಸಂಗತಿ ಅಂದರೆ ಮನೇಲಿ ಯಾರಿಗೂ ನಾನು ಕಡಲೆ ಬೀಜ ಹೀಗೆ ಕೆಜಿಗಟ್ಲೆ ತಿನ್ನೋದು ಇಷ್ಟ ಇಲ್ಲ. ಇದೇ ರೂಲ್ ಮಿಕ್ಕವಕ್ಕೂ ಅಂದರೆ ಚಕ್ಕಲಿ ಕೋಡುಬಳೆ ಇತ್ಯಾದಿ ಗಳಿಗೆ ಅಪ್ಲೈ ಮಾಡ್ತವೆ. ಇದು ಇನ್ನೂ ಮುಂದುವರೆದು ನಾನು ಹಳದಿ ಕಡ್ಲೆ ಬೀಜ, ಕಾಂಗ್ರೆಸ್, ಗರಿಗರಿ ಕೋಡುಬಳೆ, ಚಿಕ್ಕಿಪಾಕೆಟ್ ಇವುಗಳನ್ನ ಜೋಪಾನವಾಗಿ ಜೋಡಿಸಿಕೊಂಡು ಊಟದ ನಂತರ ಸೋಫಾ ಮೇಲೆ ಕೂಡ್ತೀನಿ ನೋಡಿ ಆಗ ಎಲ್ಲವೂ ನನ್ನ ಪಾಡಿಗೆ ನನ್ನ ಬಿಟ್ಟು ಬೇರೆ ಕಡೆ ಸೇರ್ಕೋ‌ತಾವೆ. ಬೇರೆ ಕಡೆ ಸೇರುವ ಮೊದಲು ಹಿಡಿಯಲ್ಲಿ ಅಥವಾ ಬೊಗಸೆಯಲ್ಲಿ ನನ್ನ ಮುಂದಿನ ತಟ್ಟೆಯಲ್ಲಿ ಇರುವುದನ್ನು ತುಂಬಿಕೊಂಡು ಹೋಗ್ತವೆ. ನನ್ನ ಎದುರು ಕೂತು ಮುಕ್ಕೊಳ್ಳಲ್ಲ.. ನನ್ನ ಕಂಡರೆ ಎಷ್ಟು ಭಯ ಭಕ್ತಿ ಇವಕ್ಕೆ ಅಂತ ನನಗೂ ಒಂದು ತರಹ ಖುಷಿ! ಈ ಖುಷಿ ನಾನು ನನ್ನ ಗೆಳೆಯರ ಹತ್ತಿರ ಹೇಳಿಕೊಂಡರೆ ಅವು ಮುಸಿ ಮುಸಿ ನಗ್ತಾರೆ, ಕೋತಿಗಳು.

ಒಂದು ಗಾಡಿ ಅಷ್ಟು ಕುರುಕಲು ತಂದುಬಿಟ್ಟೆ, ಬಾಯಲ್ಲಿ ಸೈನಿಕರು ಇಲ್ಲ ಎನ್ನುವುದನ್ನು ಮರೆತು ಅಂತ ಹೇಳಿದೆ ತಾನೇ..

ಈಗ ಮನೆಗೆ ಅಷ್ಟೊಂದು ದುಡ್ಡು ಕೊಟ್ಟು ತಂದಿರುವ ಕುರುಕನ್ನು ಖರ್ಚು ಮಾಡುವುದು ಹೇಗೆ? ನನ್ನ ಬಳಿ ಉಪಾಯಕ್ಕೆ ಕಡಿಮೆಯೇ?ಸಾವಿರ ಉಪಾಯ ಬೇಕಾದರೂ ಕೊಡ್ತೀನಿ ಅಂತ ಒಂದು ಉಪಾಯ ನಂತರ ಜಾರಿ ಮಾಡಿದೆ.

ಮನೆಗೆ ಬಂದಿರುವ ನೆಂಟರಿಗೆ ತಲಾ ಒಂದೊಂದು ಪ್ಯಾಕೆಟ್ ಕೊಟ್ಟು ಇದೇ ತಾಂಬೂಲ ಅಂದೆ! ನಂಟರೋ ಫುಲ್ ಖುಷ್. ನಿನಗೆ ಈಗ ತಾನೇ ಬಂದಿರೋ ಈ ಒಳ್ಳೇ ಗುಣ ಏಳೇಳು ತಲೆಮಾರಿಗೂ ಇರಲಿ ಅಂತ ಹಾರೈಸಿ ಗಿಫ್ಟ್ ಅನ್ನು ಕೈಯಲ್ಲಿ ಹಿಡಿದು ನೋಡಿ ಮುಖ ಅರಳಿಸಿ ಬ್ಯಾಗ್ ನಲ್ಲಿ ಜೋಪಾನವಾಗಿ ಇರಿಸಿಕೊಂಡರು. ಈ ಮೊದಲು ಅವರಿಗೆ ಇದನ್ನೆಲ್ಲಾ ಕೊಟ್ಟಿಲ್ಲ ಅಂತ ಅಲ್ಲ, ಕೊಟ್ಟಿದ್ದೇನೆ . ಆಗ ಕ್ವಾಂಟಿಟಿ ಕಡಿಮೆ ಇರ್ತಿತ್ತು ಮತ್ತು ಸುಮಾರು ಸಲ ಮುಗ್ಗಲು ವಾಸನೆ ಇರ್ತಿತ್ತು. ನಾನು ಸಾಕಷ್ಟು ಮುಕ್ಕಿ ಸಾಕು ಅನಿಸಿದ್ದು ದಾನ ಆಗ್ತಾ ಇತ್ತು! ಅವರಿಗೆ ಎಲೆ ಅಡಿಕೆ ಜತೆ ಇವೆಲ್ಲಾ ಕೊಟ್ಟು ಖಾಲಿ ಆಗಿ ಭಣ ಭಣ ಅಂದಾಗ..

ಪ್ರತಿ ನಿಮಿಷ ಕಣ್ಣಿನ ಮುಂದೆ ಖಾರದ ಕಡ್ಲೆ ಬೀಜ, ಕಾಂಗ್ರೆಸ್, ಕೋಡುಬಳೆ.... ಅಂತಹ ಕುರುಕು ಕುಣಿಬೇಕೆ... ಜೀವನ ಬೇಜಾರಾಗಲು ಇದಕ್ಕಿಂತ ಬೇರೆ ಬೇಕೇ?

ಆಗಲೇ ನನಗೆ ನಮ್ಮ ತಾತ ಸುಬ್ಬಣ್ಣಜ್ಜ ನ ನೆನಪು ಆಗಿದ್ದು. ಸುಬ್ಬಣ್ಣಜ್ಜ ಅಂದ ಕೂಡಲೇ ಜತೆಗೆ ಅವಳಿ ನೆನಪೂ ಸಹ ಇದೆ. ಈಗ ಅದರ ಬಗ್ಗೆ.. ಮೊದಲನೇ ನೆನಪು ಕುಟ್ಟಣಿ ಹಾರೆ ಯದು. ಕುಟ್ಟಣಿಯನ್ನು ಈ ಕಡೆ ಅವರು ಕುಟ್ಟಾಣಿ ಅಂತ ಕರೀತಾರೆ ಮತ್ತು ಹಾರೆಯನ್ನು ಗುಂಡು ಸುತ್ತಿಗೆ ಅನ್ನುತ್ತಾರೆ. ಯಾಕೆ ಹಾಗೆ ಅನ್ನುತ್ತಾರೆ ಅಂತ ಖಂಡಿತ ನನಗೆ ಗೊತ್ತಿಲ್ಲ. ಕುಟ್ಟಣಿ ನೀವು ನೋಡಿಲ್ಲ ಅಂದರೆ ಈಗ ನಿಮಗೆ ಕುಟ್ಟಣಿ ಅಂದರೇನು ಅಂತ ಮೊದಲು ವಿವರಿಸಬೇಕು.

ಕುಟ್ಟಣಿಯನ್ನ ಎಲೆ ಅಡಿಕೆ ಕುಟ್ಟಲು, ಚಕ್ಕಲಿ ಕೋಡುಬಳೆ ನಿಪ್ಪಟ್ಟು ಇಂತಹವುಗಳನ್ನು

ಕುಟ್ಟಿ ಅದರ ಪುಡಿಯನ್ನು ತಿನ್ನಲು ಮುದುಕರು ಉಪಯೋಗಿಸುತ್ತಾರೆ. ಹಲ್ಲಿದ್ದ ಮಾನವ ಪ್ರಾಣಿಗಳು, ಹಲ್ಲು ಕಳೆದು ಕೊಂಡು ಇರುವ ಸಂದರ್ಭಗಳಲ್ಲಿ ಈ ಕುಟ್ಟಣಿ ಅವುಗಳ ನೆರವಿಗೆ ಬಂದು ಆಪತ್ಬಾಂದವ ಆಗುತ್ತದೆ.

ಕುಟ್ಟಣಿ ಹೇಗಿರುತ್ತೆ ಅಂದರೆ...




ಕಾಫಿ ಲೋಟ ಇದೆ ನೋಡಿ, ಅದರ ಬಾಗಿರುವ ಅಂಚು ಕತ್ತರಿಸಿ. ಇದು ಕುಟ್ಟಣಿ ಹೊರ ರೂಪ. ಈ ಲೋಟ ಕಬ್ಬಿಣದ್ದು ಆಗಿರಲಿ, ಅದರ ತಳ ಎರಡು ಇಂಚು ದಪ್ಪ ಮತ್ತು ಗೋಡೆ ಒಂದೂವರೆ ಇಂಚು ದಪ್ಪ ಮತ್ತು ಒಳ ವ್ಯಾಸ ಎರಡು ಇಂಚು ಇದ್ದರೆ ಕುಟ್ಟಣಿ ರೆಡಿ. ಅದಕ್ಕೆ ಹಾರೆ ಒಂದೂವರೆ ಅಡಿ ಉದ್ದ ಮತ್ತು ಒಂದೂವರೆ ಇಂಚು ದಪ್ಪ ಇದ್ದು ಕುಟ್ಟುವ ಭಾಗ ದುಂಡ ಗಿರಲಿ, ಹಿಡಿಕೆ ಟೇಪರ್ ಆಗಿದ್ದು ಕೈಯಲ್ಲಿ ಸಲೀಸಾಗಿ ಗಟ್ಟಿಯಾಗಿ ಹಿಡಿದು ಕೊಳ್ಳುವ ಹಾಗಿರಬೇಕು.

ನಮ್ಮ ತಾತ ಸುಬ್ಬಣ್ಣಜ್ಜನ ಬಳಿಯಿದ್ದ ಅಂತಹ ಕುಟ್ಟಣಿ ನಾನು ಇನ್ನೆಲ್ಲೂ ಬೇರೆ ಯಾರ ಮನೆಯಲ್ಲೂ ನೋಡಿಲ್ಲ. ನಮ್ಮ ತಾತನ ತಮ್ಮ ಭೀಮಣ್ಣ ತಾತ ನಮ್ಮ ಮನೆಗೆ ಬಂದಾಗಲೆಲ್ಲಾ ತನಗೂ ಅಂತಹ ಒಂದು ಕುಟ್ಟಣಿ ಬೇಕು ಎಂದು ಹೇಳುತ್ತಾ ಇದ್ದದ್ದು, ನಮ್ಮ ತಾತ ಅದನ್ನು ಭದ್ರವಾಗಿ ತಲೆ ಬಳಿ ಇಟ್ಟು ಕೊಳ್ಳುತ್ತಾ ಇದ್ದದ್ದು, ಚಿಕ್ಕ ತಾತ ಊರು ಸೇರಿದರು ಅಂತ ಖಾತ್ರಿ ಆದ ನಂತರ ಕುಟ್ಟಣಿ ಮೇಲಿನ ಕಣ್ಗಾವಲು ನಿಲ್ಲುತ್ತಿತ್ತು. ಇಂತಹ ಕುಟ್ಟಣಿ ಯನ್ನು ಕಮ್ಮಾರರು ಮಾಡುತ್ತಾ ಇದ್ದರು ಆಗ.

ಈಗ ಮತ್ತೊಂದು ಪುಟ್ಟ ಕತೆ, ಇದಕ್ಕೆ ನೇರ ಲಿಂಕ್ ಇರೋದು..

ಕಬ್ಬಿಣದ ರೈಲು ಹಳಿಯ ಒಂದೂವರೆ ಎರಡು ಅಡಿ ತುಂಡುಗಳಿಗೆ ಒಂದು ತುದಿಯಲ್ಲಿ ತೂತ ಕೊರೆದು ಅದನ್ನು ಬೆಲ್ ಅಂದರೆ ಗಂಟೆ ರೂಪದಲ್ಲಿ ನಾನು ಓದಿದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಉಪ್ಯೋಗ್ಸುತ್ತಾ ಇದ್ದರು. ಖಾಸಗಿ ಶಾಲೆಗಳಲ್ಲಿ ಎಲೆಕ್ಟ್ರಿಕ್ ಬೆಲ್ ಇರುತ್ತಿತ್ತು. ಇಲ್ಲ ಅಂದರೆ ಒಂದು ಕಂಚಿನ ಗಂಟೆ ದೇವಸ್ಥಾನದಲ್ಲಿ ಇರುವಂತಹದು ನೇತು ಹಾಕಿಸಿ ಕೊಂಡಿರುತ್ತಿತ್ತು . ಇದೇ ತರಹ ಗಂಟೆ ಹರಾಜು ಅಂಗಡಿಯಲ್ಲಿ ಇರುತ್ತೆ.

ಸರ್ಕಾರಿ ಶಾಲೆ ಅಂದರೆ ಈ ರೈಲು ಹಳಿಯ ಕಬ್ಬಿಣದ ಪಟ್ಟಿಯಲ್ಲೇ ಬೆಲ್

ಹೊಡೆಯಬೇಕು ಎನ್ನುವುದು ತಲೆಯಲ್ಲಿ ಕೂತುಬಿಟ್ಟಿತ್ತು. ಈಗಲೂ ಯಾವುದಾದರೂ ಆರ್ಟ್ ಸಿನಿಮಾದಲ್ಲಿ ಸರ್ಕಾರಿ ಶಾಲೆ ತೋರಿಸಿದರೆ ಇಂತಹ ಬೆಲ್ ಅಲ್ಲಿ ಇದ್ದೇ ಇರಬೇಕು. ಸುಮಾರು ದೊಡ್ಡವನಾದ ಮೇಲೆ ಸರ್ಕಾರಿ ಶಾಲೆಯಲ್ಲಿ ಈ ರೀತಿಯ ಗಂಟೆ ಯಾಕೆ ಇರುತ್ತೆ ಎನ್ನುವ ನನ್ನ ಹಳೆಯ ಪ್ರಶ್ನೆಯನ್ನು ಗೆಳೆಯ ಮೇಷ್ಟರ ಎದುರು ಹರವಿದ್ದೆ. ಹಿತ್ತಾಳೆ ಅಥವಾ ಕಂಚಿನ ಗಂಟೆ ಕೊಳ್ಳಲು ಸಾಕಷ್ಟು ಹಣ ಸರ್ಕಾರದ ಬಳಿ ಇರುತ್ತಿರಲಿಲ್ಲ. ಅದರಿಂದ ಸರ್ಕಾರ ಸ್ಕೂಲಿನ ಮೇಷ್ಟರ ಪಾಡು ಅದು ಅಂತ ಅದು ಅಂದರೆ ಘನ ಸರ್ಕಾರ ತೆಪ್ಪಗೆ ಇರುತ್ತಿತ್ತು. ಸ್ಕೂಲಿನ ಮೇಷ್ಟರ ಪಾಡು ತಾನೇ ಅದು?ಅದರಿಂದ ಮೇಷ್ಟರು ಈ ರೈಲು ಹಳಿ ತಂದು ಅದನ್ನು ಗಂಟೆ ರೀತಿ ಉಪಯೋಗಿಸುತ್ತೇವೆ ಅಂತ ಉತ್ತರಿಸಿದರು. ಅವು ಗುಜರಿಯಲ್ಲಿ ಸಿಗುತ್ತೆ ಅಂತ ಸೇರಿಸಿದರು!

ಈ ರೈಲ್ವೆ ಹಳಿಗೆ ಸಂಬಂಧ ಪಟ್ಟ ಹಾಗೆ ನನ್ನ ಮತ್ತೊಂದು ನೆನಪು. ಊರಿನಲ್ಲಿ ನಮ್ಮ ಜಮೀನು ನೋಡಿಕೊಳ್ಳುತ್ತಿದ್ದ ನಮ್ಮ ಚಿಕ್ಕ ತಾತ ನಮ್ಮೂರಿಗೆ ಬಂದಾಗಲೆಲ್ಲ ಅವರ ಹಲವಾರು ಡಿಮಾಂಡ್ ಗಳ ಜತೆಗೆ ಒಂದು ಡಿಮಾಂಡ್ ಇದ್ದೇ ಇರುತ್ತಿತ್ತು. ಅದು ನಮ್ಮ ಅಪ್ಪನಿಗೆ. ಎರಡಡಿ ಉದ್ದದ ರೈಲ್ವೆ ಹಳಿ ತಂದು ಕೊಡು ಅಂತ. ಅದು ಯಾಕೆ ಬೇಕು ಅಂದರೆ ಅದನ್ನು ಊರಲ್ಲಿ ಕುಲುಮೆ ಅವರಿಗೆ ಕೊಟ್ಟು ಮಚ್ಚು ಹಾಗೂ ಕೊಡಲಿ ಮಾಡಿಸ್ಕೋತೀನಿ ಅಂತ. ಇಲ್ಲಿ ರೆಡಿ ಇರೋದೇ ಸಿಗುತ್ತೆ, ಮಚ್ಚು ಕೊಡಲಿ ಕೊಡಿಸ್ತೀನಿ ಬಾ.. ಅಂದರೆ ಅದು ಆಗದು. ರೈಲು ಹಳಿಯೇ ಬೇಕು. ಅಪ್ಪ ಆಗ ರೈಲ್ವೆಯ ಒಂದು ಪ್ಲಾಟ್ಫಾರ್ಮ್ ಕೆಲಸ ಮಾಡಿಸುತ್ತಿದ್ದರು. ಅಲ್ಲಿಂದ ರೈಲ್ವೆ ಹಳಿ ಕದ್ದು ತರಲಿ ಅಂತ ಚಿಕ್ಕ ತಾತ. ಪೊಲೀಸು ಹಿಡ್ಕೊಂಡು ಹೋಗಿ ಕೇಸು ಹಾಕ್ತಾರೆ. ಸರ್ಕಾರೀ ವಸ್ತು ಕದ್ದ ಅಂತ ಆರು ವರ್ಷ ಜೈಲಿಗೆ ಹಾಕ್ತಾರೆ.. ಮನೆಯವರು ಬೀದಿಗೆ ಬೀಳ್ತಾರೆ....ಅಂತ ಅಪ್ಪ! ಕೊನೆಗೂ ಚಿಕ್ಕ ತಾತ ಅವರ ಆಸೆ ತೀರದೆ ದೇವರ ಪಾದ ಸೇರಿದರು. ಈಗ ಎಲ್ಲೋ ಪ್ರೇತ ಆಗಿ ನಮ್ಮಗಳ ಮನೆ ಮೇಲೆ ಅಲೆಯುತ್ತಾ ಇದ್ದಾರೆ ಅಂತ ನಮ್ಮ ಬಂಧುಗಳು ಹೇಳಿಕೊಳ್ಳುತ್ತಾ ಇದ್ದರು..!

ಕುಟ್ಟಣಿ ಎಲ್ಲೆಲ್ಲಿಗೋ ಎಳಿತ ಇದೆ ತಾನೇ? ಸರಿ ತಾತನ ಆ ಕಾಲದ ಕುಟ್ಟಣಿ ಎಲ್ಲಿರ ಬಹುದು ಅಂತ ತಲೆ ಕೆಡಿಸಿಕೊಂಡದ್ದೇ ಬಂತು. ಬಂಧು ಬಳಗ ವಿಚಾರಿಸಿದ್ದೂ ಸಹ ಆಯ್ತು. ಯಾರ ಮನೆಯಲ್ಲೂ ಅದು ಇರುವ ಸೂಚನೆ ಕಾಣಿಸಲಿಲ್ಲ.

ಪಾತ್ರೆ ಅಂಗಡಿಯಲ್ಲಿ ಹಿಂದೆ ಇದನ್ನು ನೋಡಿದ್ದ ನೆನಪು ಬಂತು. ನಮ್ಮ ತಾತನ ಹತ್ತಿರ ಇದ್ದ ಕುಟ್ಟಣಿ ಎಲ್ಲೂ ಸಿಕ್ಕಲಿಲ್ಲ. ಸ್ಟೀಲ್ ಹಿತ್ತಾಳೆ ಕಂಚು ಕುಟ್ಟಣಿ ಇದ್ದವು, ಅದೂ ಮೇಲಿಂದ ಬಿದ್ದರೆ ಚಪ್ಪಾನ್ ಚೂರು ಚೂರು ಪೀಸ್ ಪೀಸ್ ಆಗುವಂತಹುದು. ಕೊಂಡರೆ ಸುಮ್ಮನೆ ವೇಸ್ಟ್ ಅಂತ ಆಚೆ ಬರಬೇಕಾದರೆ ಏನಾಯ್ತು ಅಂದರೆ.. ಅಲ್ಲಿ ಒಂದು ರಿಪೇರಿಗೆ ಬಂದಿರುವ ಮಿಕ್ಸಿ ಕಾಣಿಸ ಬೇಕೇ?

ನಾನು ಇಂಜಿನಿಯರಿಂಗ್ ಓದಿಲ್ಲ ಅಂದರೂ ನನ್ನ ಬುರುಡೆ ಅದರಲ್ಲಿ ಇರೋ ಮೆದುಳು ಯಾವ ಇಂಜಿನಿಯರ್ ಮೆದುಳಿಗೂ ಕಮ್ಮಿ ಇಲ್ಲ. ನನ್ನ ತಲೆಗೆ ಐಡಿಯ ಹೇಗೆ ಹೊಳೆಯಿತು ಅಂತೀರಿ? ಮಿಕ್ಸಿ ನಲ್ಲಿ ಹಾಕ್ಕೊಂಡು ಪುಡಿ ಮಾಡಿಕೊಂಡು ತಿಂದರೆ ಆಯ್ತಲ್ಲಾ ಹಲ್ಲು ಲೆಸ್ ಬಾಯಿಯ ದೊಡ್ಡ ಡ್ರಾ ಬ್ಯಾಕ್ ಓವರ್ ಕಮ್ ಆದಹಾಗೆ...

ಯುರೇಕಾ ಅಂತ ಕೂಗಿದೆ ಮತ್ತು ಮುಂದಿನ ಹಲವು ತಿಂಗಳು ಮಿಕ್ಸಿ ಉಪ್ಯೋಗ ತುಂಬಾ ಚೆನ್ನಾಗಿ ಆಯಿತು. ಈಗ ಅದರ ಒಂದೆರೆಡು ನೆನಪು..

ಕೋಡುಬಳೆ, ಚಕ್ಕಲಿ, ತೆಂಗೋಳಲು, ಓಂ ಪುಡಿ.. ಈ ತರಹದವು ಮಿಕ್ಸಿಯಲ್ಲಿ

ಚೆನ್ನಾಗಿ ಪುಡಿ ಆಗುತ್ತೆ. ಡಬ್ಬದಲ್ಲಿ ತಿಂಗಳ ಗಟ್ಟಲೆ ಇಟ್ಟುಕೊಂಡು ತಿನ್ನಬಹುದು, ಬೇಗ ಖರ್ಚು ಆಗದೇ ಇದ್ದರೆ. ನನಗೆ ಆ ಪರಿಸ್ಥಿತಿ ಬರಲಿಲ್ಲ. ಅದೆಷ್ಟೇ ಕೇಜಿ ತಂದು ಪುಡಿ ಮಾಡಿದರೂ ಪುಡಿ ಆಗ್ತಿದ್ದ ಹಾಗೇ ಖಾಲಿ ಆಗಿ ಬಿಡ್ತಾ ಇತ್ತು. ಮಿಕ್ಕ ಕುರುಕಲು ಪುಡಿ, ಪುಡಿ ಚೆನ್ನಾಗೇ ಆದರೂ ಕಡಲೆ ಬೀಜ ಮಿಕ್ಸಿಯಲ್ಲಿ ಹಾಕಿ ಸ್ವಿಚ್ ಹಾಕಿದರೆ ಇದು ಪುಡಿ ಆಗೊಲ್ಲ, ಬದಲಿಗೆ ಎಣ್ಣೆ ಬಿಟ್ಟುಕೊಂಡು ಒಂದು ಆಯುರ್ವೇದದ ಲೇಹ ತರಹ ಹಸೀ ಮುದ್ದೆ ಮುದ್ದೆ ಹಾಗೇ ಕಾಣ್ಸುತ್ತೆ, ಕೆಲವು ಸಲ ಪಳನಿ ಪ್ರಸಾದದ ಹಾಗೆ, ಕೆಲವು ಸಲ ಅಯ್ಯಪ್ಪ ದೇವರ ಪ್ರಸಾದದ ಹಾಗೇ ಕಾಣಿಸುತ್ತೆ.ಆದರೆ ಎಂತಹ ರುಚಿ ಅಂತೀರಿ?

ನಾನು ನಮ್ಮ ಬಳಗದವರ ಜತೆ ಪುಣ್ಯ ಕ್ಷೇತ್ರ ದರ್ಶನಕ್ಕೆ ಹೋಗಬೇಕಾದರೆ, ನನ್ನ ಹಲ್ಲು ಇದ್ದ ಮತ್ತು ಇಲ್ಲದ ಕಾಲದಲ್ಲಿ ಒಂದೇ ರೀತಿ ಟ್ರೀಟ್ಮೆಂಟ್. ಹಲ್ಲಿದ್ದ ಕಾಲದಲ್ಲಿ ಮೊದಲು ಕುರು ಕುರು ತರೋರು, ಮುಂದೆ ಇಡೋರ.. ಅಕ್ಕ ಪಕ್ಕ ನೋಡದೇ ಪೂರ್ತಿ ಖಾಲಿ ಮಾಡ್ತಾ ಇದ್ದೆ, ಅವರು ಯಾರಿಗೂ ಏನೂ ಮಿಗಿಸ್ತಾ ಇರ್ಲಿಲ್ಲ. ಹಲ್ಲು ಹೋದ ಮೇಲೂ ಅದೇ ಕುರುಕಲು. ನಾನು ಅದನ್ನ ತಿನ್ನಲು ಆಗದು. ಖುಶಿಯಿಂದ ಪಾಪ ನಿಮಗೆ ಆಗುಲ್ಲವೇನೋ ಅಂತ ಲೊಚ್ ಲೋಚ್ ಮಾಡಿ ಅವರೆಲ್ಲ ಒಂದೊಂದನ್ನೂ ಹೊಗಳುತ್ತಾ ಸವಿಯೋರು. ನಾನು ಹೊಟ್ಟೆ ಉರಿ ಹೆಚ್ಚಿಸಿ ಕೊಳ್ತಾ ಇದ್ದೆ. ಪುಡಿ ಮಾಡೋದು ಶುರು ಮಾಡಿದೆ ನೋಡಿ, ಆಗ ಟ್ರಿಪ್ ಹೋಗಬೇಕು ಅಂದರೆ ಆರೋ ಏಳೋ ತಲಾ ಒಂದು ಕೆಜಿ ಡಬ್ಬ ನನ್ನ ಹೋಲ್ಡ್ ಆಲ್ ನಲ್ಲಿ. ಎರಡರಲ್ಲಿ ಕಡಲೆ ಬೀಜದ ಪುಡಿ ಲೇಹದ ತರಹದ್ದು, ಒಂದೊಂದರಲ್ಲಿ ಕೋಡುಬಳೆ ಪುಡಿ, ಚಕ್ಕಲಿ ಪುಡಿ, ನಿಪ್ಪಟ್ಟು ಪುಡಿ, ಓಂಪುಡಿ ಪುಡಿ... ಹೀಗೆ ತುಂಬಿಕೊಂಡು ಹೋಗ್ತಾ ಇದ್ದೆ. ಅವರೆಲ್ಲ ಅವರು ತಂದಿದ್ದು ಮುಕ್ಕ ಬೇಕಾದರೆ ನಾನು ಡಬ್ಬ ತೆಗೆದು ಅವರಿಗೆ ಒಂದೊಂದು ಚಿಟಿಕೆ, ಸ್ವಾಮಿಗಳು ಭಸ್ಮ ಕೊಟ್ಟ ಹಾಗೆ ಕೊಟ್ಟು ನಾನು ಮುಷ್ಟಿಯಲ್ಲಿ ಬಾಯಿ ತುಂಬಿಸ್ಕೋತಾ ಇದ್ದೆ. ಯಾರಿಗೂ ಎರಡನೇ ಚಿಟಿಕೆ ಕೊಟ್ಟವನೇ ಅಲ್ಲ ನಾನು! ಎಷ್ಟು ಸಂಕಟ ಹೊಟ್ಟೆಕಿಚ್ಚಿನಿಂದ ಅವರು ನನ್ನನ್ನು ನೋಡೋರು ಅಂದರೆ.....

ನನ್ನ ಒಬ್ಬರು ಬಂಧು ನಮ್ಮ ಜತೆ ಟ್ರಿಪ್ ಬರೋರು ವ್ಯಾನ್ ನಲ್ಲಿ ಕಿಟಿಕಿ ಪಕ್ಕ ಕೂತು ಯಾರನ್ನೂ ನೋಡದೆ ಡಬ್ಬಿಯಿಂದ ರವೆ ಉಂಡೆ, ಗುಲ್ಪಾ ವ ಟೆ, ಸಜ್ಜಿಗೆ , ಹಯಗ್ರೀವ ಇವುನ್ನ ತಿನ್ನೋರು, ರೂಮು ಆದರೆ ಗೋಡೆ ಕಡೆ ತಿರುಗಿ ತಿನ್ನೋರು. ಯಾರಿಗೂ ಒಂದು ಚೂರೂ ಕೊಡ್ತಾ ಇರಲಿಲ್ಲ. ಏನೇ ನಿನ್ನ ಗಂಡ ಅವಳನ್ನ ನೋಡಿ ಕಲಿತರಾ ಈ ಕೆಟ್ಟ ಬುದ್ಧಿ? ಅಂತ ನನ್ನಾಕೆ ನೆಂಟರ ಕೈಲಿ ಬೈಸಿಕೊಂಡು ಕಣ್ಣಲ್ಲಿ ಗಂಗಾ ಭಾಗೀರತಿ ಹರಿಸಿದ್ದಾಳೆ. ಆದರೆ ನಾನು ಡೊಂಟ್ ಕೇರ್ ಮಾಸ್ತರ್!.

ನನ್ನ ಹಲ್ಲು ರೆಡಿಯಾದ ಮತ್ತು ಅದು ನನ್ನ ಜೀವನ ಸಂಗಾತಿ ಅಲ್ಲ ಬಾಯಿ ಸಂಗಾತಿ ಆದ ಕತೆ ನೀವು ಮತ್ತೊಮ್ಮೆ ಸಿಕ್ಕಿದಾಗ ಖಂಡಿತ ಹೇಳ್ತೀನಿ ಇವ್ರೇ. ಅದೊಂದು ತುಂಬಾ ಮೈ ನವಿರೇಳಿಸುವ ರೋಚಕ ಕತೆ ಕಾಣ್ರೀ..... ●

ಲೇಡೀಸ್ಹಾಸ್ಟೆಲ್ಗೆ ಬೆಂಕಿ ಹತ್ತಿಕೊಂಡಿತು. ಪಕ್ಕದ ಹಾಸ್ಟಲಿನ ಹುಡುಗರು ಮುಗಿಬಿದ್ದರು. ಆಗ ದೂರದರ್ಶನದಲ್ಲಿ ಬಂದ ಬ್ರೇಕಿಂಗ್ನ್ಯೂಸ್ – "ಹಾಸ್ಟಲ್ಗೆ ಹತ್ತಿದ್ದ ಬೆಂಕಿಯನ್ನು ಹತೋಟಿಗೆ ತರಲಾಗಿದೆ. ಆದರೆ ಹುಡುಗರನ್ನು ಹತೋಟಿಗೆ ತರುವುದು ಕಷ್ಟವಾಗಿದೆ"

# ಚಂದ್ರಚೂಡ್ ಎಫೆಕ್ಟ್

ಇ.ಆರ್. ರಾಮಚಂದ್ರನ್

ಅಜ್ಜಿಯ ಪಕ್ಕದಲ್ಲಿ ಆಂದೋಳನ ಪತ್ರಿಕೆ ಬಿದ್ದಿತ್ತು. ಅಜ್ಜಿ ಒಳ್ಳೆ ಮೂಡ್ನಲ್ಲಿ ಇದ್ರು. ಇತ್ತೀಚೆಗೆ, ಮೈಸೂರಿನ ಮೂಡಾ ವಿಚಾರ ಮಾತಾಡಿದ್ರೆ ಮಾತ್ರ ಅಜ್ಜಿಗೆ ಕೆಂಡದಂಥ ಕೋಪ ಬರುತ್ತೆ!

'ಆಜ್ಜಿ! ಏನು ಓದ್ದೆ ಪೇಪರ್ನಲ್ಲಿ ? ಅದು ಓದಿ ಖುಷಿಯಾಗಿದೆ ಅಂತ ಇಂಪ್ರೆಷನ್ ಕೊಡ್ತಾ ಇದೀಯ'.

'ಅಲ್ವೋ! ಈ ತರಹ ಯಾರಾದ್ರೂ ಮಾತಾಡಿರೋದು ನಾನು ಇಲ್ಲಿಯ ತನಕ ಕೇಳಿಲ್ಲ, ಓದೂ ಇಲ್ಲ ಗೊತ್ತಾ?'

ಮ್ಯಾಟರ್ ಇಸ್ ಸೀರಿಯಸ್ ಅಂತ ಅನ್ನಿಸ್ತು. ಹೈ ಬಿಪಿ ಬೇರೆ ಇದೆ; ಇದು ನಮ್ಮ ಮನೆ ಅಜ್ಜೀನಾ ಬೇರೆ ಯಾರಾದ್ರೂ ಇವರಲ್ಲಿ ಸೇರಿ ಬಿಟ್ಟಿದಾರಾ ಅಂತ ಸ್ವಲ್ಪ ಹೆದರಿಕೆನೂ ಆಯ್ತು.

'ಅಜ್ಜಿ ರಿಲಾಕ್ಸ್. ಎಕ್ಸಿಟ್ ಆಗ್ಬೇಡ.. ಬೇಕಾದ್ರೆ ನೀರು ಕುಡಿ. ಹಾಲಲ್ಲಿ ಹಾರ್ಲಿಕ್ಸ್ ಹಾಕಿ ತರ್ಲಾ ?'

'ಏನೂ ಬೇಡ. ನನಗೆ ಏನು ಆಗಿದಿಯೋ ಧಾಡಿ? ಎಲ್ಲಾ ಸರಿ ಇದೆ'.

'ಹಾಗಿದ್ರೆ ಒಳ್ಳೆದು. ಅಂದ ಹಾಗೆ ಏನು ಓದಿದೆ ಅಜ್ಜಿ ಇವತ್ತಿನ ಪೇಪರ್ನಲ್ಲಿ?'

'ನಮ್ಮ ಸುಪ್ರೀಮ್ ಕೋರ್ಟ ಮುಖ್ಯ ನ್ಯಾಯಾದೀಶ ಚಂದ್ರಚೂಡ್ ಹೇಳ್ತಾರೇ.. ಜನಗಳಿಗೆ ರೋಸು ಹೋಗಿದೆ. ವರ್ಷಾನುಗಟ್ಲೆ ಕಾಯ್ಬೇಕು ಒಂದು ಕೇಸಿಗೆ ತೀರ್ಪು ಬರೋ ತನಕ. ಜನಗಳಿಗೆ ಸಾಕಾಗಿ ಹೋಗಿದೆ'... ಅಂತ.'

'ಇದನ್ನ ಚಂದ್ರಚೂಡ್ ಅವ್ರೇ ಹೇಳಿದ್ರಾ? ಆಶ್ಚರ್ಯ. ಹಾಗಿದ್ರೆ ಅವರದೇ ಯಾವುದೋ ಒಂದು ಕೇಸು ಲಾಯರಿಗಳು ಎಳಕೊಂಡು ಹೋಗ್ತಿರ್ಬೇಕು ಅಥವ ತಾವು ಬದುಕಿರೋ ತನಕ ಇದು ಬಗೆ ಹರಿಯಲ್ಲ ಅಂತ ಅನ್ಸಿರಬೇಕು.. ಒಂದು ಕೇಸಿನ ರಿಸಲ್ಟು ನಾವು ಬದುಕಿದ್ದಾಗ ಬರುತ್ತೋ ಇಲ್ಲ ನಾವು ಸತ್ತ ಮೇಲೆ ಬರುತ್ತಾಂತ ಇಲ್ಲಿಯ ತನಕ ಯಾರಿಗೂ ಗೊತ್ತಿಲ್ಲ'.

'ದೆಹಲಿಲಿ ಮೊನ್ನೆ ಅದಾಲತ್ನಲ್ಲಿ ಚಂದ್ರಚೂಡ್ ಇದನ್ನೂ ಹೇಳಿದ್ರು..... ಕೇಸು ಹಾಕಿದ್ಮೇಲೆ ಅದು ಹೋಗೋ ರೀತಿ ನೋಡಿದ್ರೆ ನಾನು ಯಾಕಪ್ಪಾ ಕೋರ್ಟಗೆ ಹೋದೆ.. ಕೇಸು ಎಷ್ಟೋ ವರ್ಷ ಓಡಿ ನನಗೇ ಅದು ಪನಿಷ್ಮೆಂಟಾಗುತ್ತೆ ಅಂತ ಜನ ಫೀಲ್ ಮಾಡ್ಕೋತಿದಾರೆ ಅಂತಾರೋ ನಮ್ಮ ಸುಪ್ರೀಮ್ ಕೋರ್ಟ ಜಡ್ಜು!'

'ಅಯ್ಯೋ! ಹೌದಾ ಅಜ್ಜಿ?'

'ಇನ್ನೊಂದನ್ನೂ ಹೇಳ್ತಾರೆ... ನಾವು ಜಡ್ಜಗಳು ಸಿಂಹಾಸನದಲ್ಲಿ ಕೂತಿರ್ತೀವಿ. ನಮ್ಮ ಮುಂದೆ ಕೆಳಗಡೆ ಲಾಯರಿಗಳು ಗುದ್ದಾಡ್ತಾ ಇರತಾರೆ... ಅವ್ರನ್ನ ಬಿಟ್ಟು ನಾವು ಕಕ್ಷಿದಾರನ್ನ–ಆ ಬಡಪಾಯಿಯನ್ನ ನೋಡೋದೂ ಇಲ್ಲ ಆ ಪ್ರಾಣಿ ಹ್ಯಾಗಿದಾನೋ ಅಂತ!'

'ಇಷ್ಟು ವರ್ಷ ಲಕ್ಷಾಂತರ ಜನಗಳ ಬಾಯಲ್ಲಿ ಬಂದಿದ್ದ ಮಾತನ್ನ,

ವರ್ಷಾನುಗಟ್ಲೆ ಕೋರ್ಟಗೆ ಸುತ್ತಿ ತಲೇ ಚಚ್ಕೊಂಡು ಹೊರಗೆ ಬರೋವ್ರ ಮಾತು ಕೊನೆಗೆ ಚಂದ್ರಚೂಡ್ ಅವ್ರ ಬಾಯಲ್ಲೇ ಬಂತು...'

'ಅಂದ್ರೆ ಅವರಿಗೇ ಮನದಟ್ಟಾಗಿದೆ ಕಣೋ! ಅಷ್ಟು ವರ್ಷ ಸೆಣದಾಡಿದ ಮೇಲೆ ಬಂದ ತೀರ್ಪು ಹ್ಯಾಗೆಂದರೆ: 'ಕೋರ್ಟಲ್ಲಿ ಗೆದ್ದವನು ಸೋತ, ಸೋತವನು ಸತ್ತ' ಅಂತ. ಒಬ್ಬ ಸುಪ್ರೀಂ ಕೋರ್ಟ ನ್ಯಾಯಾಧೀಶ ತನ್ನ ಕೋರ್ಟಗಳಲ್ಲಿ ಹೀಗೆ ನಡೆಯುತ್ತಿದೆ ಅನ್ನುವುದನ್ನು ಬಹಿರಂಗವಾಗಿ ಒಪ್ಕೊಂಡು ಎಲ್ಲಾರ ಅವಸ್ಥೆನೂ ಹೀಗೇ ಅಂತ ಹೇಳಿದ್ರು ನೋಡು. ಅದನ್ನ ಮೆಚ್ಚ ಬೇಕಾದ್ದೇ. ಬೇರೇವ್ರೂ ಹೀಗೇ ಒಪ್ಪಿಕೊಂಡ್ರೆ ಎಷ್ಟು ಒಳ್ಳೆದಾಗುತ್ತೆ ನೋಡು'.

'ಬೇರೇವ್ರು ಯಾರಜ್ಜಿ?'



'ನಮ್ಮ ರಾಜಕಾರಿಣಿಗಳು.... ಪ್ರತಿ ಎಲೆಕ್ಷನ್ ಮುಂಚೆ ಅವ್ರ ವರಮಾನದಲ್ಲಿ 200, 300 ಕೋಟಿ ಜಾಸ್ತಿ ಆಗಿರುತ್ತಲ್ಲೋ.... ಅವ್ರು ....ಛೇ... ನಾನು ಎಂಥಾ ಕೆಲ್ಸ ಮಾಡ್ತಿದೀನಿ... ಬರೀ ರಾಜಕಾರಿಣಿಯಾಗಿ ನನಗೆ ಬರೋಸಂಬಳದಲ್ಲಿ ನನ್ನ ವರಮಾನದಲ್ಲಿ ಕೋಟಿಗಟ್ಲೆ ದುಡ್ಡು ಹೇಗೆ ಸುರಿದು ಬರುತ್ತೆ... ಛೆ ಛೆ ಇದು ಸರಿಯಲ್ಲ... ಅಂತ ಯಾರಿಗೆ ಹೇಳ್ದೆ ಇದ್ರೂ ಪಕ್ಕದ ರಾಜಕಾರಿಣಿಗೆ ಹೇಳಿದರೆ, ಅವನೂ ಗಳ ಗಳ ಅಳುತ್ತಾ, 'ನಿಜ ನೀನು ಹೇಳೊದು ...ಇನ್ಮುಂದೆ ಈ ತರಹ ಹಣಾನ ಖಂಡಿತ ನಾನು ಮುಟ್ಟಲ್ಲ.. ನನ್ನ ವರಮಾನ ಕಡಿಮೆ ಆದ್ರೂ ಪರವಾಗಿಲ್ಲ' ಅಂತ ಹೇಳ್ಬಹುದು... ಮುಂದೆ ಪ್ರಾಮಾಣಿಕವಾಗಿ ನಡ್ಕೋಬಹುದು.. ಹೀಗಾಯ್ತೂ ಅಂದ್ರೆ ಅದು 'ಚಂದ್ರಚೂಡ್ ಎಫೆಕ್ಟ್'.

'ಚಂದ್ರಚೂಡ್ ಎಫೆಕ್ಟ್'?

'ಹೌದೋ! ಮಹಾನುಭಾವ ಎಂಥ ಮಾತು ಆಡ್ದ! ತನ್ನ ಮುಖ ಕನ್ನಡೀಲಿ ನೋಡ್ಕೊಂಡ ಹಾಗೆ! ಅದಕ್ಕೆ 'ಚಂದ್ರಚೂಡ್ ಎಫೆಕ್ಟ್' ಅಂತ ಕರೀಬಹುದು...ನಿನಗೆ ಗೊತ್ತಿದೆಯಾ? ನಮ್ಮ ಕಂಪನಿಗಳು ಹೇಳುವುದು ಒಂದು, ಮಾಡುವುದು ಇನ್ನೊಂದು. ಪೇಪರನಲ್ಲಿ ಬಂದಿತ್ತು. ಐಟಿಸಿ ಕಂಪನಿ–ಸಿಗರೇಟ್ ಮಾಡುವ ಮತ್ತು ಪಂಚ ತಾರಾ ಹೋಟಲ್ಗಳನ್ನು ಇಟ್ಟಿರುವ ಕಂಪನಿ, 'ಮಾರಿ' ಬಿಸ್ಕೆಟ್ನೂ ಮಾಡ್ತಾರೆ. ಹೋದ ವರ್ಷ ಒಬ್ಬ ಗ್ರಾಹಕ ಒಂದು ಪ್ಯಾಕೆಟ್ ಮಾರಿ ಬಿಸ್ಕೆಟ್ಗೆ ದುಡ್ಡು ಕೊಟ್ಟು ಕೊಂಡ ಮೇಲೆ ಅದನ್ನು ಒಡೆದು ನೋಡಿದಾಗ, 16 ಬಿಸ್ಕೆಟ್ ಇರಬೇಕಾದ ಪ್ಯಾಕೆಟ್ನಲ್ಲಿ ಹದಿನೈದೇ ಇತ್ತು! ಎಲ್ಲಿ ಕೊಂಡು ಕೊಂಡನೋ ಆ ಅಂಗಡಿ ಮತ್ತು ಐಟಿಸಿ ಕಂಪನಿಯ ಮೇಲೆ ಕೇಸ್ ಹಾಕಿದ ಮೇಲೆ, ಕನ್ಸೂಮರ್ ಕೋರ್ಟ ಐಟಿಸಿ ಕಂಪನಿಗೆ ಒಂದು ಲಕ್ಷ ರೂಪಾಯಿ

ಫೈನ್ ಹಾಕಿತು. ಇಲ್ಲಿ ಚಂದ್ರಚೂಡ್ ಎಫೆಕ್ಟ್ ಬೇಕೋ.. ಮಕ್ಕಳು ತಿನ್ನೋ ಬಿಸ್ಕೆಟ್ ಮಾರಿ ಬಿಸ್ಕೆಟ್. ಇನ್ನು ಮೇಲೆ ಹೀಗೆ ಮಾಡಲ್ಲಾಂತ ಆ ಕಂಪನಿ ಆಣೆ ಮಾಡಿ ಹಾಗೆ ನಡಕೊಂಡ್ರೆ ಅದು ಚಂದ್ರಚೂಡ್ ಎಫೆಕ್ಟ್‌ನಿಂದ ಆಗುತ್ತೆ'!

'ಹೌದು ಅಜ್ಜಿ'.

'ಸ್ವಲ್ಪ ವರ್ಷದ ಹಿಂದೆ ಮ್ಯಾಗಿ ನೂಡಲ್ಸ್ ಕಂಪನಿ ಸ್ವಿಟ್ಜರ್ಲ್ಯಾಂಡ್ 'ನೆಸ್ಲೆ' ಅವರ ಪ್ಯಾಕೆಟ್ನಲ್ಲಿ 'ಮೋನೊ ಸೋಡಿಯಂ ಗ್ಲೂಟಮೇಟ್' (ಎಂಎಸ್ಜಿ) ಎನ್ನುವ ರಾಸಾಯನ ಪದಾರ್ಥ ಮಾಗಿ ನೂಡಲ್ಸ್ ಮಾಡುವಾಗ ಬಳಕೆ ಮಾಡಿದ್ದರು ಎನ್ನುವ ಕಾರಣಕ್ಕೆ ಮ್ಯಾಗಿಯನ್ನು ರದ್ದು ಮಾಡಲಾಗಿತ್ತು. ಆ ಕೆಮಿಕಲ್ನಿಂದ ಕ್ಯಾನ್ಸರ್ ಬರಬಹುದೆಂಬ ಶಂಕೆ ಇತ್ತು. ಮಕ್ಕಳು ತಿನ್ನುವ ನೂಡಲ್ಸೆಗೆ ಎಂಎಸ್ಜಿ ಜಾಸ್ತಿ ಬಳಸಿದ್ದರು. ನೂಡಲ್ಸನ್ನು ಲ್ಯಾಬಿನಲ್ಲಿ ಪರೀಕ್ಷೆ ಮಾಡಿದಾಗ ಪ್ಯಾಕೆಟ್ನಲ್ಲಿ ಪ್ರಿಂಟ್ ಮಾಡಿದ್ದಕ್ಕಿಂತ ಮ್ಯಾಗಿಯಲ್ಲಿ ಎಂ ಎಸ್ಜಿ ಜಾಸ್ತಿ ಇರುವುದು ಕಂಡುಬಂತು. ಸಾವಿರಾರು ಟನ್ಗಟ್ಟಲೆ ಮ್ಯಾಗಿಯನ್ನು ವಾಪಸ್ಸು ಮಾಡಲಾಯಿತು. ಇದೂ ಸಾಮಾನ್ಯವಾಗಿ ಮಕ್ಕಳು ಹೆಚ್ಚಿಗೆ ತಿಂತಾರೆ..ಅದರಲ್ಲಿ ಮೋಸ ಮಾಡಬಾರದು ..ಇಲ್ಲೂ ಸಿಎ ಬೇಕಾಗುತ್ತೆ'.

'ಸಿಎ..ಗೊತ್ತಾಯ್ತು.. ಎಫೆಕ್ಟು'.

'ಹಾಗೆಯೇ ಈ ನೀಟ್, ಕ್ಲೀನ್ ಪರೀಕ್ಷೆಗಳಿದೆಯಲ್ಲ ..ಅವುಗಳನ್ನ ಸರ್ಕಾರ ಸರಿಯಾಗಿ ವ್ಯವಸ್ಥೆ ಮಾಡಬೇಕು.. ಇಲ್ದಿದ್ದರೆ ಅನ್ಯಾಯವಾಗಿ ಒಳ್ಳೆ ಹುಡುಗ್ರು ಗೊತ ಹೋಡೀತಿದಾರೆ, ಏನೂ ಓದ್ದೆ ಓಡಾಡ್ಕೊಂಡರಿರೋ ಪುಂಡ ಹುಡುಗ್ರು ಕೊಸ್ಚನ್ ಪೇಪರ್ ಕದ್ದು ಮೆಡಿಕಲ್, ಇಂಜಿನಿಯರಿಂಗ್ ಸೀಟು ಹೋಡೀತಿದಾರೆ'.

'ನೀಟ್ ಒಂದೇ ಅಜ್ಜಿ, ಕ್ಲೀನ್ ಯಾವ ಪರೀಕ್ಷೆನೂ ಇಲ್ಲ... ಈಗ ಅಜ್ಜಿ ನೀನು ಹೇಳುವುದು–ಇವೆಲ್ಲ ಕಂಪನಿಗಳೂ, ರಾಜಕಾರಿಣಿಗಳೂ ಸ್ವಲ್ಪ 'ಚಂದ್ರಚೂಡ್ ಎಫೆಕ್ಟ್' ಅವರ ಮನಸ್ಸಿನಲ್ಲಿ ಸೇರಿಸಿಕೊಂಡರೆ ಅವರು ಮಾರುವ ಪದಾರ್ಥಗಳನ್ನು ಪ್ರಾಮಾಣಿಕವಾಗಿ ವ್ಯಾಪಾರ ಮಾಡಬಹುದು. ಹಾಗೆಯೇ, ಅದು ನಮ್ಮ ರಾಜ್ಯ ಸರ್ಕಾರವೋ , ಕೇಂದ್ರ ಸರ್ಕಾರವೋ ಆಗ್ಲಿ... ಅವ್ರು ಮಾಡುವ ಕೆಲಸಕ್ಕೆ ಒಂದು ಚೂರು ಚಂದ್ರಚೂಡ್ ಎಫೆಕ್ಟ್ ಸೇರಿಸಿಕೊಂಡರೆ ನೀಟ್, ವಾಲ್ಮೀಕಿ, ಮೂಡ ಅಂಥಹ ಪ್ರಕರಣಗಳು ಮುಂದೆ ನಡೆಯಲ್ಲ ಅಲ್ವಾ ಅಜ್ಜಿ'.

'ಅಬ್ಬ! ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡು ಸಾರಾಂಶ ಹೇಳಿದೆಯೋ ರಾಮು!'

●

**"ಹೊಗಳಿಕೆಯೋ/ತೆಗಳಿಕೆಯೋ..!**

ಗುಂಡ ತನ್ನ ಗರ್ಲ್ ಫ್ರೆಂಡ್‌ಗೆ ಏನು ಗಿಫ್ಟ್ ಕೊಡಬೇಕೆಂದು ಬಹಳ ತಲೆಕೆಡಿಸಿಕೊಂಡು, ಕೊನೆಗೆ ಅವಳ ಬೆಸ್ಟ್ ಫ್ರೆಂಡ್ ಬಳಿಹೋಗಿ, ನಿನ್ನ ಸ್ನೇಹಿತೆಗೆ ಏನು ಕೊಟ್ಟರೆ ಅವಳು ಮೆಚ್ಚಬಹುದು ? ಎಂದು ಕೇಳಿದನು, ಅವಳು–ನಿನ್ನನ್ನು ಅವಳು ಇಷ್ಟಪಟ್ಟಿದ್ದಾಳ? ಎಂದು ಕೇಳಿದಾಗ, ಗುಂಡ – ಹೌದೆಂದನು, ಆಗ ಅವಳು– ನಿನ್ನಂತವನನ್ನೇ ಮನಸಾರೆ ಮೆಚ್ಚಿರಬೇಕಿದ್ರೆ, ಅವಳು ನೀನು ಏನು ಕೊಟ್ಟರೂ ಮೆಚ್ಚುತ್ತಾಳೆ..! ಎಂದಾಗ ಗುಂಡ ಗಲಿಬಿಲಿಗೊಂಡು ಕಕ್ಕಾಬಿಕ್ಕಿಯಾದ...!–

–ವಿ.ವಿ.ರಾವ್

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**ದಂನಆ**

- ✓ ಈ ನವೆಂಬರ್‌ಗೆ -- ಸರಿಗನ್ನಡಂಗೆಲ್ಗೆ!
- ✓ ನಾಸ್ತಿಕವಾದದ ಬಗ್ಗೆ ಪುಸ್ತಕ ಬರೆದು ಅದು ಖರ್ಚಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರೆ?
- ✓ ಗಾಳಕ್ಕೆ ಸಿಕ್ಕ ಮೀನನ್ನು ನೋಡಿದ ಒಂದು ಮೀನು ಇನ್ನೊಂದಕ್ಕೆ ಹೇಳಿತಂತೆ: ಬಾಯಿ ಮುಚ್ಚಿಕೊಂಡಿದ್ದಿದ್ದರೆ ಅನಾಹುತ ಆಗುತ್ತಿರಲಿಲ್ಲ.
- ✓ ಟಿ ವಿ ತಲೆ ನೋವು ಬರಿಸುತ್ತದೆ. ಜತೆಗೆ ಅದಕ್ಕೆ ಪರಿಹಾರ ಕೊಳ್ಳುವುದನ್ನೂ ತೋರಿಸುತ್ತದೆ.
- ✓ ಎ ಯಂಗ್ ಲೇಡಿ ಅಸ್ಟ್ರಾಲಜರ್ ವಾಸ್ ಆಸ್ಕಡ್ ಬೈ ಎ ಯಂಗ್ ಮ್ಯಾನ್: ವಿಲ್ ವಿ ಮ್ಯಾರಿ ಯು?
- ✓ ನನ್ನ ಗೆಳೆಯ ಸಿಬಿಐನಲ್ಲಿದ್ದಾನೆ. ಕಳೆದ ವಾರ ಅವನನ್ನು ಹಿಡಿದರು.
- ✓ ನಾನು ವಾರ ಭವಿಷ್ಯವನ್ನು ಓದುವುದೇ ಇಲ್ಲ. ಏಕೆಂದರೆ ನಾವು ವೃಶ್ಚಿಕ ರಾಶಿಯವರು. ಅದನ್ನೆಲ್ಲ ನಂಬುವುದಿಲ್ಲ.
- ✓ ಇಫ್ ಎ ವರ್ಡ್ ಈಸ್ ಮಿಸ್ ಸ್ಪೆಲ್ಟ್ ಇನ್ ಡಿಕ್ಷನರಿ ಹೌ ವುಡ್ ವಿ ನೊ?
- ✓ ಅವನು 100 ದಾಟಿದ, 20ಕ್ಕೆ ಸತ್ತ -- ಸಂಚಾರಿ ಪೊಲೀಸ್ ಜಾಹೀರಾತು.
- ✓ ಎಲ್ಲರೂ ಮೂರ್ಖರೇ–ಇತರರ ದೃಷ್ಟಿಯಲ್ಲಿ.
- ✓ ಎ ಪೈಂಟರ್ ಈಸ್ ಎ ಮ್ಯಾನ್ ಹು ಪೈಂಟ್ಸ್ ವಾಟ್ ಸೆಲ್ಸ್. ಅನ್ ಆರ್ಟಿಸ್ಟ್, ಹೌಎವೆರ್, ಈಸ್ ಎ ಮ್ಯಾನ್ ಹು ಸೆಲ್ಸ್ ವಾಟ್ ಹಿ ಪೈಂಟ್ಸ್.
- ✓ ನೆನಪಿರಲಿ: ನೀವು ಎವರೆಸ್ಟ್ ಶಿಖರ ಹತ್ತಿ ನಿಂತಾಗ ಚಪ್ಪಾಳೆ ಹೊಡೆದು ಸಂಭ್ರಮಿಸಲು ಯಾರೂ ಇರುವುದಿಲ್ಲ.
- ✓ ಹಳೇ ಸುಳ್ಳು: ಚೆಕ್ ಈಸ್ ಈನ್ ದಿ ಮೇಲ್.

  ಹೊಸ ಸುಳ್ಳು: ಐ ಡಿಡ್ನಂಟ್ ಚೆಕ್ ದಿ ಮೇಲ್.
- ✓ ಮದುವೆ ರಿಸೆಪ್ಷನ್‌ಗೆ ಹೋಗುವುದು ನೀವಲ್ಲ, ನಿಮ್ಮ ಡ್ರೆಸ್.
- ✓ ಆನ್ ಟಿವಿ ಯು ಟಾಕ್ ಅಂಟಿಲ್ ಯು ಹ್ಯಾವ್ ಸಮಥಿಂಗ್ ಟು ಸೆ.

●

## "ಕಂಕುಳಲ್ಲೇ ಕೂಸು ಇಟ್ಕೊಂಡು ಊರೆಲ್ಲಾ ಹುಡುಕಿದ್ರಂತೆ..
## "ಹೀಗೂ ಉಂಟೇ..?

✍ಸುಮನಾ

ಈ ಗಾದೆಯ ಪ್ರತ್ಯಕ್ಷ ಅನುಭವ....

ತೊಂಭತ್ತರ ದಶಕ, ಊರಿಂದ ಅತ್ತೆ, ಮಾವ ಬಂದು ಎರಡು ದಿನವಾಗಿತ್ತು. ಎಲ್ಲರ ಜೊತೆ ಎಲ್ಲಿಗಾದ್ರೂ ಹೋಗಬೇಕು ಅಂತ ಪ್ಲಾನ್ ಮಾಡಿದ್ಲು. ಸವಿತ. ಹಾಗೇ ತನ್ನ ಎರಡೂವರೆ ವರ್ಷದ ಪುಟ್ಟ ಮಗಳು ದೀಪುವಿಗೆ ಪ್ರಾಣಿ ಸಂಗ್ರಹಾಲಯ.. ತೋರಿಸುವ ಐಡಿಯಾನೂ ಮಾಡಿದ್ದಳು.

ಅದರಂತೆ ಬೆಳಿಗ್ಗೆಯೇ ಎಲ್ಲರೂ ಎದ್ದು ತಯಾರಾಗಿ ಹೊರಟರು.. ಸವಿತಾ ಯಜಮಾನರಿಗೆ ಅನಾರೋಗ್ಯವಾಗಿ ಬಂದಿರಲಿಲ್ಲ.




ಪ್ರಾಣಿ ಸಂಗ್ರಹಾಲಯ ಎಲ್ಲವನ್ನೂ ಸುತ್ತಾಡಿ ಹೊರಬರುವ ಹೊತ್ತಿಗೆ ಸಂಜೆಗತ್ತಲು ಆವರಿಸಿತ್ತು. ಗೇಟಿನ ಹೊರಗೆ ಬಂದು. ಮರಗಿಡಗಳ ಕೆಳಗೆ ನಿಂತು ಬಸ್ಸಿನ ದಾರಿ ಎದುರು ನೋಡುತ್ತಿದ್ದಂತೆ.. ಇದ್ದಕ್ಕಿದ್ದಂತೆ ಸವಿತಾ.. ಅಯ್ಯೋ ಅಯ್ಯೋ, ಅತ್ತೇ ಮಗು ಎಲ್ಲಿ? ಕಾಣ್ತಿಲ್ಲ.. ಒಳಗೇ ಏನಾದರೂ ಬಿಟ್ಟು ಬಂದ್ಬಿಟ್ನೇನೋ ಅಂತ ಕಳವಳ, ಗಾಬರಿ ಆಗಿ, ಜೋರಾಗಿ ಅಳುತ್ತಾ ಹುಡುಕಾಡಿದಳು..

ಏನಾಯ್ತೋ ಅಂತ ಅತ್ತೆ, ಮಾವನವ್ರೂ ಗಾಬ್ರಿ ಆದ್ರು.. ಅಯ್ಯೋ, ದೀಪುನ ಎಲ್ಲೋ ಬಿಟ್ಬಿಟ್ಟಿದೀನಿ ಅತ್ತೆ..ಎಲ್ಲಿದಾಳೋ ಏನೋ, ಈಗೇನು ಮಾಡೋದು ಅಂದಳು. ಅದ್ಹೇಗೆ ಬಿಡ್ತೀಯೇನೆ?? ನೀನು ಮಗೂನ ಎತ್ತಿಕೊಂಡಿದ್ದು ನಾನೇ ನೋಡಿದ್ದೆ..ನೀನು ಹಣ್ಣು ತೊಗೋಳುವಾಗ ಏನಾದ್ರೂ ಕೆಳಗಿಳಿಸಿದ್ಯಾ??

ನೋಡು ಗೇಟಿನ ಹತ್ತಿರ ಏನಾದ್ರೂ ಇದಾಳಾ ಅಂತ ಏನೋ?? ಏನಪ್ಪಾ ಮಾಡೋದು ಈಗ, ಅಂತ ಅವರೂ, ಮಾವನವರೂ ತಲೆಕೆಡಿಸಿ ಕೊಂಡ್ರು. ಮಗೂನ ಎಲ್ಲೋ ಬಿಟ್ಬಿಟ್ಟಿದಾಳೆ, ಯಾರಾದ್ರೂ ಎತ್ತುಕೊಂಡು ಹೋದ್ರೆ ಏನ್ಗತಿ ಅಂತ ಭಯ ಬಿದ್ರು.

ಸವಿಗೆ ಕೆನ್ನೆ ಮೇಲೆ ಆಗ್ಲೇ ಯಾವುದೋ ಹುಳು ಬೇರೆ ಬುಳು, ಬುಳು ಅಂತ ಓಡಾಡಿದಂತೆ ಆಯ್ತು..ಛೆ ..ಛೆ..ಅಂತ ಕೈಯಿಂದ ಒದರಿದ್ಲು..ಅವಳ ಕಿರುಚಾಟ ಮುಂದುವರೆದಿತ್ತು. ಸ್ವಲ್ಪ ಹೊತ್ತಿನ ಬಳಿಕ ಮತ್ತೆ ಕೆನ್ನೆಗೆ ಏನೋ ಬುಳು, ಬುಳು ಅಂದಂತೆ..ಆಯ್ತು..ಛೇ ಏನಿದು ಅಂತ ಒಮ್ಮೆ ಜೋರಾಗಿ ಕೊಡವಿದಳು..

ಏನಾಶ್ಚರ್ಯ..ದೀಪು "ಅಮ್ಮ , ಇಲ್ನೋಡು ಅಂದ ಹಾಗಾಯ್ತು.. ಪುಟ್ಟ ಕೈಯಿಂದ ಕೆನ್ನೆ ತಡವಿ, ಅಮ್ಮ, ಅಮ್ಮ ಅಂತ ಮಗಳು ಕರೆದಂತಾಗಿ ನೋಡಿದಾಗ..ನಗು ಅನ್ನೋದು ತಡಯೋಕೆ ಆಗ್ಲಿಲ್ಲ..ಈ ಪರಿಯ ನಗು ಜೀವನದಲ್ಲೇ ನಕ್ಕಿರಲಿಲ್ಲ ಏನಾಯ್ತೇ ಅಂತ ಅಂದ ಅತ್ತೆಗೆ..ಅಯ್ಯೋ...ಮಗು ಇಲ್ಲೇ ಇದಾಳೆ ಅತ್ತೆ, ನನ್ನ ಕಂಕುಳಲ್ಲೇ, ನಾನೇ ಎತ್ಕೊಂಡಿದೀನಿ.. ಛೆ..ಛೆ.. ಅಂತ ತಲೆ ಚಚ್ಕೊಂಡಳು, ಹೀಗ್ಯಾಕಾಯ್ತು.. ಪಾಪ,

ಮಗು ಅಮ್ಮ, ಅಮ್ಮ ಅಂತ ಕೆನ್ನೆಗೆ ಕೈ ತಟ್ಟಿ ಇಲ್ಲೇ ಇದೀನಿ ಅಂತ ಹೇಳೋಕೆ ಪ್ರಯತ್ನ ಮಾಡಿದೆ, ನಾನೇ ಗಾಭರಿಯಲ್ಲಿ ಯಾವುದೋ ಹುಳುವೋ, ಎಲೆಯೋ ಅಂದ್ಕೊಂಡೆ ಅತ್ತೆ, ಅಂತ ಅಳು ಮರೆತು, ಮಗುವಿಗೆ ಮುತ್ತಿಡುತ್ತಾ ಹರುಷ ಬೆರೆತ ನಗುವಿನಲ್ಲಿ ಹರಿದ ಕಣ್ಣೀರನ್ನು ಒರೆಸುತ್ತಾ ಹೇಳಿದಾಗ ಅತ್ತೆ, .ಥೇ .ಥೇ.ಥೇ. ಈಗ್ಲೇ ಈ ಮರೆಗುಳಿತನ, ಆಬ್ಸೆಂಟ್ ಮೈಂಡೆಡ್ ನೆಸ್ ಸ್ವಭಾವ, ಯಾಕೇ ನಿಂಗೆ..

ಬಲು ಚೆನ್ನಾಯ್ತು ಕಣೇ ಅಂತ ಬಿದ್ದೂ ಬಿದ್ದೂ ನಕ್ಕರು.. "ಕಂಕುಳಲ್ಲೇ ಕೂಸು ಇಟ್ಕೊಂಡು ಊರೆಲ್ಲಾ ಹುಡುಕಿದ್ರಂತೆ ", ಅನ್ನೋ ಗಾದೆ ನಿಜ ಮಾಡ್ಬಿಟ್ಟೆ ನೋಡು,ಅದೇನೋ ಕಣ್ಣುಕುರುಡಾದ ಹಾಗೆ ನಮ್ಗಾದ್ರೂ ಕಾಣೋದೂ ಬೇಡ್ವೇನೇ..

ಈ ಪರಿ.. ಕಣ್ಕಟ್ಟಾದ ಹಾಗಾಯ್ತಲ್ಲೇ. ಹೋಗ್ಲಿ ನಡಿ, ಬಸ್ಸು ಬಂತು..ಹುಷಾರಾಗಿ, ಭದ್ರವಾಗಿ ಮಗೂನ ಎತ್ಕೊಂಡು ಕೂತ್ಕೋ.. ಅಂತ ಹೇಳ್ತಾ ಅತ್ತೆ, ಮಾವ ಸುತ್ತಮುತ್ತ ಇದ್ದ ಕೆಲವರು ಹೊಟ್ಟೆ ಹುಣ್ಣಾಗುವಂತೆ ನಕ್ಕರು.

ಬಸ್ಸನ್ನು ಏರಿ ಮಗುವಿನೊಂದಿಗೆ ಕುಳಿತ ಸವಿತಾ ಮನೆ ತಲುಪೋ ವರ್ಗೂ ಈ ಘಟನೆ ಜ್ಞಾಪಿಸಿಕೊಂಡು ನಕ್ಕಿದ್ದೇ ನಕ್ಕಿದ್ದು..

ಈಗ್ಲೂ ಯಾರಾದ್ರೂ ಬಂದಾಗ ಪ್ರಾಣಿ ಸಂಗ್ರಹಾಲಯಕ್ಕೆ ಹೋಗೋಣ ಅಂದಾಗ..ಕಸಿನ್ಸ್ ಮಗಳಿಗೆ ತಮಾಷೆ ಮಾಡ್ತಾರೆ.. ಈಗ ಇಪ್ಪತ್ತೈದು, ಮೂವತ್ತು ವರ್ಷಗಳ ಹಿಂದೆ ನಿಮ್ಮಮ್ಮ ನಿನ್ನನ್ನು ಎತ್ಕೊಂಡೇ ಆಬ್ಸೆಂಟ್ ಮೈಂಡೆಡ್ ಪ್ರೊಫೆಸರ್ ಆಗಿದ್ರು..

ನೀನು ಹುಷಾರು ಕಣೇ, ನಿನ್ನ ಮಗ ಪುಟ್ಟ ಅಭಿಯನ್ನು ಕರ್ಕೊಂಡು ಬೇರೆ ಹೊರಟಿದೀಯಾ ಅಂತ..????

●

---

ಅಂದು ತರಗತಿಯಲ್ಲಿ ಮೇಡಂ ಕೇಳಿದರು ಏ..ಗುಂಡ, ಏನು ಮಾಡ್ತೀದಿಯಾ, ಈ ಪ್ರಶ್ನೆಗೆ ಉತ್ತರ ಹೇಳು..

"ಜೀವನ" "ಕಲ್ಪನೆ" "ಕತೆ"ಎಂದರೇನು..??? ಗುಂಡ ಉತ್ತರ.. ಹೇಳಿದ..

ಮೇಡಂ, ನನಗೆ "ಜೀವನ" ಎಂದರೆ ನೀವು ಕೊಟ್ಟ ಹೋಂ ವರ್ಕ್ ಮಾಡೋದು, "ಕಲ್ಪನೆ" ಎಂದರೆ ನಾನು ಹೋಂ ವರ್ಕ್ ಮಾಡದೆ ಬಂದ್ರೂ ನೀವು ನನ್ನನ್ನು ಬೈಯ್ಯೋದಿಲ್ಲ, ಹೊಡೆಯೋದಿಲ್ಲ ಅಪ್ಪ ಅಮ್ಮನನ್ನು ಕರ್ಕೊಂಡು ಬಾ ಅಂತ ಹೇಳೋದಿಲ್ಲ ಅನ್ನೋದು..

"ಕತೆ.". ಅಂದ್ರೆ.. ಇದೆಲ್ಲಾ ನಡೆದು.. ನ್ಯೂಸ್ ಚಾನಲ್‌ರವರು ಬಂದು.. ನೀವು ಹೊಡ್ಯೋದನ್ನು, ವೀಡಿಯೋ ಮಾಡಿ.. ಇದು ಪೋಷಕರನ್ನು ಬೆಚ್ಚಿಬೀಳಿಸುವ ಸುದ್ದಿ.. ಅಂತ.. ಇದ್ದಿದ್ದು, ಇಲ್ಲದ್ದು ಮಸಾಲೆ ಸೇರಿಸಿ.. ವಾರಗಟ್ಲೆ ಸೀರಿಯಲ್‌ನವರು ರಂಬರ್‌ನಂತೆ ಎಳೆದು ಧಾರಾವಾಹಿ .. ಮಾಡೋದು.. ಟಿ ಆರ್ಪಿ ಜಾಸ್ತಿ ಮಾಡುವ ಗುರಿಯಿಟ್ಟು, ವೀಕ್ಷಕರನ್ನು ಗೋಳು ಹುಯ್ಕೋಳೋದು.. ಮೇಡಂ..

ಇದನ್ನು ಕೇಳಿ ಮೇಡಂ..ತಲೆ ಮೇಲೆ ಕೈ ಹೊತ್ತು ಕುಳಿತರು..

ಮಕ್ಕಳೆಲ್ಲಾ ಹೊಟ್ಟೆ ಹಿಡಿದು ನಗುತ್ತಾ.. ಸೂಪರ್ಕಣೋ ಗುಂಡಾ, ಶಭಾಷ್ ಅಂದ್ರು.

– ಸುಮನಾ

# ಪಾತಾಳದಲ್ಲಿ ಪಾಪಯ್ಯ

(1 : ಪುಂಗನೂರು ಪಾಪಯ್ಯನ ಪಾತಾಳ ಪ್ರವೇಶ.)

"ಹಲೋ...ರೀ !.......ಮಿಸ್ಟರ್. ನಿಮ್ಮನ್ನೇ....."

"ಯಾರ್‍ನ ? ನನ್ನೇ...?"

"ಹೌದು, ಸ್ವಲ್ಪ ನಿಲ್ಲಿ. ನೀವು ಈ ಜಾಗಕ್ಕೆ ಸ್ವಲ್ಪ ಹೊಸಬರಾಗಿರೋ ಹಾಗೆ ಕಾಣುತ್ತಲ್ಲ... ವಿಚಾರಿಸೋಣ ಅಂತ...."

"ನಿಜ. ಈ ಜಾಗ ನನಗೆಷ್ಟು ಹೊಸದಾಗಿದೆಯೋ, ನಾನೂ ಈ ಜಾಗಕ್ಕೆ ಅಷ್ಟು ಹೊಸಬನೇ. ಆದರೆ ತಾವು ಯಾರು ತಿಳಿಯಲಿಲ್ಲ."

"ನನ್ನ ವಿಚಾರ ಇರಲಿ. ಪಾತಾಳದಲ್ಲಿ ನಿಮಗೇನು ಕೆಲಸ, ಸ್ವಲ್ಪ ತಿಳುಕೋಬಹುದೆ?... ಹುಬ್ಬುಗಿಬ್ಬೆಲ್ಲ ಆಮೇಲೆ ಹಾರಿಸ್ತೀರಂತೆ, ನೆಟ್ಟಗೆ ಉತ್ತರ ಕೊಡಿ ಮೊದಲು.

".....ನನ್ನ ಹೆಸರು ಪುಂಗನೂರ ಪಾಪಯ್ಯ ಅಂತ. ಕೊರವಂಜಿ ವಿಶೇಷ ಬಾತ್ಮಿದಾರನಾಗಿ ಪಾತಾಳ ಪ್ರವಾಸ ಪ್ರಾರಂಭಿಸಿದ್ದೇನೆ. ಒಂದೊಂದು ವಿಷಯವನ್ನಾಗಿ ಪರಿಶೋಧನೆ ಮಾಡಿ ಸಂಪಾದಕರಿಗೆ ವರದಿ ಮಾಡಬೇಕು, ಪ್ರತಿ ತಿಂಗಳೂ"

"ಸಂತೋಷ. ಆದರೆ ಜ್ಞಾಪಕ ಇರಲಿ. ನಿಮ್ಮ ಬಾತ್ಮಿ ಕಳಿಸುವಾಗ ನಂಬರುದಾರ್‍ರ ಕಿವೀಗೆ ಏನಾದರೂ ಬಿದ್ದಿತು. ಹುಷಾರಾಗಿರಿ."

"ನಂಬರುದಾರ್‍ರು !?"

"ಅದೇ ನೀವು ಪೊಲೀಸರು, ಸಿ. ಐ. ಡಿ. ಗಳು ಅಂತೀರಲ್ಲ ಅವರುಗಳೆಲ್ಲ."

"ಆ ಕಟ್ಟುನಿಟ್ಟುಗಳಿಗೆಲ್ಲಾ ಒಳಗಾಗಿಯೇ ನಾನು ಈ ಪ್ರವಾಸಾನ ಕೈಕೊಂಡಿರೋದು, ಏನೂ ಭಯವಿಲ್ಲ. ಅದಿರಲಿ...ತಮ್ಮ ಪರಿಚಯ ಆಗಲಿಲ್ಲ ?"

"ನನ್ನ ಕಾರ್ಡು, ವಿಳಾಸ. ಬಡವನಮೇಲೆ ದಯವಿರಲಿ, ಬರ್‍ತೇನೆ."

ಇದೇ ಪಾತಾಳಕ್ಕೆ ಕಾಲಿಟ್ಟಮೇಲೆ ನನಗಾದ ಮೊದಲ ಪರಿಚಯ. ನಾನು ಹೋಗುತ್ತಿದ್ದದ್ದು ಮಸಕು ಬೆಳಕಿನ ಇಕ್ಕಟ್ಟಾದ ಒಂದು ಓಣಿ. ಎದುರಿಗೆ ಯಾರಾದರೂ ಬಂದರೆ ಓರೆಯಾಗುವುದಕ್ಕೂ ಸ್ಥಳವಿಲ್ಲ. ನನ್ನನ್ನು ಭೇಟಿಮಾಡಿದ ಆ ಮನುಷ್ಯ ಅದಕ್ಕಿಂತ ಇಕ್ಕಟ್ಟಾದ ಒಂದು ಸೊಟ್ಟ ಸೊಟ್ಟನೆಯ ನಂದಿಗೆ ತಿರುಗಿದ. ಯಾರನ್ನೂ ಕಂಡು ಕೇಳದ ಆ ಸ್ಥಳದಲ್ಲಿ ನಾನು ಎಲ್ಲಿಗೆ ಹೋಗುವುದು, ಏನನ್ನ ತಾನೇ ರಿಪೋರ್ಟು ಮಾಡುವುದು, ಎಂಬುದು ನನಗೆ ಹೊಳೆಯಲಿಲ್ಲ. ಬೇರೆ ಮಾರ್ಗವಿಲ್ಲದೆ ಆ ಮನುಷ್ಯನನ್ನೇ ಹಿಂಬಾಲಿಸಿದೆ...

"ಕ್ಷಮಿಸಿ. ತಾವು ಹೋಗುವ ಜಾಗಕ್ಕೆ ನಾನು ಬರಬಹುದೇ, ಈಗ ?" ಅಂದೆ....

ಅವನು ಒಂದುಕ್ಷಣ ಹಿಂತೆಗೆದ. ಕೈ ಬೆಚ್ಚಗಾದಮೇಲೆ "ಪರವಾಗಿಲ್ಲ ಬನ್ನಿ. ಹಾಳಾಗಿದ್ದರೂ ಒಂದಲ್ಲ ಒಂದುದಿನ ನೀವು ನೋಡೋ ಜಾಗವೇ ಅದು" ಅಂದ.

ಅಕ್ಕಿ ಕಲ್ಲಿನ ಪೇಟೆಗಂತೆ ನಾವು ಹೋಗುತ್ತಿದ್ದದ್ದು. ಆ ಪೇಟೆಗೆ ಯಾಕೆ ಆ ಹೆಸರು ಅನ್ನುವುದನ್ನು ಹೋಗುತ್ತ ಹೋಗುತ್ತ ಅವನೇ ವಿವರಿಸಿದ.

"ಅಕ್ಕಿಕಲ್ಲಿನ ಮಂಡಿ ಅಲ್ಲಿದೆ. ಮಂಡಿ ಅಂದರೆ ಬರೀ ವ್ಯಾಪಾರ ಮಾತ್ರ ಅಲ್ಲ. ಅಕ್ಕಿಗೆ ಬೆರಸುವ ಕಲ್ಲು ತಯಾರಾಗುವ ಕಾರ್ಖಾನೆಯೂ ಅಲ್ಲೇ. ನಾನು ಆ ಕಾರ್ಖಾನೆಯಲ್ಲಿ ಒಬ್ಬ ನೌಕರ."

"ಕಲ್ಲಿಗೆ ಕಾರ್ಖಾನೆಯೇ ?" ಅಂದೆ ಕಣ್ಣು ಪಿಳಕಿಸ್ತಾ ನಾನು....

"ನೀವು ಊಟಮಾಡುವ ಅಕ್ಕಿಯಲ್ಲಿರುವ ಕಲ್ಲುಗಳನ್ನು ಗಮನಿಸಿ ನೋಡಿ. ಅವುಗಳಲ್ಲಿ ಒಂದು ಸಮತೆ ಇದೆ, ಎಲ್ಲಾ ಒಂದೇ ಹೊಳಪು, ಹೆಚ್ಚು ಕಡಿಮೆ ಒಂದೇ ಆಕಾರ, ಅಳತೆ, ಹೌದೋ ಅಲ್ಲವೋ ? ಅವುಗಳನ್ನ ಸೈಜುವಾರು ಬೇರ್ಪಡಿಸುವುದಕ್ಕೆ, ಮತ್ತು ಯಾವ ಅಕ್ಕಿಗೆ ಬೆರಕೆ ಮಾಡಬೇಕೋ, ಅದಕ್ಕೆ ತಕ್ಕ ಪಾಲಿಷ್ ಕೊಡುವುದಕ್ಕೆ, ಒಂದು ಪುಟ್ಟ ಕಾರ್ಖಾನೆ ಇದೆ. ಮಂಡಿಯ ವರ್ತಕರೇ ಕಾರ್ಖಾನೆಯನ್ನು ಸಹಕಾರಪದ್ಧತಿಯಲ್ಲಿ ನಡೆಸುತ್ತಾರಾದ್ದರಿಂದ ಕಲ್ಲಿನ ರೇಟು, ಸಪ್ಲೈ, ಎಲ್ಲರಿಗೂ ಸಮವಾಗಿರುತ್ತೆ...."

"ಕ್ಷಮಿಸಿ, ನೀವೇ ಅಂದಹಾಗೆ, ನಾನೀಜಾಗಕ್ಕೆ ಹೊಸಬ. ನೀವು ಹೇಳುವುದೆಲ್ಲ ಬೇಗ ನನ್ನ ತಲೆಗೇರುವುದಿಲ್ಲ. ಒಂದೆರಡು ಪ್ರಶ್ನೆ ಹಾಕಬಹುದಾದರೆ ಹಾಕುತ್ತೇನೆ."

"ಅಗತ್ಯವಾಗಿ"

"ನಾವು ತಿನ್ನುವ ಅನ್ನದಲ್ಲಿರುವ ಕಲ್ಲುಗಳು ಪಲ್ಲಕ್ಕೆ ಇಷ್ಟು ಅಂತ ಲೆಕ್ಕಾಚಾರವಾಗಿ ಉದ್ದೇಶಪೂರ್ವಕ ಬೆರಸಿದ್ದು ಅನ್ನಬಹುದೇ ?"

"ರೈಟ್, ಉದಾಹರಣೆಗೆ, ದಬ್ಬಣಸಾಲೆ ತೆಗೆದುಕೊಳ್ಳಿ. ಎಪ್ಪತ್ತೇಳು ಸೇರು ಅಕ್ಕಿಗೆ ಹದಿನೇಳು ಸೇರು ನೊರಜುಕಲ್ಲು, ಮೂರು ಸೇರು ಮರಳು, ಮೂರು ಸೇರು ಕಸಕಡ್ಡಿ........"

"ತಡೀರಿ. ಕಸಕಡ್ಡೀಗೂ ಕಾರ್ಖಾನೆ ಇದೆಯೆ ?"

"ಮತ್ತೆ ! ! ! ? ಅಲ್ರೀ ಪೈರಿನಲ್ಲಿ ಬೆಳೆಯುತ್ತೆ ಅಂತ ತಿಳಿದಿದ್ದೀರಾ ಅವೆಲ್ಲ ? ಹೊ ಹ್ಹೊ ಹ್ಹೋ ಹ್ಹೋ... ಹ್ಹೋ...! "

ಅವನ ಅಭಿಪ್ರಾಯದಲ್ಲಿ ಅದೊಂದು ಹಾಸ್ಯದ ಚಟಾಕಿ. ನಗು ತಡೆಯಲಾರದೆ ಉಕ್ಕಿ ಅವನು ಹೊಟ್ಟೆ ಹಿಡಿದುಕೊಂಡು ಬಿದ್ದು ಉರುಳಿದ. ಚೇತರಿಸಿಕೊಂಡೆದ್ದು ಹೇಳಿದ....

"ಅಕ್ಕಿಕಲ್ಲು ಪೇಟೇಲೇ ಅದೂ ತಯಾರಾಗುತ್ತೆ ......ನಾ ಹೇಳಿದ ಹಾಗೆ ಈ ಎಕ್ಸ್ಟ್ರಾ ಸಾಮಗ್ರಿಗಳೆಲ್ಲಾ ಅಳತೆಗೆ ಸರಿಯಾಗಿ ಒಂದೊಂದು ಪಲ್ಲ ಅಕ್ಕೀಲೂ ಇರುತ್ತೆ.

"ಇವನ್ನ ನೀವೇ ಬೆರಸಬೇಕೋ, ಇಲ್ಲ ನಮ್ಮ ಅಕ್ಕಿ ವರ್ತಕರು ಬೆರಸಿಕೋ ಬೇಕೋ ?"

"ಹ್ಯಾಗಾದರೂ ಸರಿಯೇ. ಮೂಟೆಗಳನ್ನ ರವಾನಿಸಿದರೆ ನಾವೇ ಬೆರಸಿ, ಕೊಟ್ಟುಬಿಡೋದು. ಹಾಗೂ, ನಮ್ಮ ಇಪತ್ಮೂರು ಸೇರಿನ ಮಿಶ್ರಣವನ್ನೂ ಇಲ್ಲಿಗೇ ಬಂದು ಚೀಲಗಳಲ್ಲಿ ತುಂಬಿಸಿಕೊಂಡು ಹೋಗುವವರೂ ಇದಾರೆ ಜಿಪುಣರು; ಕೂಲಿ ಉಳಿಯಲಿ ಅನ್ನುವವರು !"

"ಸರಿ. ಇವಕ್ಕೆ ರೇಟು ಹ್ಯಾಗೆ ?"

"ರೇಟು ಬೇರೆ ಬೇರೆ ಇರುತ್ತದೆ. ಬದಲಾಯಿಸುತ್ತಲೂ ಇರುತ್ತೆ. ಈಗ ದಬ್ಬಣಸಾಲೆಯ ಬೆರಿಕೆ ಮೊನ್ನೆ ಮೊನ್ನೆವರೆಗೆ ರೂಪಾಯಿಗೆ ಹದಿನಾಲ್ಕು ಇದ್ದದ್ದು, ಇವತ್ತು ಬೆಲೆ ಬಿದ್ದು ಬಿಟ್ಟಿದೆ. ಹದಿನೇಳುಸೇರು ಇವತ್ತಿನ ರೇಟು."

ನನ್ನ ಗಡಿಯಾರದಲ್ಲಿ ಗಂಟೆ ಎಂಟೂವರೆ ಆಗಿತ್ತು. ಕತ್ತಲೆ ಮೂಡಿ ನಕ್ಷತ್ರಗಳ ಬೆಳಕಿನಲ್ಲಿ ದಾರಿಕಾಣುತ್ತ ಹೋಗಬೇಕಾಗಿತ್ತು.

"ಕತ್ತಲೆ ಆಗ್ಹೋಯಿತಲ್ಲ. ಬೆಳಗ್ಗೆ ನೋಡಿದರಾಗುತ್ತೆ. ನಿಮ್ಮ ಕೆಲಸವನ್ನ" ಅಂದೆ.

ಮತ್ತೆ ಆ ಪಾತಾಳವಾಸಿ ಘೊಳ್ಳೆಂದು ಬಿದ್ದು ಬಿದ್ದು ನಗಲಾರಂಭಿಸಿದ.

"ಅಲ್ರೀ ! ಇಲ್ಲಿಯ ವರ್ಕಿಂಗ್ ಅವರ್ಸ್ ರಾತ್ರಿ ಹತ್ತರಿಂದ ಬೆಳಗಿನ ಜಾವ ಮೂರರವರೆಗೆ. ಜ್ಞಾಪಕ ಇರಲಿ. ಅಂತೂ ಒಳ್ಳೆ ಬಾತ್ಮೀದಾರರು ನೀವು.... ಹೊ ಹ್ಹೊ ಹ್ಹೋ"

ಅವನ ಹುಚ್ಚು ನಗೆ ಅಲೆಯಲೆಯಾಗಿ ಏಳುತ್ತ ಆ ಓಣಿಯನ್ನೆಲ್ಲ ತುಂಬಿ ಮರುಧ್ವನಿಕೊಟ್ಟಿತು.

●

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



" ಬಿಲ್ ಕಳಿಸಿಬಿಡಿ ಸ್ವಾಮಿ ಇದಕ್ಕೆಲ್ಲ.....ಕೊಟ್ಟು ಬಿಡ್ತೀನಿ "
" ಬಿಲ್ಲೇ , ಬೇಡಿ, ಇನ್ನೂ ಸ್ವಲ್ಪ ಶಕ್ತಿ ಬರಲಿ , ಆಮೇಲೆ ಬಿಲ್ ನೋಡಿವಿರಂತೆ"

# ದಾಂಪತ್ಯ! ಗೀತಾ

**ಗಣೇಶ ಹೆಗ್ಗಡೆ**

ಆ ರಾತ್ರೆ ಟಿ.ವಿ.ಯಲ್ಲಿ ಅಂಬಾನಿ ಮಗನ ವೈಭವದ ಮದುವೆಯನ್ನು ನಿಬ್ಬೆರಗಾಗಿ ವೀಕ್ಷಿಸುತ್ತಾ ಕುಳಿತಿದ್ದ 'ಪದ್ದಿ' ಇದ್ದಕ್ಕಿದ್ದಂತೆ ನನ್ನತ್ತ ತಿರುಗಿ,

"ಶ್ರೀ.....ಅಣ್ಣಮ್ಮನ ಛತ್ರದಲ್ಲಾದ ನಮ್ಮ ಮದುವೆ ನೆನಪಿದೆಯೇನ್ರಿ?" ಎಂದು ಕೇಳಿದಳು. "ಅದನ್ನು ಈ ಜೀವ (ಅವ) ಮಾನದಲ್ಲಿ ಮರೆಯೋಕ್ಕೆ ಆಗುತ್ಯೆ? ಧೋ ಎಂದು ಸುರಿದ ಮಳೆ ಸಾಲದು ಅಂತ ಅಭಾಸಗಳ ಸುರಿಮಳೆ ಬ್ಯಾರೆ. ಈಗ ಯಾಕೆ ಜ್ಞಾಪಿಸಿದ್ದು? ಎಂದು ಛೇಡಿಸಿದೆ.

"ಆಗ ಗುಂಡು ಕಲ್ಲಿನಂತಿದ್ದವರು ಈಗ ಹ್ಯಾಗಾಗ್ಲಿಟ್ರಿ ನೋಡಿ"

"ಹ್ಯಾಗಾದೆ?"

"ಈಗ ಚೂಪುಗಲ್ಲು ತರಹ ಇದ್ದೀರಾ, ಪ್ರತಿ ತಿಂಗಳು ಒಂದೊಂದು ಕೆ. ಜಿ. ಡೌನ್ ಆಗ್ತಾಯಿದ್ದೀರಿ. ನನ್ಗ ಭಯವಾಗುತ್ತೆ. ಮೊನ್ನೆ ನೀವು ವರಾಂಡದಲ್ಲಿ ಕುಳತಿದ್ದಾಗ ಬಂದಿದ್ದಳಲ್ಲ ನನ್ನ ಗೆಳತಿ ಸುಮಾ "ಇವ್ಯಾರೆ ನಿಮ್ಮೆಜಮಾನರ ತರಹ ಇದ್ದಾರಲ್ಲ," ಎಂದು ಗುಟ್ಟಾಗಿ ಕೇಳಿದಳು.

"ಅವಳ ಕಣ್ಣಿಗೆ ಪೊರೆ ಬಿದ್ದಿದ್ದೇಕು. ನನ್ನ ತಮ್ಮ ಕಣ್ಣಿನ ಡಾಕ್ಟರಿಗೆ ತೋರಿಸೋಕ್ಕೆ ಹೇಳು."

"ಶ್ರೀ...ಸಿಟ್ಟಾಗಬ್ಯಾಡಿ...ಮಾತೆತ್ತಿದರೆ ಮೂಗಿನ ತುದೀಲೆ ಕೋಪ. ನಾಳೆ ನಮ್ಮ ಮನೆ ಡಾಕ್ಟರು ಗುಳಿಗೇಶ್ವರ್ ಹತ್ರ ಅಪಾಯಿಂಟುಮೆಂಟು ತಗೋತೀನಿ" ಎನ್ನುತ್ತಾ ಟಿ. ವಿ. ಆಫ್ ಮಾಡಿದಳು. ನನಗೂ ಕೊಂಚ ದಿಗಿಲಾಗಿ, ರೂಮಿನಲ್ಲಿದ್ದ ನಿಲುಗನ್ನಡಿಯ ಮುಂದೆ ನಿಂತೆ. ನನಗೂ ಇವರನ್ನೆಲ್ಲೋ ನೋಡಿದ್ದೇನಲ್ಲಾ ಎಂಬ ಡೌಟಾಗಿ ಬೆಚ್ಚಿಬಿದ್ದೆ.

ಮಾರನೆಯ ದಿನ ಬೆಳಿಗ್ಗೆ ಸಮಯಕ್ಕೆ ಸರಿಯಾಗಿ ಡಾ. ಗುಳಿಗೇಶ್ವರ್ ಕ್ಲಿನಿಕ್ಕಿನಲ್ಲಿ ಹಾಜರಿದ್ದೆವು. ನನ್ನ ವೇಯ್ಟ್ ಚೆಕ್ ಮಾಡಿದ ರಿಸೆಷನಿಸ್ಟ್ ಹುಡುಗಿ, 'ಎಷ್ಟು ಬರೀಲಿ ಸಾರ್?' ಎಂದನುಮಾನದಿಂದ ಕೇಳಿದಳು.

"ಇದೇನಮ್ಮ ನಿನ್ನ ಆಡಸ್ವೈಂಟು? ಇದ್ದದ್ದು ಇದ್ದಾಗೆ ಬಯ್ಯೋ. ಇದು ಇವರ ಲೈಫ್ ಅಂಡ್ ಡೆತ್ ಕೊಶ್ಚನ್ನು" ಎಂದು ಹೆದರಿಸಿದಳು ಪದ್ದಿ. ಹೀಗಾದ ಎರಡು ನಿಮಿಷದಲ್ಲಿ ಡಾಕ್ಟರನ್ನು ನೋಡಲು ನಮಗೆ ಪರ್ಮಿಷನ್ ಸಿಕ್ಕಿತ್ತು. ಡಾಕ್ಟರ್‌ಗೆ ಮಾತನಾಡಲು ಛಾನ್ಸೇ ಕೊಡದ ಪದ್ದಿ ದಿನೇ ದಿನೆ ನಾನು ಕೃಶವಾಗುತ್ತಿರುವ ಬಗ್ಗೆ ದೀರ್ಘ ಭಾಷಣವನ್ನೇ ಮಾಡಿ, ಕರವಸ್ತ್ರದಿಂದ ಮುಖವರೆಸಿಕೊಂಡಳು. ಕೊಂಚವೂ ವಿಚಲಿತರಾಗದ ಡಾಕ್ಟರು,

"ನೋಡೀಮ್ಮ, ಮೇಲುನೋಟಕ್ಕೆ ಗಾಬರಿಯಾಗುವಂಥಹ ಪ್ರಮೇಯವೇನೂ ಇಲ್ಲ. ಏಜಿಂಗ್ ಪ್ರೋಸೆಸ್ಸಿನಲ್ಲಿ ಕೆಲವರಿಗೆ ಹೀಗಾಗುವುದು ಸಹಜ. ನಾನಾ ಕಾರಣಕ್ಕೆ ದೇಹದಲ್ಲಿ ಪ್ರೊಟೀನು ಲಾಸ್ ಆಗತ್ತೆ. ಅಂಥಹ ಸಮಯದಲ್ಲಿ ದೇಹದಲ್ಲಿ ಶೇಖರಿಸಿರುವ ಕೊಬ್ಬಿನಿಂದ ಪ್ರೊಟೀನು ಮೇಕಪ್ ಮಾಡಿಕೊಳ್ಳುತ್ತದೆ. ಹೀಗಾಗಿ ದೇಹದ ಕೊಬ್ಬೆಲ್ಲಾ ಕರಗಿ ಮನುಷ್ಯ ಕೃಷನಾಗುತ್ತಾನೆ. ಆದರೂ ಬೇರೆ ಖಾಯಿಲೆಗಳನ್ನು ರೂಲ್‌ಓಟ್ ಮಾಡಲು ಕೆಲವೊಂದು ಟೆಸ್ಟುಗಳನ್ನು ಬರೆದು ಕೊಡ್ತೀನಿ, ಮುಂದಿನ ತಿಂಗಳು ಬರುವಾಗ ರಿಪೋರ್ಟ್ ತನ್ನಿ" ಎಂದರು.

"ದಿಟ ಡಾಕ್ಟರ್, ಈ ಹಿಂದೆ ಎಲ್ಲೂ ಇದ್ರನ್ನ ಆಡ್ಕೊತ್ತಿದ್ರು, ಸಿಕ್ಕಾಪಟ್ಟೆ ಕೊಬ್ಬು ಅಂತ. ಅಂದ್ದಾಗೆ ಇದಕ್ಕೆ ರೆಮಿಡಿಯೇನು ಡಾಕ್ಟ?"




"ಕೊಲೆಸ್ಟ್ರಾಲು ಹೆಚ್ಚಿಸುವ ಆಂಯ್ಕೆ ಫುಡ್ಡುಗಳನ್ನು ಆದಷ್ಟು ಅವಾಯ್ಡ್ ಮಾಡಬೇಕು, ಪ್ರೋಟೀನು ಸಪ್ಲಿಮೆಂಟು ಇರುವ ಬೇಳೆಕಾಳು, ಮೊಳಕೆಕಾಳು, ಕೋಸಂಬ್ರಿ, ಹಸಿರು ತರಕಾರಿ, ಹಣ್ಣುಗ-ಳನ್ನು ಯಥೇಚ್ಛವಾಗಿ ಸೇವಿಸ್ಬೇಕು. ಹಾಂ.... ಇದರ ಪಟ್ಟಿಗೆ ಹೆಸರು ಬ್ಯಾಳೆ ಪಾಯಿಸನೂ ಸೇರಿ-ಸ್ಬಹುದು" ಎಂದರು ಡಾ ಗುಳಿಗೇಶ್ವರ್, ಪಾಯಿಸ ಎಂದೊಡನೆಯೆ ನನ್ನ ಕಿವಿ ನೆಟ್ಟಗಾಗಿ, ಕೃತಜ್ಞತಾ ಭಾವದಿಂದ ಅವರಿಗೆ ಕೈಮುಗಿದೆ. ಪದ್ದಿಯೂ ಕೈ ಜೋಡಿಸಿದಳು. ನಮ್ಮ ಬಿಹೇವಿಯರ್‌ನಿಂದ ಉತ್ತೇಜಿತರಾದ ಡಾ. ಗುಳಿಗೇಶ್ವರ್.

"ನೋಡೀಮ್ಮಾ ನನ್ನನ್ನೇ ಲಿವಿಂಗ್ ಎಕ್ಸಾಂಪಲ್ಲು ಅಂತ ನೀವು ಅನ್ಕೊಬಹುದು. ಹ್ಯಾಗೆ ಬಾಡಿ ಮೇಂಟೇನು ಮಾಡಿದ್ದೀನಿ ನೋಡಿ. ಒಂದು ದಿನವೂ ವ್ಯಾಯಾಮ ತಪ್ಪಿಸಿಲ್ಲ. ಎಣ್ಣೆ, ಜಿಡ್ಡಿನ ಪದಾರ್ಥಗಳನ್ನೂ ಹತ್ತಿರಕ್ಕೂ ಸೇರಿಸಿದವನಲ್ಲ. ಬಿ.ಪಿ. ಶುಗರು ಬಾರ್ಡರಿನಲ್ಲಿದ್ರೂ ಗಡಿದಾಟಲು ಎಂದೂ ಬಿಟ್ಟವನೇ ಅಲ್ಲಾ, ಹೋಪ್ ಯು ಆರ್ ಫಾಲೊಯಿಂಗ್? ಎಂದು ಜಂಭಕೊಚ್ಚಿಕೊಂಡರು ಡಾ. ಗುಳಿಗೇಶ್ವರ್. "ಖಂಡಿತಾ ಸರ್, ವಿವಿಲ್ ಫಾಲೊ ಟು ದಿಕೋರ್" ಎಂದೊಕ್ಕೊರಲಿನಲಿ ಪ್ರಾಮಿಸ್ ಮಾಡಿ, ನಾನು ಪದ್ದಿ ಆಚೆಗೆ ಬಂದೆವು," ದಾರಿಯಲ್ಲಿ 'ಪದ್ದಿ' "ಶ್ರೀ..ಡಾಕ್ಟರ ಕುತ್ತಿಗೆಯಲ್ಲಿದ್ದ ಬೆರಳು ಗಾತ್ರದ ಚಿನ್ನದ ಸರ ನೋಡಿದ್ರಾ? ಅದರಲ್ಲಿ ಎರಡು ಜತೆ ಬಳೆ ಮಾಡಿಸ್ಕೊಬಹುದಿತ್ತು" ಎಂದು ಸಂಕಟಪಟ್ಟುಕೊಂಡಳು. ಚೀರ್ ಬೇಡ ಪದ್ದಿ ಫೀಸ್ ಚೀರ್ ಅಪ್! ಎಂದು ಸಮಾಧಾನಿಸಿದೆ.

ಹೀಗಾಗಿ, ಒಂದು ವಾರವಷ್ಟೇ ಕಳೆದಿತ್ತು. ಆ ರವಿವಾರ ವೈದ್ಯರ ಅಣತಿಯಂತಿ ವಾಕ್ ಮಾಡಲು ನಿರ್ಧರಿಸಿ, ಬೆಳಿಗ್ಗೆ ಮನೆಯಿಂದ ಹೊರಟೆವು. ದಾರಿಯಲ್ಲಿ 'ಮೈಲಾರಿ ಹೋಟೆಲಿನ ಬೋರ್ಡು ಕಂಡು ಕಾಲುಗಳೇ ಚಲಿಸದಂತಾದವು ನಮಗೆ. ಹೇಳಿ ಕೇಳಿ ಬೆಣ್ಣೆ ದೋಸೆ, ಕೇಸರಿಬಾತಿಗೆ ಸಿಕ್ಕಾಪಟ್ಟೆ ಫೇಮಸ್ಸು, ಹೊಟೇಲು, 'ಇದೊಂದ್ಬಲ ತಿಂದ್ರು ಏನಾಗುಲ್ಲ' ಎಂದು ಸ್ವಗತ ಮಾಡಿಕೊಂಡು ಪ್ರವೇಶ ಮಾಡಿದೆವು. ಅದು ಸೆಲ್ಫ್ ಸರ್ವೀಸು ಪದ್ಧತಿಯ ಹೋಟೆಲು, ಎರಡು ಜೋಡಿ ಮಸಾಸೆ, ಸಪರೇಟು ಬೆಣ್ಣೆ, ಕೇಸರಿಬಾತಿಗೆ ಟೋಕನ್ ತೆಗೆದುಕೊಂಡ 'ಪದ್ದಿ' ಸರ್ವಿಂಗು ಕೌಂಟರ್ ಬಳಿ ಹೋದವಳೆ, ಬೆದರಿದ ಹುಲ್ಲೆಯಂತೆ ಹೆದರಿ ಓಡಿಬಂದು, ನನ್ನ ಕೈ ಜಗ್ಗಿ ದರದರನೆ ಹೋಟೆಲಿನಾಚೆ ಕರೆದುಕೊಂಡು ಹೋದಳು. ರಾಮೇಶ್ವರಂ ಕೆಫೆಯ ಘಟನೆ ಇನ್ನೂ ಮಾಸಿಲ್ಲದ ನನಗೆ ಎದೆ ಬಡಿತ ತೀವ್ರವಾಯಿತು.


"ರೀ..ನಮ್ಮ ಅದೃಷ್ಟ ಚೆನ್ನಾಗಿತ್ತು. ಅವ್ರ ಕಣ್ಣಿಗೆ ಕಾಣಿಸ್ಕೊಳ್ಳಲಿಲ್ಲ'

"ಯಾರೇ? ಟೆರರಿಸ್ಟುಗಳೇನೆ" "ಥತ್ ಅದಕ್ಕಿಂತ ಕೇಡು..ಅಲ್ಲೇ ಬಲ ತುದಿಯಲ್ಲಿ ಜೋಡಿ ಮಸಾಲೆ, ಎಕ್ಸ್‌ಟ್ರಾ ಬೆಣ್ಣೆ, ಕೇಸರಿಬಾತಿನ ತಟ್ಟೆ ಇಡ್ಕೊಂಡು ತಿನ್ತಾ ಇದ್ರು ಡಾ. ಗುಳಿಗೇಶ್ವರ್ ಸಧ್ಯ ಬಚಾವಾದೆವು," ನನ್ಗೊಂದೂ ಅರ್ಥವಾಗ್ತಿಲ್ಲ ಕಣೆ, ನಿನ್ನನ್ನು ನೋಡಿ ಡಾಕ್ಟರೇ ಓಡಿ ಹೋಗೇಕಿತ್ತು. ಬದಲಿಗೆ ನೀನ್ಯಾಕೆ ಓಡಿಬಂದೆ? ಪದ್ದಿ ನಿರುತ್ತರಳಾದಳು.

ಅಷ್ಟು ದೂರ ನಡೆದು ಹೋದ ನಮಗೆ ಹೊಟೇಲಿನ ಟೋಕನ್ ನಮ್ಮಲ್ಲೇ ಉಳಿದ್ದುದು ನೆನಪಾಯಿತು. "ವರಿಬ್ಯಾಡ, ಮನೆಗೆ ಪಾರ್ಸೆಲ್ಲು ತೆಗೆದು ಕೊಂಡು ಹೋದರಾಯಿತು" ಎಂದಳು ಪದ್ದಿ.

ಡಾ. ಗುಳಿಗೇಶ್ವರ್ ಹೊಟೇಲು ಆಚೆ ಬರುವುದನ್ನೇ ಬಕ ಪಕ್ಷಿಯಂತೆ ಕಾಯುತ್ತಾ ನಾನು ಮತ್ತು ಪದ್ದಿ ಎದುರು ಮರದ ಬುಡದ ಹಿಂದೆ ಅವಿತುಕೊಂಡು ನಿಂತೆವು.

●



# ನಿಶ್ಯಬ್ದ ಸಂಗೀತ

**ಡಾ॥ ಎಚ್.ಕೆ. ನಂಜುಂಡಸ್ವಾಮಿ**

ನನಗೂ ಸಂಗೀತಕ್ಕೂ ದೂರವೆನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಚಿಕ್ಕಂದಿನಿಂದ "ಇವನ ಧ್ವನಿ ಚೆನ್ನಾಗಿಲ್ಲ. ಇವನಿಗೆ ಸಂಗೀತ ಹೇಳಿಸಬೇಡಿ. ಇವನ ಧ್ವನಿ ಯಾಕೆ ಹೀಗೆ?" ಇತ್ಯಾದಿ ವ್ಯಾಖ್ಯಾನಗಳನ್ನು ಜನಗಳಿಂದ ಕೇಳಿ ಕೇಳಿ ನನಗೆ ಸಂಗೀತದ ಬಗ್ಗೆ ಉತ್ಸಾಹವೇ ಇರಲಿಲ್ಲ/ 1961 ರಲ್ಲಿ ನಾನು ಅಮೆರಿಕಕ್ಕೆ ಬಂದ ಮೇಲೆ ಇದು ಸ್ವಲ್ಪ ಬದಲಾಗತೊಡಗಿತು. ಅಂದರೆ ನನ್ನ ಸಂಗೀತ ಜ್ಞಾನ ವೃದ್ಧಿಯಾಗತೊಡಗಿತು ಎಂದಲ್ಲ, ಸಂಗೀತದ ಮೇಲೆ ನನಗಿದ್ದ ಅಸಹನೆ ಕಮ್ಮಿಯಾಗತೊಡಗಿತು ಎನ್ನಬಹುದು.

ಅಮೇರಿಕಕ್ಕೆ ಬಂದ ಮೇಲೆ ಮೊಟ್ಟಮೊದಲು ನನ್ನ ಗಮನವನ್ನು ಸೆಳೆದದ್ದು ಸುಪ್ರಸಿದ್ಧ ಗಾಯಕ ಹ್ಯಾರಿ ಬೆಲಫಾಂಟೆ. ಆತನ, ವೆಸ್ಟ್ ಇಂಡೀಸನ ಕಲಿಪ್ಸೋ ಸಂಪ್ರದಾಯದ ಲಘುಗೀತೆಗಳು ದೇಶದಲ್ಲೆಲ್ಲಾ ಅತ್ಯಂತ ಜನಪ್ರಿಯವಾಗಿದ್ದವು. ಅವನ ಹಾಡುಗಳು ಹಾಗೂ ದಕ್ಷಿಣ ಅಮೆರಿಕದ ಗಾಯಕರ ಲ್ಯಾಟಿನ್ ಸಂಪ್ರದಾಯದ ಹಾಡುಗಳು ನನಗೆ ಮೆಚ್ಚಿಗೆಯಾದವು. ಅವುಗಳನ್ನು ಕಲಿಯಬೇಕೆಂಬ ಆಸೆಯೂ ಆಯಿತು! ಬೆಲೆಫಾಂಟೆಯ ಹಾಗೂ ಲ್ಯಾಟಿನ್ ಸಂಗೀತಗಾರರ ಕೆಲವರ ರೆಕಾರ್ಡುಗಳನ್ನು ಕೊಂಡೆ, ಹತ್ತಾರು ಸಲ ಕೇಳಿದೆ. ಆಮೇಲೆ ಬಾಗಿಲು ಮುಚ್ಚಿ ಕಿವಿಗೆ ಹತ್ತಿ ಇಟ್ಟು ಆ ಹಾಡುಗಳನ್ನು ಅಭ್ಯಾಸ ಮಾಡಲು ಪ್ರಾರಂಭಿಸಿದೆ. ಒಂದೆರಡು ವರುಷ ಹೀಗೆ ಅಭ್ಯಾಸ ಮಾಡಿದ ಮೇಲೆ ಅದನ್ನು ಟೇಪ್ ರೆಕಾರ್ಡು ಮಾಡಿ ಕೇಳಿದೆ. ಮೊದಮೊದಲು ಹೊಟ್ಟೆಯಲ್ಲಿ ಸ್ವಲ್ಪ ಕಸಿವಿಸಿಯಾದರೂ ಕಾಲ ಹೋಗುತ್ತ ಪರವಾಗಿಲ್ಲ(!) ವೆನಿಸಿತು. ಆದರೆ ಇತರರ ಮುಂದೆ ಹೇಳುವ ಧೈರ್ಯವಿರಲಿಲ್ಲ. ನಾನೇ ಹೇಳಿಕೊಂಡು ಆನಂದಿಸುತ್ತಿದ್ದೆ.

ಮೆಡಿಕಲ್ ಕಾಲೇಜಿನಲ್ಲಿ ನನ್ನ ಸಹಪಾಠಿಯಾಗಿದ್ದ ಲೀಲಳೊಡನೆ 1964 ರಲ್ಲಿ ಅಮೇರಿಕದಲ್ಲಿ ನನ್ನ ಮದುವೆಯಾಯಿತು. ನಂತರ ಮಧುಚಂದ್ರ ನಿಮಿತ್ತ ನಯಾಗರಾ, ಅಡಿರೋಂಡಾಕ್ಸ್, ಪೊಕನೋಸ್ ಮುಂತಾದ ಜನಪ್ರಿಯ ಜಾಗಗಳಿಗೆ ಹೋಗಿ ವಾಪಸ್ಸು ಪಿಟ್ಟಬರ್ಗಿನ ಕಡೆಗೆ ಬರುತ್ತಿದ್ದೆವು. ಸುತ್ತ ರಮ್ಯವಾದ ದೃಶ್ಯ. ಜನಸಂದಣಿ ಇಲ್ಲದ ನೇರವಾದ ರಸ್ತೆ. ಸೂರ್ಯಾಸ್ತದ ಸಮಯ: ಡ್ರೈವ್ ಮಾಡುತ್ತ ಪಕ್ಕದಲ್ಲಿ ನೋಡಿದೆ. ಲೀಲ ನಿದ್ದೆ ಮಾಡುತ್ತಿದ್ದಳು. ಇದೀಗ ನನ್ನ ಕಲಿಪ್ಸೊ ಸಂಗೀತದ ಪಾಂಡಿತ್ಯವನ್ನು ಪ್ರದರ್ಶಿಸಲು ತಕ್ಕ ಸಮಯ ಎನ್ನಿಸಿತು. ನನ್ನ ಸಂಗೀತವನ್ನು ಕೇಳಿ ಲೀಲನ ಪ್ರತಿಕ್ರಿಯೆ ಏನಾಗಬಹುದೆಂದು ಸ್ವಲ್ಪ ಯೋಚಿಸಿದೆ. ಗೊಳ್ಳೆಂದು ನಗಬಹುದು, ನಿದ್ದೆಯಿಂದ ಎಬ್ಬಿಸಿದೆನಲ್ಲಾ ಎಂದು ಕೋಪ ಮಾಡಿಕೊಳ್ಳಬಹುದು, ಅರೆ ಇದು ಯಾವಾಗ ಕಲಿತಿರಿ? ಎಂದು ಆಶ್ಚರ್ಯ ವ್ಯಕ್ತಪಡಿಸಬಹುದು, ಅಥವಾ ಚೆನ್ನಾಗಿ ಹೇಳುತ್ತೀರಿ ಎಂದು ಚಪ್ಪಾಳೆ ಹೊಡೆಯಬಹುದು....

ಸರಿ ನೋಡೇ ಬಿಡೋಣ ಎಂದು ಹಾಡನ್ನು ಪ್ರಾರಂಭಿಸಿದೆ. Down the way where the nights are gay, and the sun shines daily on the mountain top.... ಮೊದಲು ಲೀಲ ಬೆಚ್ಚಿದಳು. ಆಮೇಲೆ ಒಂದೇ ಕಣ್ಣನ್ನು ಬಿಟ್ಟು ನನ್ನ ಕಡೆ ನೋಡಿದಳು. ಹೇಳುತ್ತಿದ್ದವನು ನಾನು ಎಂದು ಗೊತ್ತಾದ ಮೇಲೆ, ಯಾವಾಗಿನಿಂದ ಈ ದುರಭ್ಯಾಸ ಶುರುವಾಯಿತು! ಮದುವೆಗೆ ಮುಂಚೆಯೇ ಈ ವಿಷಯ ಗೊತ್ತಾಗಲಿಲ್ಲವಲ್ಲ

ಎನ್ನುವಂತೆ ಮುಖಭಾವ ಬದಲಾಯಿತು. ಪುನಃ ಅವಳು ಎರಡು ಕಣ್ಣನ್ನೂ ಮುಚ್ಚಿದಳು. ಒಂದು ನಿಮಿಷ ಅಲ್ಲಾಡದೆ ಕೂತಿದ್ದಳು. ಆಮೇಲೆ ಅರ್ಧ ಕಣ್ಣು ತೆರೆದಳು, ನಾನು ಏನೂ ಗೊತ್ತಿಲ್ಲದವನಂತೆ ನನ್ನ ಸಂಗೀತವನ್ನು ಮುಂದುವರೆಸಿದೆ. 'I Took a Trip on a Sailing ship...' ಇಷ್ಟರಲ್ಲೇ ಅವಳ ಪ್ರತಿಕ್ರಿಯೆ ವ್ಯಕ್ತವಾಗುತ್ತದೆಂದು ಗೊತ್ತು. ಅದು ಏನಿರಬಹುದೆಂದು ನನ್ನ ಕುತೂಹಲ.

ಲೀಲ ಪೂರ್ತಿ ಕಣ್ಣು ತೆರೆದಳು. ನನ್ನನ್ನು ನೋಡಿ ಪರವಾಗಿಲ್ಲ ಚೆನ್ನಾಗಿ ಹೇಳುತ್ತೀರಿ. ಆದರೆ ನಿಮಗೇ ಗೊತ್ತಿರುವಂತೆ ನೀವು ಡ್ರೈವ್ ಮಾಡುವಾಗ ನಾನು ನಿದ್ದೆ ಮಾಡುವುದು ಅಭ್ಯಾಸ. ನೀವು ಹೇಳುತ್ತಿರುವ ಧ್ವನಿ ತುಂಬ ಜೋರು. ಎಚ್ಚರವಾಗಿಬಿಡುತ್ತೆ! ಆದ್ದರಿಂದ ನೀವು ಸ್ವಲ್ಪ ಧ್ವನಿ ಕೆಳಗೆ ಮಾಡುತ್ತೀರಾ. ಕೇಳುತ್ತಾ ಮಲಗಿ ಬಿಡುತ್ತೇನೆ ಎಂದಳು. ನನಗೆ ಬಹಳ ಸಂತೋಷ, ನನ್ನ ಹೆಂಡತಿ ಇಷ್ಟು ಉತ್ತೇಜನ ಕೊಟ್ಟಳಲ್ಲಾ ಎಂದು ಧ್ವನಿಯನ್ನು ಕಡಿಮೆ ಮಾಡಿ ಹಾಡನ್ನು ಮುಂದುವರೆಸಿದೆ.



"Down the way where the nignts are gay"

"ದಯವಿಟ್ಟು ಇನ್ನೂ ಸ್ವಲ್ಪ ಕೆಳಗೆ ಇಳಿಸಿ'' ಎಂದಳು.

"Down the way where the nignts are gay"

"ಇನ್ನೂ ಕೆಳಗೆ" ಎಂದು ಕೈ ಸನ್ನೆ ಮಾಡಿ ತೋರಿಸಿದಳು.

"Down the way there the nignts are gay"

"ಇನ್ನೂ ಸ್ವಲ್ಪ ಕೆಳಗೆ ಮಾಡಿಬಿಡಿ.''

"Down the way where the nignts are gay"

"ಇನ್ನೊಂದು ಸ್ವಲ್ಪ ಇಳಿಸಿದರೆ ವಾಸಿ"

"..............................................................."

"ಆಹಾ ಈಗ ಸರಿಯಾಗಿದೆ. ನೀವು ಈ ಧ್ವನಿಯಲ್ಲಿ ಯಾವಾಗ ಬೇಕಾದರೂ ಹಾಡು ಹೇಳಿ. ನಾನು ಕೇಳುತ್ತಾ(?) ಮಲಗಿಬಿಡುತ್ತೇನೆ" ಎಂದಳು.

ಆ ದಿನ ನಿಶ್ಯಬ್ದ ಸಂಗೀತದ ಸೃಷ್ಟಿಯಾಯಿತು. ಆ ದಿನದ ನಂತರ ಯಾವಾಗ ಕಾರಿನಲ್ಲಿ ಕೂತರೂ ನಾನು ನಿಶ್ಯಬ್ದ ಸಂಗೀತವನ್ನು ಅನುಭವಿಸಿಕೊಂಡು ಹಾವಭಾವಗಳೊಡನೆ ಹೇಳುತ್ತೇನೆ (ಆದರೆ ತಾಳ ಹಾಕಕೂಡದು ಎಂದು ಹೇಳಿಬಿಟ್ಟಿದ್ದಾಳೆ) ಪಕ್ಕದಲ್ಲಿ ಲೀಲ ಕೇಳುತ್ತಾ (?) ನಿದ್ದೆ ಮಾಡುತ್ತಾಳೆ. ಎಷ್ಟೋ ಸಲ ಅಕ್ಕಪಕ್ಕದಲ್ಲಿ ಹೋಗುತ್ತಿರುವ ಕಾರಿನವರು ನನ್ನ ಹಾವಭಾವಗಳನ್ನು ನೋಡಿ "ಎಲಾ ಎಷ್ಟು ಚೆನ್ನಾಗಿ ಹೇಳುತ್ತಿದ್ದಾನೆ. ಪಕ್ಕದಲ್ಲಿ ಇವನ ಹೆಂಡತಿಗೆ ಇವನ ಹಾಡಿನಿಂದ ನಿದ್ದೆ ಬಂದು ಬಿಟ್ಟಿದೆಯಲ್ಲಾ, ನಾವು ಕೇಳೋಣ" ಎಂದು ಕಿಟಕಿಯ ಗಾಜನ್ನು ಕೆಳಗೆ ಮಾಡಿ ಕಿವಿಯನ್ನು ಆಚೆಗೆ ಹಾಕಿ, ಹಾಡು ಕೇಳಿಸದೇ ನಿರಾಶರಾದದ್ದುಂಟು!

ಒಮ್ಮೆ ಲೀಲಳನ್ನು ಕೇಳಿದೆ "ನೀನಿಲ್ಲದೆ ಇರುವಾಗ ನಾನು ಸ್ವಲ್ಪ ಜೋರಾಗಿ ಹಾಡಬಹುದೇ ?"

"ಬೇಡ, ಅದೇ ಅಭ್ಯಾಸವಾಗಿಬಿಟ್ಟರೆ ಕಷ್ಟ" ಎಂದಳು.

ಇಪ್ಪತ್ತು ವರುಷ ಈ ರೀತಿ ಕಲಿಪ್ಸೊ ಹಾಡುಗಳನ್ನು ನಿಶ್ಯಬ್ದವಾಗಿ ಹೇಳಿದುದನ್ನು ಕೇಳಿದ ಲೀಲ ನನ್ನ ಈ ಸಂಗೀತದಿಂದ ತನ್ನ ನಿದ್ದೆಗೂ ಸಾರ್ವಜನಿಕರ ಆರೋಗ್ಯಕ್ಕೂ ಯಾವ ಕುಂದೂ ಇಲ್ಲವೆಂದು ನಿರ್ಧರಿಸಿ, "ಇನ್ನು ಮೇಲೆ ಬೇಕಾದರೆ ಇದೇ ಧಾಟಿಯಲ್ಲಿ ಕರ್ಣಾಟಕ ಸಂಗೀತವನ್ನೂ ಹೇಳಿ" ಎಂದು ಅನುಮತಿ ಕೊಟ್ಟಳು. ನನ್ನ ಸಂತೋಷಕ್ಕೆ ಕೊನೆಯೇ ಇಲ್ಲ! ಕಳೆದ ಹದಿನೈದು ವರುಷಗಳಲ್ಲಿ ನಾನು ಕಲಿಪ್ಸೊ ಲ್ಯಾಟಿನ್ ಅಮೆರಿಕದ ಲಘು ಸಂಗೀತ, ಕರ್ಣಾಟಕ ಸಂಗೀತದ ಕೀರ್ತನೆಗಳು ಮತ್ತು ಅನೇಕ ಸಿನಿಮಾ ಹಾಡುಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಲೀಲಾಜಾಲವಾಗಿ ನಿಶಬ್ದವಾಗಿ ಹಾಡಿ ಆನಂದಿಸುತ್ತಿದ್ದೇನೆ. ಮತ್ತು ಮಿಕ್ಕವರಿಗೂ ನನ್ನ ಸಂಗೀತದ ನಿಶ್ಯಬ್ದತೆಯನ್ನು ಅನುಭವಿಸಿ ಆನಂದಿಸುವ ಅವಕಾಶ ಕಲ್ಪಿಸಿಕೊಟ್ಟಿದ್ದೇನೆ. ಇಷ್ಟರಲ್ಲೇ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವನ್ನೂ ಕಲಿಯುವ ಯೋಚನೆ ಇದೆ. ●

